ಸಂ
೧೫

# ಸಂತರ್ಪಣ

ಸಂತ ಅಚ್ಯುತದಾಸರ ಹರಿಕೀರ್ತನೆ — ಗೀತಾಪ್ರವಚನ ಸೇವೆಯ

1978 ಬೆಳ್ಳಿ ಸಂಚಿಕೆ

# ಸಂತರ್ಪಣ

# SOUVENIR

## ಸಂತ ಅಚ್ಯುತದಾಸರ
## ಹರಿಕೀರ್ತನೆ – ಗೀತಾಪ್ರವಚನ

ಸೇವೆಯ

## ಬೆಳ್ಳಿ ಸಂಚಿಕೆ


— ಸಂಪಾದಕರು —

ಶ್ರೀ ಲಕ್ಷ್ಮಣದಾಸ ವೇಲಣಕರ (ಹರಿದಾಸ)
ಪ್ರಾ. ಎಸ್. ವ್ಹಿ. ಭಟ
ಶ್ರೀ ಮಧುಕರ ಕಾಮತ



೫ ಮೇ, ೧೯೭೮

ಮುದ್ರಕರು :
ಪಿ. ಎನ್. ವಜ್ರಕುಮಾರ
ಜೆ. ಎಸ್. ಎಸ್. ಜನತಾ ಪ್ರಿಂಟಿಂಗ ಪ್ರೆಸ್,
ವಿದ್ಯಾಗಿರಿ, ಧಾರವಾಡ-4.

ಬೆಲೆ : ರೂ. ೫ (ಐದು ರೂಪಾಯಿ)

© ಎಲ್ಲ ಹಕ್ಕುಗಳು ಪ್ರಕಾಶಕರ ಸ್ವಾಧೀನ

ಪ್ರಕಾಶಕರು :
ಭಾರತ ಜ್ಯೋತಿ ಟ್ರಸ್ಟ (ರಜಿಸ್ಟರ್ಡ)
1188, ವಿಶ್ವಜ್ಯೋತಿ,
5 ನೇ ಬ್ಲಾಕ, ರಾಜಾಜಿನಗರ
ಬೆಂಗಳೂರ — 560 010

## CONTENTS


Editorial

Messages & Blessings

—ಕನ್ನಡ ವಿಭಾಗ—

| | | |
|---|---|---|
| ಶ್ರೀ ಹರಿಯ ಪರಿಕಾರರು | —ಸಂಪಾದಕರು, ಹಾಗೂ ದಾಸರ ಶಿಷ್ಯ ಭಕ್ತಮಂಡಳಿ | ೧ |
| ಕೀರ್ತನಾಚಾರ್ಯ | —ಶ್ರೀ ಲಕ್ಷ್ಮಣದಾಸ ವೇಲಣಕರ | ೬ |
| ಆರ್ಯ ಸಂಸ್ಕೃತಿ | —ಶ್ರೀ ರಟ್ಟೀಹಳ್ಳಿ ರಾಮಪ್ಪ | ೧೨ |
| ಭದ್ರಗಿರಿಯಿಂದ ಬದರಿ–ಗಿರಿಗೆ | —ಶ್ರೀ ಕಟೀಲ ಗೋವಿಂದ ಪೈ | ೧೫ |
| ಭದ್ರಗಿರಿ ಅಚ್ಯುತದಾಸರ ಸಾಹಿತ್ಯ ಸೇವೆ | —ವಿದ್ವಾನ್. ಕೆ. ವೆಂಕಟರಾಯಾಚಾರ್ಯ | ೧೯ |
| ಹರಿಕಥಾ ಪೂರ್ವರಂಗ | —ಸಂತ ಭದ್ರಗಿರಿ ಅಚ್ಯುತದಾಸರು | ೨೨ |
| ಭದ್ರಗಿರಿ ಅಚ್ಯುತದಾಸರ ಅಚ್ಯುತ ಸೇವೆ | —ಎನ್ಕೆ | ೩೨ |
| ಶ್ರೀ ಸಾಮಾನ್ಯ ಹಿತಕಾರಿ ನಮ್ಮ ಹಿಂದೂ ಸಂಸ್ಕೃತಿ | —ಡಾ. ದಯಾನಂದ ನರಸಿಂಹ ಶಾನಭಾಗ | ೩೮ |
| ದಾಸ ಸಂದೇಶ | —ದಾಸ ವಾಣಿಯಿಂದ | ೪೪ |

– हिन्दी विभाग –

| | | |
|---|---|---|
| संत अच्युत दासजी को जसे मैंने जाना | –श्री उ. लक्ष्मीनारायण किणि | १ |
| कर्नाटक के संत और उनके पंथ | –श्री के. एन्. भट शिराडिपाल | ४ |
| कर्नाटक की संत परम्परा और यह संतर्पण | –प्रा. एस्. व्ही. भट | ७ |

ENGLISH SECTION

| | | |
|---|---|---|
| Life & Mission of Sant Achyutha Dasji | —*Shri. G. N. Krishna Murthy* | 1 |
| Grace of God–How to attain it | —*Shri. K. Ramesh Pai* | 3 |
| Bhadragiri Achyuta Dasaji—Soul Embracing Personality | —*Shri. S. K. Brahmananda Prabhu* | 6 |
| Kirtanagresara Achyuta Dasaji | —*Shri. Madhu A. Kamat* | 8 |

PHOTO ALBUM

Photographs depicting Various Aspects of Life Mission of Sant Achyuta Dasaji

*APPENDIX*

Bharath Jyothi Trust—Aims, Rules & Regulations

## LIST OF ADVERTISEMENTS


| | | |
|---|---|---|
| 1. | M/s. Shah Rasiklal Manilal, Bombay | 1 |
| 2. | G. V. Bhatt, Bombay | 1 |
| 3. | S. K. Agencies, Bombay | 1 |
| 4. | M/s. Shah Timber Traders, Bombay | 1 |
| 5. | Kalyanaji Ramaji & Company, Bombay | 2 |
| 6. | Shenoy & Co. Bangelore | 2 |
| 7. | Syndicare Bank Manipal | 3 |
| 8. | Indokem Ltd., Bombay | 3 |
| 9. | West Coast Lighterage Co., Bombay | 4 |
| 10. | Mangalore Ganesh Beedi Works, Mysore | 5 |
| 11. | Taj Mahal Hotel, Secunderabad | 6 |
| 12. | Canara Bank, Bangalore | 7 |
| 13. | Ashok Trading Corporation, Coimbatore | 8 |
| 14. | Karnataka Bank Limited, Goa | 8 |
| 15. | A. Geeri Pai, Cochin | 9 |
| 16. | Bangalore Art Studio, Bangalore | 9 |
| 17. | Nayak & Company, Bangalore | 10 |
| 18. | M/s. Priyadarshini Filaments, Bangalore | 10 |
| 19. | Society of Shri Katyayani, Ankola | |
| 20. | Mangalore P. V. S. Beedies, Mangalore | Cover Back |

## *Editorial*

It is indeed a proud privilege for us to associate ourselves with the publication of this Souvenir to Commemorate the Silver Jubilee of Sant Achyutdasji's Haridasa Deeksha.

It is needless to say that this 'Santarpana' ( Souvenir ) is a product of enormous encouragement, support, help and co-operation extended by the dedicated devotees of Sant Achyutdasji. "Better late than never"—it is before the devotees. In the very words of Swami Chinmayanand, we would like to express :

"The Secret Vein of energy that runs in every one of us is struck, not through pills and elixirs, but through dedicated actions. Selfish actions drain our energy. Actions dedicated unto the feet of the Lord, or for the matter of that, unto any higher cause, generate enegy and ginger up enthusiasm in man"

We are indeed very fortunate in having the Blessings of Swamijis of revered Religious Institutions and Muths of our Country. We are also fortunate in getting the messages from the important personalities of our Country.

We have been able to publish a few thought provoking Articles of Bhakti Cult and Heritage of Haridasas. We hope our beloved devoted eaders will appreciate and enjoy these articles, some of which will throw, light on the Devoted Life of Sant Achyuta Dasaji.

We express our thanks to all the Advertisers, Authors, Patrons, Bhiksha Kartas and all those who have helped us financially to make this Souvenir a success.

Our heartiest thanks are due to the Prin. N. Vajra Kumar, Janata Printing Press, Vidyagiri, Dharwar for printing this Souvenir so nicely.

Last but not the least, we convey our hearty thanks to all those who have co-operated in bringing out this Souvenir so beautifully.

May we request our friends to excuse us for the shortcomings in the Souvenir and we hope that they will continue to help us in our future programme also.

May every one possess and preserve a copy as a momento of the Silvar Jubilee completion of Haridas Deeksha by Sant Achyuta Dasaji.

*—Editors*

ಬಂಗಾರು ಪೇಟೆಯ ಭಕ್ತಾದಿಗಳಿಂದ 'ಟ್ರಸ್ಟಿಗೆ' ಸಂಗ್ರಹೀತವಾದ ನಿಧಿ.

| | | | |
|---|---|---|---|
| 1) | ಶ್ರೀಮತಿ G. K. ಕೃಷ್ಣವೇಣಿ ಮತ್ತು<br>ಶ್ರೀ G. N. ಕೃಷ್ಣಮೂರ್ತಿ | — | Rs. 500—00 |
| 2) | ಶ್ರೀಮತಿ ಲಕ್ಷ್ಮೀಕಾಂತಮ್ಮಾ<br>ಶ್ರೀಮತಿ ರಾಜಮ್ಮಾ ಮತ್ತು<br>ಶ್ರೀ ಅಶ್ವತ್‌ನಾರಾಯಣ ಶೆಟ್ಟಿ | — | Rs. 500—00 |
| 3) | M. R. ಸೋಮಸುಂದರಮ್ | — | Rs. 250—00 |
| 4) | ಶ್ರೀ ಗೀತಾ ಮಹಿಳಾ ಸಂಘ | — | Rs. 250—00 |
| 5) | K. M, ಅನಂತ ಕೃಷ್ಣ ಶೆಟ್ಟಿ & ಬ್ರದರ್ಸ್ | — | Rs. 250—00 |
| 6) | S. V. ರಾಮಯ್ಯ ಶೆಟ್ಟಿ & ಸನ್ಸ್ | — | Rs. 250-00 |
| 7) | D. S. ವೆಂಕಟಾಚಲಪತಿ ಶೆಟ್ಟಿ & ಸನ್ಸ್ | — | Rs, 250—00 |
| 8) | V. R, ರಾಜಗೋಪಾಲ ಶೆಟ್ಟಿ & ಸನ್ಸ್ | — | Rs. 116—00 |
| 9) | S. A. ರಾಮಚಂದ್ರ ಶೆಟ್ಟಿ | — | Rs. 105—00 |
| 10) | P. S. ಲಕ್ಷ್ಮೀನಾರಾಯಣ ಶೆಟ್ಟಿ & ಬ್ರದರ್ಸ್ | — | Rs. 105—00 |
| 11) | T. ವೆಂಕಟಯ್ಯ ಶೆಟ್ಟಿ & ಸನ್ಸ್ | — | Rs. 105—00 |
| 12) | K. R. ನಂಜಪ್ಪ ಶೆಟ್ಟಿ & ಸನ್ಸ್ | — | Rs. 105—00 |
| 13) | K. T. ವೆಂಕಟೇಶ ಶೆಟ್ಟಿ & ಸನ್ಸ್ | — | Rs. 100—00 |
| 14) | S. A. ಗೋಪಾಲ ಶೆಟ್ಟಿ | — | Rs. 50—00 |
| 15) | ಸಾರ್ವಜನಿಕರಿಂದ ( ಜನರಲ್ ಕಲೆಕ್ಷನ್ ) | — | Rs. 401—00 |
| | | | Rs. 3337—00 |

# ಆದರ್ಶ ದಂಪತಿ

ಶ್ರೀ ದಾಸರು

ಧರ್ಮಪತ್ನಿ ಸೌ।। ಶ್ರೀಮತಿ

ಸಂಸಾರದಲ್ಲಿದ್ದು ಸಂಸಾರಿಗರಿಗೆ—ಅವರ ಆದರ್ಶ, ಕರ್ತವ್ಯ ಹಾಗೂ ನಡತೆಗಳ ಅರಿವು ಮಾಡಿಕೊಟ್ಟು — ಭಗವತ್ ಉಪಾಸನೆ ಮಾಡಲು ಪ್ರೇರಣೆ ಕೊಡುವ ಈ ಆದರ್ಶ ದಂಪತಿಗಳಿಗೆ ಪರಮಾತ್ಮನು ಸದಾ ಸುಖ-ಶಾಂತಿ-ಸಮೃದ್ಧಿಗಳನ್ನು ದಯಪಾಲಿಸಲಿ.

SECRETARY
TO THE VICE-PRESIDENT OF INDIA
NEW DELHI-110011

March 12, 1976

## Message

The Vice-President is glad to know that you are bringing out a Souvenir 'Santarpana'. He sends his best wishes for the success of the publication.

Yours faithfully,

*Sd/-*

(V. Phadke)

GOVERNMENT OF KARNATAK

**D. DEVARAJ URS**
CHIEF MINISTER

VIDHANA SOUDHA, BANGALORE-1

DATED : 17th March, 1976

## Message

I am happy to learn that the Haridasadeeksha Rajathotsava Nidhi Samarpana Samiti is bringing out a Souvenir to commemorate the Silver Jubilee of Sant Achyutadas' Haridasa Deeksha and to raise funds for the publication of his works.

Sant Bhadragiri Achyutadas has been hailed as the ''Keerthanagresara'' and ''Keerthanacharya'' for his pre-eminence as a master-artist of Harikatha. Down the ages, this traditional elucidation of Dharma being interlarded with musical composition has proved infinitely popular in India because of its devotional and didactic richness. Indeed it is to the genius of Sant Achyutadas and his illustrious brothers for resuscitating and redeeming this art of musical exegesis of Dharma to the former glory enjoyed in the old days and also making it popular in the West.

I send my greetings and best wishes.

*D. Devaraj Urs*

## ಶುಭ ಸಂದೇಶ

ಶ್ರೀಮತ್ಸಕಲ — ಸುರನಿಕರ — ಮುಕುಟಮಣಿರಂಜಿತ — ದಿವ್ಯ
ಶ್ರೀರಾಮದೇವ ಶ್ರೀವೀರವಿಟ್ಠಲ—ಚರಣಕಮಲ ಸಂತತಾನುರಾಧಕ
ಶ್ರೀಸಂಸ್ಥಾನ ಗೋಕರ್ಣ—ಪರ್ತಗಾಳೀ—ಜೀವೋತ್ತಮ ಮಠಾಧೀಶ
ಶ್ರೀಮದಿಂದಿರಾಕಾಂತತೀರ್ಥ ಶ್ರೀಪಾದವಡೇರ ಕರಕಮಲಸಂಜಾತ
ಶ್ರೀಮತ್ಕಮಲಾನಾಥತೀರ್ಥ ಶ್ರೀ ಪಾದವಡೇರವರ ಕುಮಾರಕ
ಶ್ರೀ ಮದ್ ದ್ವಾರಕಾನಾಥ ತೀರ್ಥ ಶ್ರೀ ಪಾದಂಗಳವರು

ವರಕುಮಾರಕ ಶ್ರೀಮದ್ ವಿದ್ಯಾಧಿರಾಜತೀರ್ಥ ಶ್ರೀಪಾದವಡೇರ ಸ್ವಾಮಿಭಿ:

ಅತ್ಯಂತ ಪ್ರಿಯ ಶಿಷ್ಯವರ್ಗಾಂತರ್ಗತ ಕೀರ್ತನಾಗ್ರೇಸರ, ಕೀರ್ತನಾಚಾರ್ಯ ಸಂತ ಭದ್ರಗಿರಿ ಅಚ್ಯುತ ದಾಸರ ಹರಿದಾಸದೀಕ್ಷಾ ಸ್ವೀಕಾರದ ರಜತೋತ್ಸವ ಸ್ಮರಣ ಸಂಚಿಕಾ ಪ್ರಕಾಶನ ಸಮಿತಿ ಸದಸ್ಯ ಲಕ್ಷ್ಮಣ ವೇಲಣಕರ ಇವರಿಗೆ—

ಶ್ರೀಮನ್ನಾರಾಯಣ ಸ್ಮರಣಪೂರ್ವಕ ಆಶೀರ್ವಾದಗಳು

ಆದ್ಯ ಶ್ರೀ ಶಕೆ ೧೮೯೮ ನೇ ನಳ ಸಂ, ದ ಚೈತ್ರ ಶು೧ ಪರ್ಯಂತ ಶ್ರೀ ಸಂಸ್ಥಾನದ ಮುಕ್ಕಾಮು ಶ್ರೀಪರ್ತಗಾಳಿಮಠದಲ್ಲಿ ಶ್ರೀರಾಮದೇವ ಶ್ರೀವೀರವಿಟ್ಠಲ ಸನ್ನಿಧಿಯಲ್ಲಿ ಇರುತ್ತಿದ್ದು ನೀವು ನಮ್ಮ ಯೋಗಕ್ಷೇಮವನ್ನರಿತು ನಿಮ್ಮ ಕಡೆಯ ಕ್ಷೇಮಸಮಾಚಾರಗಳ ಬಗ್ಗೆ ಬರೆಯುತ್ತಿರಬೇಕು.

ನಿಮ್ಮ ಪರವಾಗಿ ಎಂ. ಎಲ್. ಭಟ್ಟರು ಕಳುಹಿಸಿ ಕೊಟ್ಟ ವಿನಂತಿ ಪತ್ರ ಬಂದು ತಲುಪಿ ಅಭಿಪ್ರಾಯ ತಿಳಿಯಲಾಯಿತು. ನೀವು ಸಂತ ಭದ್ರಗಿರಿ ಅಚ್ಯುತದಾಸರ 'ಹರಿದಾಸದೀಕ್ಷಾ ಸ್ವೀಕಾರ' ರಜತೋತ್ಸವದ ಅಂಗವಾಗಿ 'ಸ್ಮರಣ ಸಂಚಿಕೆ' ಪ್ರಕಟಿಸಬೇಕಾಗಿ ಮಾಡಿದ ಆಲೋಚನೆಯು ಯೋಗ್ಯ ವಾಗಿದೆ. ಹರಿಕೀರ್ತನೆಯನ್ನೇ ಮುಖ್ಯ ಕರ್ತವ್ಯವನ್ನಾಗಿಟ್ಟುಕೊಂಡು ಶ್ರೀಹರಿಯ ಅವತಾರ ಲೀಲೆ ಗಳನ್ನೂ, ಹರಿಭಕ್ತರ ನಿಃಸ್ವಾರ್ಥ ಜೀವನವಿಧಾನಗಳನ್ನೂ ಕಥಾರೂಪದಿಂದ ಸುಲಲಿತವಾಗಿಯೂ ಬೋಧಿಸಿ ಸಕಲರಿಗೂ ಮನದಟ್ಟಾಗುವಂತೆ ಮಾಡಿ ಪರಮಾತ್ಮನಲ್ಲಿ ಅಚಲವಾದ ಅನನ್ಯಭಕ್ತಿಯುಂ-ಟಾಗುವಂತೆಯೂ ತನ್ಮೂಲಕ ಸರ್ವಜನೋದ್ಧಾರವಾಗುವಂತೆ ಮಾಡುವ ಹರಿದಾಸರ ಕಾರ್ಯವು ಮಹತ್ತರವಾದುದು. ಅದನ್ನು ತ್ರಿಕರಣಪೂರ್ವಕವಾಗಿ ಸಾಧಿಸುವ ಸಂತ ಅಚ್ಯುತದಾಸರಿಗೆ ಪರಮಾತ್ಮನ ಅನುಗ್ರಹದಿಂದ ದೀರ್ಘಾಯುರಾರೋಗ್ಯ ಪ್ರಾಪ್ತವಾಗಿ ಅವರ ಹರಿಕಥಾ ಪ್ರವೃತ್ತಿಯು ಇತೋಪ್ಯತಿ-ಶಯವಾಗಿ ಬೆಳೆದು ಕೀರ್ತಿಕರವಾಗಲೆಂದೂ ಶ್ರೀರಾಮದೇವ ವೀರವಿಟ್ಠಲ ಚರಣಾರವಿಂದಗಳಲ್ಲಿ ಪ್ರಾರ್ಥಿಸೋಣಾಗುತ್ತದೆ.

ಶ್ರೀಮದ್ ವಿದ್ಯಾಧಿರಾಜತೀರ್ಥ ಶ್ರೀಪಾದವಡೇರ ಸ್ವಾಮಿ

## GOWDA SARASWATH BRAHMANA SABHA, MYSORE

(Regd.)

(Reg. S. No. 35/65-66 Mysore.)

**2250, Jhansi Lakshmibai Cross Road,**

*(Behind Hotel Metropole)*

MYSORE-570005

*Date 8-4-1976*

**ಶುಭ ಸಂದೇಶ**

ಅನುದಿನವೂ ನೀವು ಭಗವಂತನ ಮಹಿಮೆಯನ್ನು ಕೀರ್ತನಾರೂಪದಲ್ಲಿ ಬೋಧಪ್ರದವಾಗಿ ತಿಳಿಸುವ ಮಹಾ ಪುಣ್ಯಪ್ರದ ಸತ್ಕಾರ್ಯವನ್ನು ಕೈಗೊಂಡಿರುತ್ತೀರಿ. ಪರಮಾತ್ಮನ ಮಹಿಮೆ ಮತ್ತು ಅವನ ದಿವ್ಯ ನಾಮಾಮೃತದ ಸವಿಯನ್ನು ಬಲ್ಲವರೇ ಬಲ್ಲರೆಂದು ಸಂತರೂ, ದಾಸರೂ ಹಾಡಿದ್ದಾರೆ. ಈ ಸವಿಯನ್ನು ಬಲ್ಲ ನೀವು ಅದನ್ನು ಜನ ಸಾಮಾನ್ಯರಿಗೆ ಕೀರ್ತನಾರೂಪದಲ್ಲಿ ಉಣಿಸಿ ಅವರಲ್ಲಿರುವ ಅಜ್ಞಾನ ಮತ್ತು ಮೂಢತೆಯನ್ನು ಓಡಿಸಲು ಸಹಾಯಕರಾಗಿದ್ದೀರಿ. ಶಾಶ್ವತವಾದ ಸುಖಶಾಂತಿಗಳಿಗೆ ಪರಮಾತ್ಮನ ದಿವ್ಯನಾಮ ಸ್ಮರಣೆಯೊಂದೇ ಸಾಧನವೆಂಬುದನ್ನು ಲೋಕಕ್ಕೆ ಬೋಧಿಸುವುದರ ಮೂಲಕ ನಿರಂತರವೂ ಪರಮಾತ್ಮನ ಮತ್ತು ಧರ್ಮದ ಸೇವೆಮಾಡುವ ಭಾಗ್ಯವು ನಿಮಗೆ ದೊರೆತಿದೆ. ಭಗವತ್ಸಂದೇಶವನ್ನು ಕೀರ್ತನೆಯ ಮೂಲಕ ಜನರಿಗೆ ಕೊಡುತ್ತಿರುವ ನೀವು ದೇವ ಋಷಿಗಳಾದ ನಾರದ ಮುನಿಗಳ ಪಂಥದವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಚಿಕ್ಕ ವಯಸ್ಸಿನಲ್ಲಿಯೇ ದಾಸದೀಕ್ಷೆಯನ್ನು ಪಡೆದ ನೀವು ಪರಮಾತ್ಮನನ್ನು ಸತತವಾಗಿ ಚಿಂತನ ಮತ್ತು ಮನನ ಮಾಡಿದುದರ ಫಲದಿಂದ ಶ್ರೇಷ್ಠದಾಸರೆಂದು ದೇಶಾದ್ಯಂತ ಕೀರ್ತಿಯನ್ನು ಪಡೆದಿರುತ್ತೀರಿ. ನಿಮ್ಮ ಅನುಜರಾದ ಸಂತ ಶ್ರೀ ಕೇಶವದಾಸರು ಪ್ರಪಂಚಾದ್ಯಂತ 10 ಬಾರಿ ಪರ್ಯಟನ ಮಾಡಿ ಸನಾತನ ಧರ್ಮದ ಸಂದೇಶವನ್ನು ಜಗತ್ತಿಗೆ ಸಾರಿದ ಅಗ್ರಗಣ್ಯರಾಗಿದ್ದಾರೆ. ನಿಮ್ಮ ಭ್ರಾತೃಗಳೂ ಕೂಡ ನಿಮ್ಮನ್ನು ಅನುಸರಿಸುವುದರ ಮೂಲಕ ನೀವೆಲ್ಲರೂ ದಾಸಕುಟುಂಬಕ್ಕೆ ಸೇರಿದವರಾಗಿದ್ದೀರಿ.

ನೀವು ಮಾಡುತ್ತಿರುವ ಸೇವೆಯಿಂದ ಪ್ರಸನ್ನಚಿತ್ತರಾದ ಶ್ರೀ ಸಂಸ್ಥಾನ ಕಾಶೀಮಠದ ಪರಮಪೂಜ್ಯ ಗುರುಗಳಾದ ಶ್ರೀ ಮತ್ಸುಧೀಂದ್ರತೀರ್ಥ ಶ್ರೀಪಾದಂಗಳವರೂ ನಿಮಗೆ ಕೀರ್ತನಾಗ್ರೇಸರ ಎಂಬ ಬಿರುದನ್ನು ಕೊಟ್ಟು ಆಶೀರ್ವದಿಸಿರುತ್ತಾರೆ. ಹಾಗೆಯೇ ಶ್ರೀ ಸಂಸ್ಥಾನ ಗೋಕರ್ಣ-ಪರ್ತಗಾಳಿ ಜೀವೋತ್ತಮ ಮಠಾಧೀಶರು ನಿಮಗೆ ಕೀರ್ತನ ರತ್ನ ಎಂಬ ಬಿರುದನ್ನು ಕೊಟ್ಟು ಆಶೀರ್ವದಿಸಿರುತ್ತಾರೆ. ನೀವೂ ನಿಮ್ಮ ಭ್ರಾತೃವರ್ಗದವರೂ ಪ್ರತಿ ದಿನವೂ ಧರ್ಮದ ಸೇವೆ ಮಾಡುವುದರ ಮೂಲಕ ಧರ್ಮದ ವಿಜಯವನ್ನೇ ಸಾಧಿಸಿ ತನ್ಮೂಲಕ ಧರ್ಮದ ಕೀರ್ತಿಯನ್ನು ಎತ್ತಿ ಹಿಡಿದು ದೇಶದ, ಜನರ ಮತ್ತು ಸಮಾಜ ಬಾಂಧವರ ಪ್ರೀತ್ಯಾದರ ಮತ್ತು ಗೌರವಗಳಿಗೆ ಪಾತ್ರರಾಗಿರುತ್ತೀರಿ.

ಸಮಾಜವು ನಿಮ್ಮನ್ನು ಚಿರಕಾಲ ಸ್ಮರಿಸುವುದಲ್ಲದೇ ಇತಿಹಾಸವು ನಿಮ್ಮನ್ನು ದಾಸವರೇಣ್ಯರ ಪಂಕ್ತಿಯಲ್ಲಿ ಗಣಿಸುವುದರಲ್ಲಿ ಸಂಶಯವಿಲ್ಲ.

ದಾಸದೀಕ್ಷೆಯನ್ನು ಕೈಗೊಂಡು ಇದೀಗ 25 ವರ್ಷಗಳು ಕಳೆದಿರುವ ಈ ಸಂಧರ್ಭದಲ್ಲಿ ನಿಮ್ಮ ಅಭಿಮಾನಿ ಮಿತ್ರರೂ, ಹಿತೈಷಿಗಳೂ, ಒಟ್ಟುಗೂಡಿ ದಾಸದೀಕ್ಷಾ ರಜತೋತ್ಸವವನ್ನು ಆಚರಿಸುವ ಸಿದ್ಧತೆಗಳು ನಡೆಯುತ್ತಿರುವುದನ್ನು ಕೇಳಲು ಸಂತೋಷವಾಗುತ್ತದೆ. ಇದು ಯುಕ್ತವೂ ಸಕಾಲಿಕವಾಗಿಯೂ ಇರುವುದು. ಸತತವಾಗಿ 25 ವರ್ಷಗಳಲ್ಲಿ ನೀವು ಗಳಿಸಿದ ಪಣದಲ್ಲಿ ಭಾಗಿಗಳಾಗಲು ನಾವು ಇಚ್ಛಿಸುತ್ತೇವೆ. ದಾಸದೀಕ್ಷಾ ಸ್ವರ್ಣೋತ್ಸವ ಹಾಗೂ ವಜ್ರೋತ್ಸವಗಳನ್ನು ಆಚರಿಸುವ ಮಹಾಯೋ-ಗವು ನಿಮಗೂ ನಿಮ್ಮ ಅಭಿಮಾನಿಗಳೆಲ್ಲರಿಗೂ ಕರುಣಿಸಲೆಂದು ಭಗವಂತನನ್ನು ಪ್ರಾರ್ಥಿಸುತ್ತೇವೆ.

ಶ್ರೀ ಸಂಸ್ಥಾನ ಕಾಶೀಮಠದ ಯತಿವರ್ಯ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರ ನಳ ಸಂವತ್ಸರದ ವಸಂತೋತ್ಸವವು ಮೈಸೂರಿನಲ್ಲಿ ನಡೆಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೇ. ಈ ಸಂದರ್ಭದಲ್ಲಿ ಏರ್ಪಡಿಸಿದ ನಿಮ್ಮ ಹರಿಕೀರ್ತನೆಗಳನ್ನು ಕೇಳಿ ನಾವು ಆನಂದಭರಿತರಾಗಿದ್ದೇವೆ. ನಿಮಗೆ ವಸಂತೋತ್ಸವ ಸಮಿತಿಯ ಪರವಾಗಿ ಕೃತಜ್ಞತೆಯನ್ನು ಸೂಚಿಸುತ್ತ, ನಿಮ್ಮ ಉತ್ತರೋತ್ತರ ಕಲ್ಯಾಣ, ದೀರ್ಘಾಯುರಾರೋಗ್ಯ ಐಶ್ವರ್ಯ ಮತ್ತು ಸಕಲವಿಧವಾದ ಸನ್ಮಂಗಳಗಳಿಗಾಗಿ ಶ್ರೀ ವ್ಯಾಸ-ರಘುಪತಿ ದೇವರಲ್ಲಿ ಪ್ರಾರ್ಥಿಸಿ ದೇವರ ಪ್ರಸಾದ ರೂಪವಾಗಿ ಮತ್ತು ನಮ್ಮೆಲ್ಲರ ಪ್ರೀತಿಯ ಸಂಕೇತವಾಗಿ ಶ್ರೀಗಳವರ ದಿವ್ಯಹಸ್ತದಿಂದ ಅವರ ಆಶೀರ್ವಾದದೊಡನೆ ಈ ಸನ್ಮಾನವನ್ನು ಕೊಡಲು ಸಂತೋಷಿಸುತ್ತೇವೆ.

ಅಧ್ಯಕ್ಷ ಮತ್ತು ಸದಸ್ಯರು,
**ಗೌಡ ಸಾರಸ್ವತ ಬ್ರಾಹ್ಮಣ ಸಭಾ, ಮೈಸೂರು**

॥ ಶ್ರೀ ಗುರುಭ್ಯೋ ನಮಃ ॥

SRIMAD
**SUDHINDRA THIRTHA SWAMI**
KASI MUTT SAMSTHAN
BANARAS

*Camp :* G. S. B. Sabha
Mysore

## ಶುಭ ಸಂದೇಶ

ಭಾರತ ಜ್ಯೋತಿ ಪ್ರಕಾಶನ ಎಂಬ ಟ್ರಸ್ಟಿಗೆ ಧನ ಸಂಗ್ರಹ ಮಾಡುವ ಉದ್ದೇಶದಿಂದ ಪ್ರಕಟಿಸಲಿರುವ ಸಂತರ್ಪಣ ಎಂಬ ಸ್ಮರಣ ಸಂಚಿಕೆಗೆ ಕೊಡೋಣಾಗುವ ಆಶೀರ್ವಾದ ವ ಸಂದೇಶ:

ಅಸ್ಮತ್ ಪರಮ ಪ್ರಿಯ ಶಿಷ್ಯರಾದ ಶ್ರೀ ಅಚ್ಯುತದಾಸರು ಸಂಸ್ಥಾನದಿಂದ ಆದೇಶ ವ ಉಪದೇಶ ಪಡೆದು ಶ್ರೀ ಹರಿಗುರುಗಳವರ ಸೇವಾರೂಪವಾಗಿ ಶ್ರೀ ಹರಿಪಾದದಲ್ಲಿ ಪ್ರಾರ್ಥನೆ ಮಾಡಿದ ಫಲವಾಗಿ ಶ್ರೀ ಹರಿ ಕೃಪೆಯಿಂದ ಲಬ್ಧವಾದ ಭಗವತ್ ಮಹಾತ್ಮ್ಯೆ ಜ್ಞಾನವನ್ನು ಲೋಕಕ್ಕೆ ಭೋಧಿಸಲು ಹರಿಕೀರ್ತನೆಯನ್ನು ಪ್ರಾರಂಭಿಸಿದರು. ನಿರ್ಮಲ ವಿಚಾರದಿಂದ ಮಾಡಿದ ಹರಿಕೀರ್ತನೆ ಯಿಂದ ಸಂತುಷ್ಟರಾದ ಶ್ರೀ ಹರಿಯ ಅನುಗ್ರಹದಿಂದ ಹರಿಕೀರ್ತನೆ ಮಾಡುವವರಲ್ಲಿ ಅಗ್ರಗಣ್ಯರಾದರು, ದೊಡ್ಡ ಕೀರ್ತಿಗಳಿಸಿದರು.

ಮಾತ್ರವಲ್ಲ, ನಾನಾ ವಿಧವಾಗಿ-ಎಂದರೆ ದಾಸಾಶ್ರಮ, ಪುರಂದರ ವಿಠಲ ಮಂದಿರ ಇತ್ಯಾದಿ ಸಂಸ್ಥೆಗಳನ್ನು ರಚಿಸಿ ಹರಿಕಥಾ ಕೀರ್ತನಾ ಕಲೆಯನ್ನು ಬಹು ಮಂದಿ ಜನರಿಗೆ ಉದ್ಬೋಧಿಸಿ ಬಹಳ ವಾಗಿ ಹರಿಭಕ್ತಿ ಪ್ರಸಾರ ಮಾಡುವ ಭಾಗ್ಯ ಪಡೆದಿದ್ದಾರೆ. ಈಗಲೂ ಇವೆಲ್ಲವೂ ಶ್ರೀ ಹರಿಗುರು ಪ್ರಸಾದವೆಂಬ ಸದ್ಭಾವನೆ ದೃಡವಾಗಿ ಇಟ್ಟುಕೊಂಡು ಪವಿತ್ರ ವಿಚಾರದಿಂದ ಹರಿಭಕ್ತಿ, ಸನಾತನ ಧರ್ಮ, ಪವಿತ್ರ ಜೀವನ ನಡೆಸುವ ಕ್ರಮ, ಇತ್ಯಾದಿ ಲೋಕೋಪಕಾರದ ವಿಷಯಗಳನ್ನು ಪ್ರಚಾರ ಮಾಡುತ್ತಾ ಇದ್ದಾರೆ. ಈಗ ಶ್ರೀ ಹರಿಭಕ್ತಿ ಪ್ರಚಾರವನ್ನೇ ಜೀವಿತವಾಗಿ ನಡೆಸಿ ವೃದ್ಧರಿಗೆ ಕೂತು-ಕೊಂಡು ಶ್ರೀದತ್ತ ಅನುಭವ ಜ್ಞಾನದಿಂದ ಜ್ಞಾನ, ಭಕ್ತಿ ವೈರಾಗ್ಯಾದಿ ಸದ್ವಿಷಯಗಳಲ್ಲಿ ಪುಸ್ತಕ ಲೇಖನಾದಿಗಳನ್ನು ಬರೆದು ಜೀವನ ನಡೆಸಲು ಅನುಕೂಲವಾಗುವಂತೆ ಭಾರತ ಜ್ಯೋತಿ ಪ್ರಕಾಶನ ಟ್ರಸ್ಟ ಎಂಬ ಸಂಸ್ಥೆಯನ್ನು ಮಾಡಲು ನಿರ್ಧರಿಸಿದ್ದಾರೆ. ಅದಕ್ಕೆ ಧನ ಸಂಗ್ರಹವಾಗುವಂತೆ ಒಂದು **ಸ್ಮರಣ ಸಂಚಿಕೆ** ಪ್ರಕಟಿಸುತ್ತಾರೆ. ಉದ್ದಿಷ್ಟ ಕಾರ್ಯ ಪೂರ್ಣ ಯಶಸ್ವಿಯಾಗಿ ನಡೆದು, ಸಂಕಲ್ಪಿಸಿದ ಕಾರ್ಯವು ಬಹಳ ವಿಶೇಷವಾಗಿ ಆಗುವ ಹಾಗೆಯೂ, ಈ ಶುಭಕಾರ್ಯದಲ್ಲಿ ಭಾಗಿಗಳಾಗುವವರೆಲ್ಲ ರಿಗೂ ಸಕಲ ಸೌಭಾಗ್ಯ ಪ್ರಾಪ್ತಿಯಾಗುವಂತೆಯೂ, ಶ್ರೀ ವ್ಯಾಸ ರಘುಪತಿ ದೇವರು ಪೂರ್ಣವಾಗಿ ಅನುಗ್ರಹ ಮಾಡಲೆಂದು ಪ್ರಾರ್ಥಿಸಿ ಎಲ್ಲರಿಗೂ ಶುಭವನ್ನು ಹಾರೈಸುತ್ತೇವೆ.

**—ಶ್ರೀಮದ್ ಸುಧೀಂದ್ರತೀರ್ಥ ಸ್ವಾಮಿ ಶ್ರೀಪಾದಂಗಳ್**

॥ श्री ॥

अंक :- ९६० शके १८९७

दि. १०-३-१९७६

**श्रीमत्परमहंस परिव्राजकाचार्य पदवाक्यप्रमाणपारावारपारीण यम नियमासन प्राणायाम प्रत्याहार ध्यानधारणासमाध्यष्टांग योगानुष्ठानगरिष्ठानादिगुरुपरम्पराप्राप्त निगमागम-सार श्रुतिमार्गप्रकाशक सर्वतंत्र स्वतंत्र श्रीमज्जमदग्नितनुज तपस्वाध्यायाद्यर्थ विनिर्मित शूर्पारक महाक्षेत्र गोमंताचल गोमतीतीरसन्निहित कुशस्थलीनगर महामठादिप्रतिष्ठा-पनाचार्य सकलसुरमुकुटमणिनीराजित दिव्य श्रीभवानीशंकरपादारविन्दाराधक श्रीमदात्मा-नन्दसरस्वतीकरकमलसंजात श्रीमत्पूर्णानंदसरस्वत्यनुगृहीत श्रीमत्सच्चिदानन्दसरस्वती श्रीपादै :**

अस्मदत्यन्तप्रेमास्पदीभूत श्रीमदुमारवणचरणारविन्द भक्तिपरायण शिष्यवर्य श्रीया-विराजित राज्यमान्य राजश्री लक्ष्मणदास वेलणकर अच्युतदास हरिदास दीक्षग्रहण रौप्यमहोत्सव समिती बेंगळूर निवासिषु कृतनारायणस्मरणपूर्विकाशिषः समुल्लसन्त्वद्य शके १८९७ राक्षस नाम संवत्सरे फाल्गुन शु॥ ९ मी गुरुवासरावधि श्री कैवल्यमठे कुशलिनः स्मः भवदियानामनामयत्वमनुदिनमेधमानमाशास्महे ॥ विशषस्तु :-

प्रस्तुत आज्ञापत्रास कारण आपले दि. ३-३-१९७६ चें विनंतीपत्र संस्थानी मिळून आपण **संत अच्युतदास** यांचा हरिदास दीक्षाग्रहण रौप्यमहोत्सव साजरा करणार इत्यादि सविस्तर आशय समजल्यावरून समाधान वाटले. तरी सदर समारम्भ निर्विघ्नपणें यथा सांग पार पडावा संत अच्युतदास यांना दीर्घायुरारोग्य लाभून त्यांचेकडून समाजाला उत्तरोत्तर मार्गदर्शन मिळावे तेणे करून समस्त समाजाचे निरंतर कल्याण व्हावें यद्विषयीं श्रीसंस्थानाराध्य दैवत श्री भवानीशंकर चरणीं प्रार्थना करून गंध-प्रसाद पाठविला आहे. तसेंच श्री संस्थान देवतेचेही शुभाशीर्वाद आहेत. सुज्ञेषु किं बहुना लेखनेन इति नारायणस्मरणम्.

श्री श्री शृंगेरी जगद्गुरु महासंस्थानम्, शारदापीठम्
शृंगेरी कडूर कर्नाटक राज्यम्

**PRIVATE SECRETARY**
To His Holiness the Jagadguru
Mahaswamigalavaru of Sringeri Math
SARADA PEETHAM
P. O. Sringeri (Kadur) 577139 Karnataka State

*Camp :* Sringeri

*Date : 9-3-1976*

*Ref. No· 1508/T6*

**Message**

Your invitation for the Silver Jubilee celebrations on Haridasadeeksha of Sri Bhadragiri Achyuthadasa, was submitted to His Holiness with your Pranams.

His Holiness blesses for success of the Silver Jubilee celebrations of Haridasa Deeksha of Sri Bhadragiri Achyutha Dasa, and that he may live long to perform Keerthanas as was done during last 25 years. so that the Asthikas have Dharmajagrithi.

Asir Mantrakshathas with Sri Sarada Sri Chandramouleswara Prasadas are enclosed.

Yours sincerly,

*Sd/*

Private Secretary

ಶ್ರೀ ಎಡನೀರು ಮಠ ಕಾಸರಗೋಡು

ಎಡನೀರು

## ಶುಭ ಸಂದೇಶ

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣಯಮನಿಯ ಮಾನಸ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧಿ ಮುಖ್ಯಾಷ್ಟಾಂಗ ಯೋಗ ನಿರತ ತಪಶ್ಚಕ್ರ ವರ್ತ್ಯನಾದ್ಯಂತ ಗುರು ಭೂಮಂಡಲಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ವೈದಿಕ ಮಾರ್ಗ ಪ್ರವರ್ತಕ ವೇದ ವೇದಾಂತ ಪಾರಗ ಷಣ್ಮತೋದ್ಧಾರಕ ತತ್ವಮಸಿ ಮಹಾವಾಕ್ಯಾರ್ಥ ನಿರ್ಣಾಯಕ ದಂಡಾಬ್ಧಿ ಕುಂಭೋದ್ಭವ ಈಷಣ ತ್ರಯಾದಿ ವಿಷಯ ಕಲ್ಪಾಂತರುದ್ರಾವತಾರ ಶ್ರೀ ಮಚ್ಛಂಕರಾಚಾರ್ಯ ಮುಖ್ಯ ಶಿಷ್ಯ ಶ್ರೀ ತೋಟಕಾಚಾರ್ಯ ಪರಂಪರಾಗತ ಶ್ರೀ ಶಂಕರ ಪಶ್ಚಿಮ ಮಠಾಧಿವಾಸ ಶ್ರೀ ದಕ್ಷಿಣಾಮೂರ್ತಿ ಗೋಪಾಲಕೃಷ್ಣ ದೇವಪಾದ ಪದ್ಮಾರಾಧಕ ಶ್ರೀ ಮದದ್ವೈತ ಮತಾವಲಂಬಿ ಶಿವಳ್ಳಿದೇಶಿಯ ವಿಪ್ರಚಾರ ವಿಚಾರಕ ಶ್ರೀ ಯೆಡನೀರಮಠಾಧಿಪ ಶ್ರೀ ಮದೀಶ್ವರಾನಂದ ಭಾರತೀ ಕರಕಮಲ ಸಂಜಾತರಾದ

### ಶ್ರೀ ಕೇಶವಾನಂದ ಭಾರತೀ ಶ್ರೀಪಾದಂಗಳವರು

ನಮ್ಮ ಸಂಸ್ಥಾನದ ಮುಖ್ಯಾಭಿಮಾನಿಗಳಾದ ಶ್ರೀ ಲಕ್ಷ್ಮಣದಾಸ್ ವೇಲಂಕರ್‌ರವರಿಗೆ ಮಾಡುವ ಶ್ರೀಮನ್ನಾರಾಯಣ ಸ್ಮರಣೆಗಳು,

ಮಾನವನಿಗೆ ಮನಃ ಶಾಂತಿ ಲಬ್ಧವಾಗಬೇಕಾದರೆ ಅಧ್ಯಾತ್ಮ ಜ್ಞಾನಕ್ಕಿಂತ ಮಿಗಿಲಾದ ಸಾಧನ–ಸಂಪತ್ತು ಬೇರಾವುದೂ ಇಲ್ಲ. ಭಗವಂತನನ್ನು ತನ್ನ ಹೃದಯದಲ್ಲಿ ಸಂಸ್ಥಾಪಿಸಿ ಭಕ್ತಿಯ ಪೂಜೆಯನ್ನು ಸಲ್ಲಿಸಿದಾಗ ಮಾತ್ರ ಅಧ್ಯಾತ್ಮ ಜ್ಞಾನಮಾರ್ಗ ಗೋಚರಿಸುವುದಕ್ಕೆ ಸಾಧ್ಯ. ಭಗವದಾರಾಧನಾ ಸಾಧನಗಳಲ್ಲಿ ಭಕ್ತಿಯಿಂದ ಮಾಡುವ ಭಜನೆಯೂ ಅತ್ಯಂತ ಪ್ರಭಾವಿ ಸ್ಥಾನವನ್ನು ಹೊಂದಿರುತ್ತದೆ, ಅಂತೆಯೇ "ಹರಿಕಥೆ"ಯ ಮೂಲಕ ಪುಣ್ಯ ಪುರಾಣಗಳ ಕಥಾನಕಗಳನ್ನು, ಅದರಲ್ಲಿರುವ ಆದರ್ಶ ಪುರುಷರ ಜೀವನ ಸಾರವನ್ನು ಜನ-ಮನದಲ್ಲಿ ಚಿತ್ರಿಸಿ ತನ್ಮೂಲಕ ಜನರ ಜೀವನವನ್ನು ಸಾರವಾಗಿಸುವಂತಹ ಕೀರ್ತನಾ ಕಾರ್ಯವೂ ಧರ್ಮ ಪ್ರಚಾರಕಾರ್ಯದಲ್ಲಿ ಅತ್ಯುತ್ಕೃಷ್ಟ ಸ್ಥಾನವನ್ನು ವ್ಯಾಪಿಸಿರುತ್ತದೆ. ಉತ್ತಮ ಹರಿದಾಸರ ಹರಿಕೀರ್ತನೆಯನ್ನು ಕೇಳಿದಾಗ ಸಂಗೀತ ಸಾಹಿತ್ಯಗಳ ಮಧುರತೆಯನ್ನು ಆಸ್ವಾದಿಸುವುದರೊಂದಿಗೆ ಮನಸ್ಸಿಗೆ ಶಾಂತಿಯೂ ಧರ್ಮ ಪ್ರವೃತಿಗೆ ಪ್ರೇರಕವೂ ದುಷ್ಪ್ರವೃತ್ತಿಗೆ ಮಾರಕವೂ ಅಗಿ ತದ್ವಾರಾ ಮಾನವೋನ್ನಮನವಾಗುತ್ತದೆ.

ಇದನ್ನು ಚೆನ್ನಾಗಿ ಮನಗಂಡು ಉತ್ತಮ ಹರಿದಾಸರೆನ್ನಿಸಿಕೊಂಡುದು ಮಾತ್ರವಲ್ಲ ಅದೆಷ್ಟೋ ಸಹೃದಯರ ಮನದಲ್ಲಿ ಮನೆಮಾಡಿರುವಂತಹ ದಾಸ ಶ್ರೇಷ್ಠರಾಗಿರುವರು ಸಂತ ಅಚ್ಯುತದಾಸರು. ಇವರ ಸೋದರ ಕೇಶವದಾಸರು ತನ್ನ ಕೀರ್ತನಾ ಪ್ರತಿಭೆಯಿಂದ ವಿದೇಶದಲ್ಲಿ ನಮ್ಮ ಆರ್ಷೇಯ ಧರ್ಮ

ಗ್ರಂಥಗಳ ಮಹತ್ವವನ್ನು ಬಿತ್ತರಿಸುತ್ತಿರುವರು. ಇನ್ನುಳಿದ ಇಬ್ಬರು ಸೋದರರರೂ ಕೀರ್ತನೆ ಭಜನೆಗಳಲ್ಲಿ ಪರಿಣತರಾಗಿ ಜನಸೇವೆಯನ್ನು ಮಾಡಿ ತನ್ಮೂಲಕ ಜನಾರ್ದನನನ್ನು ಒಲಿಸುತ್ತಿರುವರು.

ಭಾರತ ಜ್ಯೋತಿಯಂತಹ ಉತ್ತಮ ಸಂಸ್ಥೆಯನ್ನು ಸ್ಥಾಪಿಸಿ ಅಲ್ಲಿ ನಿತ್ಯೋತ್ಸವದಂತೆ ಭಜನೆ ಕೀರ್ತನೆ, ಅರ್ಚನೆ, ಪ್ರವಚನದಂತಹ ಧರ್ಮಜಾಗೃತಿ ಕಾರ್ಯವನ್ನು ಮಾಡಿ ಜನಾದರಣೆಯರಾಗಿರುವ **ಅಚ್ಯುತದಾಸ** ಮತ್ತು ಸೋದರರು ನಿಜವಾಗಿಯೂ ಸಂಸ್ತುತ್ಯರೆಂಬುದರಲ್ಲಿ ಸಂದೇಹವಿಲ್ಲ, ಅಂತಹ ಗೌರವಾನ್ವಿತರನ್ನು ಗೌರವಿಸುವುದು ಸಹೃದಯರ ಧರ್ಮವಾಗಿದೆ.

ಇದನ್ನರಿತ ನೀವೆಲ್ಲರೂ ಅಚ್ಯುದಾಸರ ಕೀರ್ತನ ದೀಕ್ಷಾ ರಜತೋತ್ಸವದ ಅಂಗವಾಗಿ **ಸಂತರ್ಪಣ** ಎಂಬ ಹೆಸರಿನ ಸಂಚಿಕೆಯನ್ನು ಪ್ರಕಟಿಸಲು ನಿಶ್ಚೈಸಿರುವುದು ಸಂತಸದ ಸಂಗತಿಯಾಗಿದೆ. **ಅನ್ನ ಸಂತರ್ಪಣೆ** ಅದಕ್ಕಿಂತ ಮಿಗಿಲಾದ ಜ್ಞಾನ ಸಂತರ್ಪಣೆಯನ್ನು ಮಾಡಿದ ಅವರ ಉದ್ಧಿಶ್ಯದಲ್ಲಿ ನಡೆಯುವ ಗ್ರಂಥಕ್ಕೆ " ಸಂತರ್ಪಣ " ಎಂಬ ನಾಮವು ಅನ್ವರ್ಥವಾಗಿದೆ.

ಶ್ರೀ ಸಂತ ಭದ್ರಗಿರಿ ಅಚ್ಯುತದಾಸರಿಗೂ ಅವರ ಸೋದರರಿಗೂ ಆಯುರಾರೋಗ್ಯ ಭಾಗ್ಯ ಗಳನ್ನು ಕರುಣಿಸಿ ಅವರ ಸದಿಚ್ಛೆಗಳು ಶೀಘ್ರಮೇವ ನೆರವೇರಿ ಸಕಲ ಜನಾದರಣೀಯರಾಗಲಿ! ಈ ಸತ್ಕೃತಿಯಲ್ಲಿ ಭಾಗಿಗಳಾದ ನಿಮಗೆಲ್ಲರಿಗೂ ಸಕಲ ಸೌಭಾಗ್ಯಗಳು ಲಭಿಸಲಿ !! ಎಂದು ನಮ್ಮ ಆರಾಧ್ಯ ಮೂರ್ತಿಗಳಾದ ಶ್ರೀ ದಕ್ಷಿಣಮೂರ್ತಿ ಗೋಪಾಲಕೃಷ್ಣ ಸನ್ನಿಧಿಯಲ್ಲಿ ಸಂಪ್ರಾರ್ಥಿಸುತ್ತೇವೆ.

**ಇಂತಿ ಮಾಡುವ ಶ್ರೀ ಮನ್ನಾರಾಯಣ ಸ್ಮರಣೆಗಳು.**

**ಶ್ರೀ ಕೇಶವಾನಂದ ಭಾರತಿ ಶ್ರೀಪಾಂದಗಳವರು**

**M. R. Pai**

3rd Floor,
"Piramal Mansion"
235 Dr. Dadabhai Naoroji Road
BOMBAY 400 001

March 2, 1976

## Message

From your letter of 24th February I am happy to understand that you will be celebrating suitably the Silver Jubilee of Sant Bhadragiri Achyut Das's career as a Keertankar. By his simplicity, sincerity, deep knowledge of scriptures and epics and devotional approach, his Keertans have attracted many. He has rendered a great service to the public by his Keertans in various languages over the past 25 years.

I join his other admirers in praying to God to give Sant Bhadragiri Achyut many more years of healthy life in the service to the public and in the promotion of devotional Keertans.

Sincerely,

*M. R. Pai*

Telegrams : ACADEMY Telephone : 8236 Udupi

THE ACADEMY OF GENERAL EDUCATION

MANIPAL - KARNATAKA, INDIA

Dr. T. M. A. PAI M.B.B.S.

PRESIDENT & REGISTRAR

March 10, 1976

## Message

I am very happy to know that you are bringing out a Souvenir to mark the completion of 25 years of dedicated service in the field of Keerthana rendered by Sant Bhadragiri Achyutadas of Bangalore, of country-wide fame. Sant Achyutadas is a born talented Keerthanacharya. His renderings are forceful and appealing. His popularity is due to the great dedication he has been able to give to propound Haridasa Sahitya and the masses developing great fascination for Harikathas. He has been practically a genius and a self-made person. God chooses His right instruments to spread His philosophy of love.

I have no doubt the Souvenir you are releasing will be a fitting tribute to the services rendered by Sant Bhadragiri Achyutadasji and it will be greatly appreciated by all his admirers.

With best wishes,

Yours sincerely,

T. M. A. Pai

ರಜತ
ಮಹೋತ್ಸವ
ಸ್ಮರಣಸಂಚಿಕೆ





ವಿಶ್ವ ಸ್ನೇಹಕ್ಕಾಗಿ ಪ್ರಾರ್ಥನೆ

मित्रस्य मा चक्षुषा सर्वाणि
भूतानि समीक्षन्ताम् ।
मित्रस्याहं चक्षुषा सर्वाणि भूतानि समीक्षे ।
मित्रस्य चक्षुषा समीक्षामह ।।

— यजुर्वेद

ನನ್ನ ಮೇಲೆ ಸಕಲ ಪ್ರಾಣಿಮಾತ್ರರು ಸ್ನೇಹದೃಷ್ಟಿಯನ್ನಿಡಲಿ; ನಾನೂ ಸಕಲ ಪ್ರಾಣಿಮಾತ್ರರನ್ನು ಸ್ನೇಹದೃಷ್ಟಿಯಿಂದ ಕಾಣುವಂತಾಗಲಿ; ನಾವು ಪರಸ್ಪರ ಸ್ನೇಹದೃಷ್ಟಿಯಿಂದ ನಡಕೊಳ್ಳುವಂತಾಗಲಿ.

—ಯಜುರ್ವೇದ

ಹರಿಕೀರ್ತನೆ ಹಾಗೂ ಗೀತಾ ಪ್ರವಚನ ಮುಖಾಂತರ ಸಂತ ಅಚ್ಯುತದಾಸರು
ಅವಿರತವಾಗಿ ೨೫ ವರ್ಷ ಪರಮಾತ್ಮನ ಸೇವೆ ಮಾಡಿ
ಲಕ್ಷಾವಧಿ ಜನರನು ಅಧ್ಯಾತ್ಮದ ಕಡೆಗೆ ತಿರುಗಿಸಿದ ಸವಿನೆನಪಿಗಾಗಿ

# ಶ್ರೀಹರಿಯ ಹರಿಕಾರರು

### ಸಂಪಾದಕರು ಹಾಗೂ ದಾಸರ ಶಿಷ್ಯ ಮತ್ತು ಭಕ್ತ ಮಂಡಳಿ

ಕ್ರಿ.ಶಕ 1951 ಫೆಬ್ರವರಿ ತಿಂಗಳ 23ನೇ ತಾರೀಕು ಇತಿಹಾಸ ಪ್ರಸಿದ್ಧವಾದ ಬೈಕಾಡಿ ಗ್ರಾಮದ ಭದ್ರಗಿರಿಯ ಶ್ರೀ ಕಾಮೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಪ್ರಯುಕ್ತ ಅಪಾರ ಜನಸಂದಣಿ ನೆರೆದಿತ್ತು. ಶಿವನಿಗೆ ಲಕ್ಷ ಬಿಲ್ವಾರ್ಚನೆ, ಎಲ್ಲೆಡೆ ಹರಹರ ಮಹದೇವ ಗರ್ಜನೆ, ನಮಃ ಶಿವಾಯ ಪಂಚಾಕ್ಷರೀ ಜಪ, ಯಾಮ ಯಾಮದಲ್ಲಿ ಲಿಂಗಾಭಿಷೇಕ, ವೈದಿಕರಿಂದ ರುದ್ರಪಠಣಗಳಿಂದ, ಜಾಗಟೆಗಳ ಧ್ವನಿಯ ಅನುರಣನ, ಇವೆಲ್ಲ ವಾತಾವರಣದಲ್ಲಿ ಒಂದು ದಿವ್ಯ ಪಾರಮಾರ್ಥಿಕ ಮಾದಕತೆಯನ್ನು ಉಂಟುಮಾಡಿತ್ತು. ಗ್ರಾಮೀಣ ಮುಗ್ಧ ಮಕ್ಕಳು ನೆರೆದ ಜಾತ್ರೆಯಲ್ಲಿ ತಿಂಡಿ ತಿನಸುಗಳಿಗೆ ಮುಗಿಬೀಳುವುದಲ್ಲದೇ ಆಟೋಟಗಳಲ್ಲಿ ಮಗ್ನರಾಗಿದ್ದರು. ದೇವಾಲಯದ ಹೊರಗಿನಿಂದ ಶಿವಗಣಗಳ ಆರಾಧನೆಯನ್ನು ಆಯಾಯಾ ಪರಂಪರೆಯವರು ಗೈಯ್ಯುತ್ತಾ ಅನೇಕರು ಭಾವಾವೇಶದಿಂದ ಕುಣಿಯುತ್ತಾ ಮೈ ಮರೆಯುತ್ತಿದ್ದರೆ, ಸಾವಿರಾರು ಗ್ರಾಮೀಣರು ಭಯ ಭಕ್ತಿಗಳಿಂದ ಮೂಕ ವಿಸ್ಮಯರಾಗಿ ನಿಂತಿದ್ದರು. ಸನಿಹದಲ್ಲಿ ಯಕ್ಷಗಾನ ಪರಿಣತರಾದ ಯುವಕ ತಂಡ ಒಂದು ಆಗ ಮಾತ್ರ ಶಿವರಾತ್ರೆಯ ವಿಶೇಷ ಯಕ್ಷಗಾನ ಕಾರ್ಯಕ್ರಮ ಮುಗಿಸಿ ಬಂದಿತ್ತು. ತಾಂಡವ ಪ್ರಿಯನಾದ ಶಿವನನ್ನು ತಾಳ ಮದ್ದಳೆಗಳಿಂದ ಪೂಜಿಸುವ ಸೇವೆಯನ್ನು ದೇವಾಲಯದಲ್ಲಿ ನಡೆಸಲು ಉತ್ಸುಕರಾಗಿ ಅವರು ಬಂದಿದ್ದರು. ಅಗ ಊರಿನ ಕೆಲವು ಮುಖಂಡರು– ಇಂದು ಜಾಗರಣೆ; ಶಿವಸಂಬಂಧವಾದ ಎಲ್ಲಾ ಲೀಲೆಗಳನ್ನು ಕಂಡದ್ದಾಯಿತು. ಶಿವ ಮಹಿಮೆಗಳನ್ನೂ ಶ್ರವಣಿಸಬೇಕೆಂದು ನಿಯಮವಿದೆ. ಜಿಲ್ಲೆಯ ಪ್ರಸಿದ್ಧ ಕೀರ್ತನಕಾರರಿಗೆ (ಹರಿಕಥಾ ವಿದ್ವಾಂಸರಿಗೆ) ಆಮಂತ್ರಣ ಕೊಟ್ಟಿದ್ದರು. ಅವರು ಬರಲಿಲ್ಲಾ. ಇದೊಂದು ಸೇವೆ ದೇವರಿಗೆ ನಡೆದಿದ್ದರೆ ಚೆನ್ನಾಗಿತ್ತೆಂದು ಅವರು ಆಸೆ ವ್ಯಕ್ತಗೊಳಿಸಿದ್ದರು. ಅದಕ್ಕಾಗಿ ಬೇರೆ ದಾಸರನ್ನು ಹುಡುಕುವ ಪ್ರಯತ್ನವೂ ನಡೆದಿತ್ತು. ಅಷ್ಟರಲ್ಲೇ ಯಕ್ಷಗಾನ ತಂಡದವರು, ಆ ವಿಚಾರ ನಮಗೆ ಬಿಡಿ. ನಿಮಗೆ ಹರಿಕಥೆ ಆದರೆ ಆಯಿತಲ್ಲವೇ ? ಹಾರ್ಮೋನಿಯಮ್ ತಬ್ಲಾ ನೀವು ವ್ಯವಸ್ಥೆ ಮಾಡಿಸಿರಿ ; ದಾಸರನ್ನು ನಾವು ಸಿದ್ಧ ಮಾಡಂತ್ತೇವೆ. ಎನ್ನುವಡಿಷ್ಟರಲ್ಲೇ ಪಕ್ಕವಾದ್ಯದವರನ್ನು ಕರೆತರಲು 2 ಮೈಲು ದೂರದ ಬ್ರಹ್ಮಾವರಕ್ಕೆ ಒಬ್ಬ ಉತ್ಸಾಹಿ ತರುಣ ಆಗಲೆ ಸೈಕಲಿನಲ್ಲಿ ಶರವೇಗದಲ್ಲಿ ಹೋಗಿ ಪಕ್ಕವಾದ್ಯ ಸಹಿತ ಇಬ್ಬರನ್ನು ಅದೇ ಕರೆತಂದ. ಆಗಲೇ ಕಿರ್ತನ ವೇದಿಕೆ ಸಿದ್ಧವಾಗಿತ್ತು. ವಾದನಗಳ ಶ್ರುತಿ ಆಯ್ತು. ಹರಿದಾಸರ್ಯಾರು ? ಹರಿದಾಸರ್ಯಾರು ಎಲ್ಲರಿಗೂ ಕುತೂಹಲ. ಕೆಲವರು ಯಾವ ಕಥೆ ? ಕಥೆ ಯಾವುದು ? ಎಂದು ಕೇಳುತ್ತಿದ್ದರೆ, ಕೆಲವರು ಯಾವದೇ ಶಿವಸಂಬಂಧವಾದ ಕಥೆ ಆದರೂ ಆಗಬಹುದು. ಕಥೆ ಮಾತ್ರ ಬೆಳಗಿನ ತನಕ ನಡೆಯಬೇಕು. ದಾಸರಿಗೆ ಮೊದಲೇ ಹೇಳಿ ಎನ್ನುತ್ತಿದ್ದರು. ಕೀರ್ತನ ವೇದಿಕೆಯಲ್ಲಿ ಶಿವನ ಭಾವಚಿತ್ರ, ಬಿಲ್ವಾದಿ ಪುಷ್ಪಮಾಲೆಯಿಂದ ಅಲಂಕೃತವಾಗಿತ್ತು. ಊದುಬತ್ತಿಯೂ ಹಚ್ಚಿಯಾಯ್ತು. ಕಾಲಿಡಲು ಜಾಗವಿಲ್ಲದಷ್ಟು ಜನಸಂದಣಿ. ಅಷ್ಟರಲ್ಲೇ ದೀಪದ ಬೆಳಕು ಸಾಲದೆಂದು 2 ಮೈಲು ದೂರದ ಬ್ರಹ್ಮಾವರಕ್ಕೆ ಮತ್ತೆ ಓಡಿದ ತರುಣನೊಬ್ಬ. ಎರಡು ಪೆಟ್ರೋಮ್ಯಾಕ್ಸ ಹಚ್ಚಿಯೇ ತಂದಿದ್ದ. ಶಿವರಾತ್ರಿಯ ಕಗ್ಗತ್ತಲಿನಲ್ಲಿ ಜಗ್ಗನೇ ಮಿಂಚಿದ ಪೆಟ್ರೋಮೆಕ್ಸಿನ ಬೆಳಕು ಚಿಕ್ಕಮಕ್ಕಳಲ್ಲಿ ಆನಂದ ಬುಗ್ಗಯನ್ನೇ ಚಿಮ್ಮಿಸಿತ್ತು; ಎಲ್ಲರೂ ಹೋ ಎಂದು ಕೂಗಿದರು. ಕೆಲವು ಮಕ್ಕಳು ಆ ಪೆಟ್ರೋಮೆಕ್ಸಿನ ಬೆಳ್ಳಗಿನ ಟ್ಯಾಂಕಿನಲ್ಲಿ (ಕೆಳಭಾಗ) ಪ್ರತಿಬಿಂಬಿತವಾಗುವ ಉದ್ದ ಅಗಲ ವಿಕಾರವಾಗಿ ತೋರುವ ತಮ್ಮ ತಮ್ಮ ಮುಖ ಕಂಡು ಆದಕ್ಕಿಂತಲೂ ವಿಕಾರವಾಗಿ ಕೂಗೆಬ್ಬಿಸಿ

ಕುಪ್ಪಳಿಸುತ್ತಿದ್ದರು. ಅಷ್ಟರಲ್ಲಿ ಒಬ್ಬ ಕಾರ್ಯಕರ್ತ ತರುಣ ಕೈಯಲ್ಲಿ ಬೆತ್ತ ಹಿಡಿದು ಮಕ್ಕಳೆಡೆಗೆ ಧಾವಿಸಿ, ಎಯ್ ಸುಮ್ಮನಿರಿ ! ಮಾತನಾಡಬೇಡಿ ! ಎಂದು ಕೂಗುತ್ತಿದ್ದಂತೆ, ಕೆಲವು ಗಂಡಸರು ನಿಮ್ಮ ಹರಿದಾಸರು ಎಲ್ಲಿ ? ಮೊದಲು ಕರೆಸಿ ಅವರು ಬಂದರೆ ಎಲ್ಲಾ ಮಕ್ಕಳು ಸುಮ್ಮನಾಗುತ್ತಾರೆ. ಕರೆಸಿ ಬೇಗ ಕರೆಸಿ ಎಂದರು.

ನಿಮಿಷ ನಿಮಿಷವೂ ಜನರಿಗೆ ಕುತೂಹಲ; ದಾಸರ್‍ಯಾರು ? ದಾಸರ್‍ಯಾರು ? ಕೆಲವೇ ನಿಮಿಷಗಳಲ್ಲಿ ತರುಣರ ಗುಂಪೊಂದು ದಾಸರನ್ನು ಕರೆತಂದರೋ ಹಿಡಿದು ತಂದರೋ ಎಂಬಂತೆ ವೇದಿಕೆಯತ್ತ ಕರೆದೊಯ್ಯುತ್ತಿದ್ದರು. ಹದಿನೆಂಟು ಹತ್ತೊಂಭತ್ತರ ತೆಳ್ಳಗಿನ ಬೆಳ್ಳಗಿನ ತರುಣ ನೋರ್ವ ಸೊಂಟಕ್ಕೆ ಸುತ್ತಿದ ಎಂಟು ಮೊಳದ ಪಂಚೆ, ಉದ್ದನೆಯ ಅಂಗಿ, (ನೆಹರು ಶರ್ಟ್) ತಲೆಗೆ ಗಾಂಧೀ ಟೋಪಿ, ಹಣೆಗೆ ತಿಲಕ, ಕಾಲಿಗೆ ಗೆಜ್ಜೆ ಕಟ್ಟಿ ವೇದಿಕೆಯನ್ನು ಏರಿದ. ಮುಖದಲ್ಲಿ ಮಾತ್ರ ಲಜ್ಜೆ. ಆಗಾಗ ಬೆವರು ಎದ್ದು ಕಾಣುತ್ತಿತ್ತು. ಮಹಾಸಭೆಯನ್ನು ಕಂಡು ತರುಣ ಕಣ್ಣು ಕಣ್ಣು ಬಿಡುತ್ತಿದ್ದ. ಜನರು ಕೂಡಾ ಇವರ್‍ಯಾರು; ಎಲ್ಲೊ ಕಂಡ ಹಾಗಿದೆ ಎಂದು ಕಣ್ಣು ಬಾಯಿ ಬಿಟ್ಟು ನೋಡುತ್ತಿದ್ದರು. ಅಷ್ಟರಲ್ಲೇ ದಾಸರ ಪರಿಚಯ ಮಾಡಿಕೊಡಲು ವೃದ್ಧ ನಿವೃತ್ತ ಉಪಾಧ್ಯಾಯರೊಬ್ಬರು ಎದ್ದು ನಿಂತರು. ಸಭಿಕರೇ, ಇಂದಿನ ಹರಿಕಥೆ ಮಾಡುವ ಹರಿದಾಸರ ಪರಿಚಯ ನಾನು ಮಾಡಿಕೊಡುವ ಅಗತ್ಯವಿಲ್ಲ ಎಂದು ಕಾಣುತ್ತದೆ. ಇವರು ನಮ್ಮ ದೇವಾಲಯದ ಭಜಕರೂ ಊರಿನ ಉದಾರಿಗಳೆಂದು ಪ್ರಸಿದ್ಧರೂ ಸಭ್ಯ ಗೃಹಸ್ಥರೂ ಆದ ಶ್ರೀ ವೆಂಕಟರಮಣ ಪೈಗಳವರ ಮಗ ಶ್ರೀ ಅಚ್ಯುತ ಪೈಗಳು. ಈಗಾಗಲೇ ಯಕ್ಷಗಾನ ತಾಳ ಮದ್ದಳೆ, ಬಯಲಾಟ, ಭಾಗವತಿಕೆ, ಮದ್ದಳೆ–ಚಂಡೆ ಬಾರಿಸುವುದರಲ್ಲಿ ಅರ್ಥಗಾರಿಕೆಯಲ್ಲಿ ಹೆಸರು ಗಳಿಸಿ ನಮ್ಮ ಊರಿಗೆ ಕೀರ್ತಿ ತಂದವರು. ಇದನ್ನು ಕೇಳುತ್ತಲೇ ದೇವಾಲಯದ ಹೊರಗಿದ್ದ ಜನರು ನುಗ್ಗಿ ಒಳಕ್ಕೆ ಬರುತ್ತಿದ್ದರು. ಸಭೆಯಲ್ಲಿ ನೂಕು ನುಗ್ಗಲು ಪ್ರಾರಂಭವಾಯ್ತು. ಜನರಿಗೆ ಕಥೆ ಕೇಳುವುದಕ್ಕಿಂತ ದಾಸರನು ನೋಡುವುದೇ ಮುಖ್ಯವಾಗಿದ್ದಂತೆ ಕಾಣುತ್ತಿತ್ತು. ಸಾಮಾನ್ಯ ಹಳ್ಳಿಗಳಲ್ಲಿ ಯಾವುದೇ ಮತೀಯ ಭೇದಗಳಿಲ್ಲದ ಎಲ್ಲಾ ವರ್ಗದ ಜನರೂ ಸೇರುತ್ತಾರೆ, ಯಾವುದೇ ಮತದ ದೇವರಾದರೂ ದೇವರೆಲ್ಲಾ ಒಂದೇ– ಎಂಬ ಭಾವ ಅಕ್ಷರ ಜ್ಞಾನವಿಲ್ಲದ ನಮ್ಮ ಹಳ್ಳಿಗರಲ್ಲಿ ಇರುವ ಈ ಸಂಸ್ಕೃತಿ, ಓದಿದ ನಾಗರೀಕರಲ್ಲಿ ಇರುವುದಿಲ್ಲ. ಸಭೆಯ ಅಂಗಳದಲ್ಲಿ ಕೊಂಕಣಿ, ಕ್ರಿಶ್ಚಿಯನ್, ಮುಸಲ್ಮಾನ, ನಾನಾ ಭಾಷೆ ಆಡುವ ಜನ, ಹಾಗೆಯೇ ಬಂಟ, ಬಿಲ್ಲವ, ಮೊಗವೀರ, ಗಾಣಿಗ, ಮುಂತಾದ ಎಲ್ಲ ವರ್ಗದ ಜನರೂ ಸೇರಿದ್ದರು. ಇಂಥಹ ಸಮಾರಂಭಗಳಲ್ಲಿ ಹಳ್ಳಿಗಳು ತಮ್ಮ ಒಳಭೇದಗಳನ್ನೆಲ್ಲಾ ಮರೆತು ಕಲೆಯುತ್ತಾರೆ. ದಾಸರ ಪರಿಚಯ ಹೇಳುತ್ತಲೇ ಸಭೆಯಲ್ಲಿ ಗುಜು ಗುಜು ಮಾತು ಪ್ರಾರಂಭವಾಯ್ತು. ಹೌದಾ ! ಇದs. ಎಂಟ್ರೋ ರಾಯ್ಯಾನ ಮಗ ಅಂಬ್ರ ! (ಇವರು ವೆಂಕಟರಮಣನ ಮಗನಂತೆ – ಕನ್ನಡ) ಅಂದಾ ! ಉಂದು ಎಂಕ್ಟ್ರೋಣೇರ್ನ ಮಗೆಗೆ ! (ತುಳು) ಒಕ್ಕಲೋ ಭಾವಾ ! ಇದ್ ಎಂಕ್ಟೋರಾಯ್ಯೊಡೆವೋಣ ಅಲ್ಲೇ ! (ಮಾ ಪಿ ಳ್ಳೆ ಮಲಯಾಳಿ) ಕಹಾಂಲೆ ಆಮ್ಚೋ ವೆಂಕ್ಟ್ರೋಣಯ್ಯಾಚೊ ಪುತುನ್ನೈಗೀ ! (ಕ್ರಿಶ್ಚಿಯನ್ ಕೊಂಕಣಿ) ಇತ್ತಕಡೆ ಹೆಂಗಸರ ಕಡೆಯಿಂದ ವೈಗೇ ಹೊ ರುಕ್ಮಿಣಿಮಾಯ್ಯೆಲೊ ಪೂತು ಕೈಂಗೋ (ಬ್ರಾಹ್ಮಣ ಕೊಂಕಣಿ) ವೆಂಕಟರಮಣೇರ್ನ ಮಾಣಿಕೆರೆ ಹರಿಕಥೆ ಅಂಪುಡುಕೆರೆ (ಬ್ರಾಹ್ಮಣ ತುಳು) ಎಲ್ಲಾ ಮಾತಿನ ಅರ್ಥ ಒಂದೇ. ವೆಂಕಟರಮಣಯ್ಯನವರ ಮಗನಂತೆ. ಇದು ಅವರಿಗೆಲ್ಲಾ ಗೊತ್ತು. ಆದರೆ; ವೆಂಕಟರಮಣಯ್ಯನ ಮಗ ಹರಿದಾಸನಾದುದು ಯಾವಾಗ ? ಎಂಬುದೇ ಅವರಿಗೆ ದೊಡ್ಡ ಸಮಸ್ಯೆ, ನಿತ್ಯ ಪರಿಚಿತ ವ್ಯಕ್ತಿ ಅಂಗಿ ಚಡ್ಡಿ ಹಾಕಿ ತಾಳ ಮದ್ದಳೆ ಎಲ್ಲಿದೆಯೋ ಅಲ್ಲೆಲ್ಲಾ ತಿರುಗಾಡುವ ಈ ಹುಡುಗ ಕೀರ್ತನ ಪೀಠವೇರಿ ನಿಂತುದು ದಾಸರಿಗಿಂತ ಅವರಿಗೆ ಹೆಚ್ಚು ಆಶ್ಚರ್ಯವಾಗಿ ಅವಾಕ್ಕಾಗಿ ಸಹಸ್ರಾರು ಕಣ್ಣುಗಳು ಕೆಲವು ಸಹಾನುಭೂತಿಯಿಂದಲೂ, ಕೆಲವು ತಿರಸ್ಕಾರದಿಂದಲೂ, ಕೆಲವು ಬೆರಗಿನಿಂದಲೂ ದಾಸರನ್ನು ಇರಿಯುತ್ತಿದ್ದವು. ಇವುಗಳನ್ನು ನೋಡಿ ಹೆದರಿಯೇ ದಾಸರು ಪ್ರಾರಂಭದ ದೇವರ ಧ್ಯಾನ ಶ್ಲೋಕ ಹೇಳಲು ಕಣ್ಣು ಮುಚ್ಚಿದರೊ ಏನೊ ! ದಾಸರು ಯಾವ ಒಂದು ಪೂರ್ವ ಸಿದ್ಧತೆ ಇಲ್ಲದೆ ಕೀರ್ತನ ಪೀಠ ಏರಿದುದಕ್ಕೆ ಭಗವಾನ್ ಶಂಕರನಲ್ಲಿ ಕ್ಷಮೆ ಕೇಳಿ, ನೀನೇ ದಾರಿ ತೋರೆಂದು ಬೇಡಿರಬೇಕು. ಕಥೆ ಗಿರಿಜಾ ಕಲ್ಯಾಣವೆಂದು ಮೊದಲೇ ಪ್ರಚುರ ಪಡಿಸಿದ್ದರು. ಮುಂದಿನ ವಿಚಾರ

ವನ್ನು ದಾಸರ ಬಾಯಿಂದಲೇ ಕೇಳಿ. "ನೆರೆದ ನಿತ್ಯ ಪರಿಚಿತವಾದ ಸಭೆಯನ್ನು ಕಂಡು ಹಿಂದೆಂದೂ ಹರಿಕಥೆ ಮಾಡದ ನಾನು ಬೆಚ್ಚಿ ಕೈಕಾಲು ಶಿಥಿಲವಾದಂತೆ ಭಾಸ ವಾಗಿ ಎಲ್ಲಿ ಬಿದ್ದು ಬಿಡುವೆನೋ ಎಂಬಂತಾಯ್ತು. ಆಗಲೇ ಯಾವುದೋ ಒಂದು ದಿವ್ಯ ಚೈತನ್ಯ ತಾನೇ ನನ್ನೊಳಗೆ ಪ್ರವೇಶವಾದಂತೆ ಆಗಿ ಅವರ್ಣನೀಯವಾದ ಒಂದು ಸಮಾಧಾನ ಹಾಗೂ ಸ್ಥೈರ್ಯ ನನ್ನಲ್ಲಿ ಮೂಡಿ ಸಿತು. ಪೀಠಿಕೆಗಾಗಲೀ ಕಥಾ ಸನ್ನಿವೇಶಗಳಿಗಾಗಲೀ ನನ್ನಲ್ಲಿ ಯಾವುದೇ ನನ್ನದಾದ ಪೂರ್ವಸಿದ್ಧತೆ ಇರಲಿಲ್ಲ. ನನ್ನ ಅಕ್ಕಪಕ್ಕದಲ್ಲಿ ಹಾರ್ಮೋನಿಯಂ ತಬ್ಲಾ ಇದ್ದದು ನಿಜ. ಯಾವ ಶ್ರುತಿಯಲ್ಲಿ ನಾನು ಹಾಡಿದೆನೋ, ಯಾವ ತಾಳ ಹೇಳಿದೆನೋ ನನಗೆ ತಿಳಿಯದು. ಕಥೆ ಸುಮಾರು ಐದು ಗಂಟೆ ನಡೆದಿದ್ದಂತೆ. ಅಂತೂ ಬೆಳಕು ಹರಿದಿತ್ತು. ಊರ ಪ್ರಮುಖರೂ ಸ್ನೇಹಿತರೂ ದಾಸರಿಗೆ ಹೂಮಾಲೆಗಳ ಸುರಿ ಮಳೆ ಮಾಡಿದರು. ಆಗಲೇ ಅಲ್ಲಿ ನೆರೆದ ಸುತ್ತಮುತ್ತಲಿನ ಊರುಗಳಿಂದ ದಾಸರಿಗೆ ಆಮಂತ್ರಣ ಬಂದಿತ್ತು. ಮರುದಿನದಿಂದಲೇ ಹೇರೂರು, ಹಾರಾಡಿ, ಫಾಲಿಕೇರಿ, ಕೋಟ, ಕೋಟೇಶ್ವರಗಳಲ್ಲಿ ಹರಿಕಥೆಗೆ ಆಮಂತ್ರಣ ಬಂದಿತ್ತು. ಹೀಗೆ ಅನಿರೀಕ್ಷಿತ ವಾಗಿ ದೇವರೇ ಆರಿಸಿಕೊಂಡು ದಾಸರಾಗಿಸಿಕೊಂಡವರೇ ಇಂದು ದಕ್ಷಿಣೋತ್ತರ ಭಾರತಗಳಲ್ಲಿ ಖ್ಯಾತನಾಮರಾದ **ಸಂತ ಭದ್ರಗಿರಿ ಅಚ್ಯುತದಾಸರು.**

ದಾಸನಾಗುವುದಕ್ಕೆ ಏಸು ಜನ್ಮದ ಸುಕೃತ

—ಶ್ರೀ ಪುರಂದರದಾಸರು

ಕೊಂಕಣ ದೇಶೀಯ ಗೌಡಸಾರಸ್ವತ ಬ್ರಾಹ್ಮಣ ರಾದ, ಕೌಂಡಿಣ್ಯ ಗೋತ್ರದ ಆಶ್ವಲಾಯನ ಸೂತ್ರ ಋಗ್ವೇದಿ ಶ್ರೀ ಶಾಂತೇರಿ ಕಾಮಾಕ್ಷಿದೇವಿ ಕುಲದೇವಿಯಾಗಿ ಉಳ್ಳ ಮಾಧ್ವ ವೈಷ್ಣವ ಪರಂಪರೆಯ ಕಾಶೀಮಠದ ಶಿಷ್ಯ ವೃಂದದಲ್ಲಿ ಒಬ್ಬರಾದ ಶ್ರೀ ವೆಂಕಟರಮಣ ಪೈ ಮತ್ತು ಶ್ರೀಮತಿ ರುಕ್ಮಿಣೀದೇವಿಯರ ಉದರದಲ್ಲಿ ಕ್ರಿ. ಶ. 1932 ಮಾಘ ಬಹುಳ ದ್ವಿತೀಯಾ ಬುಧವಾರದಂದು ಇಬ್ಬರು ಅಕ್ಕಂದಿರಿಗೆ ಒಬ್ಬ ಅಣ್ಣನಿಗೆ ತಮ್ಮನಾಗಿ, ತಂದೆ-ತಾಯಿಗಳಿಗೆ 4 ನೇ ಮಗುವಾಗಿ ಜನಿಸಿದವರೇ ಅಚ್ಯುತದಾಸರು.

ಶ್ರೀ ಮಧ್ವಾಚಾರ್ಯರ ಕಾರ್ಯಕ್ಷೇತ್ರವಾದ ಶ್ರೀ ಕೃಷ್ಣ ಪರಮಾತ್ಮನ ಸನ್ನಿಧಾನ ವಿಶೇಷ ಉಳ್ಳ ಶ್ರೀಮದುಡುಪಿ ಕ್ಷೇತ್ರದಿಂದ ಕೇವಲ ನಾಲ್ಕು ಮೈಲುಗಳ ದೂರದ ಸುವರ್ಣಾನದಿ ತೀರವಾದ ಶ್ರೀ ವೀರ ವಿಠ್ಠಲ ದೇವರು ಸನ್ನಿಹಿತನಾದ ಶ್ರೀ ಕ್ಷೇತ್ರ ಭದ್ರಗಿರಿಯೇ ದಾಸರ ಜನ್ಮಸ್ಥಳ, ಭದ್ರಗಿರಿಯು ಬೈಕಾಡಿ ಗ್ರಾಮವನ್ನೊಳಗೊಂಡ ಒಂದು ಭಾಗ. ನವನಾಗರೀಕತೆಯ ಸುಳಿವಿಲ್ಲದ ಈ ಗ್ರಾಮಗರ್ಭದಲ್ಲಿ ಭಾರತೀಯ ಧರ್ಮ ಸಂಸ್ಕೃತಿಗಳ ಬೀಜವು ಯಕ್ಷಗಾನ, ತಾಳಮದ್ದಳೆ, ಸಂಗೀತ, ಭಜನೆ, ಪುರಾಣ ಪ್ರವಚನಗಳ ದ್ವಾರಾ ವ್ಯಕ್ತವಾಗಿ ತನ್ನೀ ಗ್ರಾಮೀಣ ಮುಗ್ಧ ಜೀವಿ-ಗಳಿಗೆ ತನ್ನ ಮಧುರ ಫಲವನ್ನು ಉಣಿಸುತ್ತಿತ್ತು. ಶ್ರಮಜೀವಿಗಳಾದ ಇಲ್ಲಿಯ ರೈತ, ಬೇಸ್ತ, ಬಿಲ್ಲವ, ಭಿಲ್ಲ ಮೊದಲಾದ ಅಮಾಯಕ ಜನರು ಸಾಯಂಕಾಲ ತಮ್ಮದೇ ಆದ ಧರ್ಮ ಹಾಗೂ ನೀತಿಬೋಧಕ ಪುರಾಣ ಕಥೆಗಳನ್ನೊಳಗೊಂಡ ಯಕ್ಷಗಾನ ನಾಟಕ, ತಾಳಮದ್ದಳೆ, ಪುರಾಣ ಶ್ರವಣ, ಭಜನೆ ಪಾಡ್ದಾನೆ (ಹಾಡುಗಬ್ಬಗಳು) ಇವುಗಳನ್ನಾಶ್ರಯಿಸಿ ರಸ ಲೋಕಯಾತ್ರೆಯಲ್ಲಿ ಮೈ ಮರೆಯುತ್ತಿದ್ದರಲ್ಲದೆ, ಈಗಿನ ಜನರಂತೆ, ಮದ್ಯಪಾನ, ಜೂಜು, ಕ್ಷುದ್ರ ರಾಜಕಾರಣ, ಅನೈತಿಕವಾದ ಚಲನ ಚಿತ್ರಾದಿಗಳಿಂದ ಕಲುಷಿತರಾಗಿದ್ದಿಲ್ಲ. ಜನರಿಗೆ ನಾಗರೀಕತೆ ಎಂಬ ಅಕ್ಷರ ಜ್ಞಾನ ಹೇಳಿಕೊಡಲು ಇದ್ದ ಒಂದೇ ಒಂದು ಕೇಂದ್ರವೆಂದರೆ ಪ್ರಾಥಮಿಕ ಶಾಲೆ ಒಂದೇ. ಅದೂ ಕೂಡ ಒಂದು ಕಲಾಕೇಂದ್ರದಂತೆ ಇತ್ತು. ಹಳ್ಳಿಯಲ್ಲಿ ಜೀವನಕ್ಕಾಗಿ ಒಂದೊಂದು ಮನೆಯೂ ವೃತ್ತಿ-ಪರ ಶಿಕ್ಷಣವೀಯುತ್ತಿದ್ದ ಶಾಲೆಗಳೇ ಆಗಿದ್ದುವು. ರೈತ, ಕಮ್ಮಾರ, ಬಡಗಿ, ಗಾಣಿಗ, ಬೇಸ್ತ, ಚಿನಿವಾರ, ಬಳೆ-ಗಾರರ ಮಕ್ಕಳೆಲ್ಲಾ ತಮ್ಮ ತಮ್ಮ ಮನೆಯಲ್ಲೆ ವೃತ್ತಿ ಮೂಲ ಶಿಕ್ಷಣ ಹೊಂದಿ ಕೇವಲ ಅಕ್ಷರ ಜ್ಞಾನಕ್ಕಾಗಿ ಮಾತ್ರ ಶಾಲೆಗಳಿಗೆ ಬರುತ್ತಿದ್ದರು. ಸೂರ್ಯಾಸ್ತಮಾನ ವಾಗುತ್ತಲೂ ಪ್ರತಿ ಮನೆಯಲ್ಲೂ ಮಿಣುಕು ದೀಪ ಪ್ರಾರ್ಥನೆ, ಭಜನೆ, ಜಾನಪದ ಹಾಡುಗಬ್ಬಗಳ ತಾರ ಸ್ವರ ಕೇಳಿದರೆ ಹಳ್ಳಿಯೇ ಶ್ರಮಜೀವಿಗಳನ್ನು ತೊಟ್ಟಿಲೊಳಗಿಟ್ಟು ಜೋಗುಳ ಹಾಡುವಂತಿರುತ್ತಿತ್ತು. ಬೈಕಾಡಿ ಗ್ರಾಮದಲ್ಲಿ ಸಾಕಷ್ಟು ಈಸಾಯಿಗಳೂ (ಕ್ರಿಶ್ಚಿಯನ್) ಇಸ್ಲಾಮಿಗಳೂ (ಮುಸಲಮಾನರು) ಇದ್ದರು. ಅವರಿಗೆ ಪ್ರತ್ಯೇಕವಾದ ಪ್ರಾರ್ಥನಾ ಮಂದಿರಗಳಿಲ್ಲದಿದ್ದರೂ ಅವರು ಸಂಜೆ ತಮ್ಮ ತಮ್ಮ

ಮನೆಗಳಲ್ಲಿ ಪ್ರಾರ್ಥನೆ ಭಜನೆಗಳನ್ನು ಸಲ್ಲಿಸುತ್ತಿದ್ದರು. ಯಾವುದೇ ಗ್ರಾಮ ಉತ್ಸವಗಳಲ್ಲಿ ಎಲ್ಲರೊಡನೆ ಅವರು ಬೆರೆಯುತ್ತಿದ್ದರು. ಅವರ ಉತ್ಸವ ಹಬ್ಬಗಳಲ್ಲಿ ಹಿಂದೂ ಜನರು ನಿಃಸಂಕೋಚವಾಗಿ ಸೇರುತ್ತಿದ್ದರು. ನೂರಾರು ವರ್ಷಗಳ ಇತಿಹಾಸದ ಈ ಗ್ರಾಮದಲ್ಲಿ ಒಮ್ಮೆಯಾದರೂ ಮತದ್ವೇಷ, ದೂಷಣ ಗಲಭೆ, ಇವುಗಳು ನಡೆದ ಒಂದೂ ದೃಷ್ಟಾಂತವೂ ಇಲ್ಲ.

ಈ ಗ್ರಾಮ ಜೀವಿಗಳಿಗೆ ಕಲೆಗಳು ಒಂದು ಒಳ್ಳೇ ಹವ್ಯಾಸವಾಗಿತ್ತೇ ಹೊರತು ಅದು ಜೀವನೋದ್ಯೋಗ-ವಾಗಿರಲಿಲ್ಲ. ಆದರೆ ಅವರಿಗರಿಯದಂತೆ ಆ ಕಲೆಗಳು ಅವರ ಜೀವನವನ್ನು ಆದರ್ಶ ಹಾಗೂ ಸುಂದರವಾಗಿಸುತ್ತಿದ್ದುವು. ಆಗ ಭಾರತೀಯ ಬಹುತೇಕ ಗ್ರಾಮ ಜೀವನ ಪದ್ಧತಿ ಹೀಗೇ ಇರುವುದಾದರೂ ಬೈಕಾಡಿ ಗ್ರಾಮದ ವೈಶಿಷ್ಟ್ಯವೇ ಬೇರೆ. ಈ ಗ್ರಾಮದ ಸುತ್ತಮುತ್ತಲಿನ ಹಾರಾಡಿ, ಸಾಲಿಕೇರಿ, ಬ್ರಹ್ಮಾವರ, ನೀಲಾವರ, ಕುಂಜಾಲು ಮುಂತಾದ ಬಡಗು ಮೂಡಲು ಗ್ರಾಮಗಳಲ್ಲಿ ಯಕ್ಷಗಾನ ಬಯಲಾಟಗಳ ಕಲಾ-ಕೇಂದ್ರಗಳು. ಪಡುವಣ ದಿಕ್ಕಿನಲ್ಲಿ ನಾಲ್ಕು ಮೈಲುಗಳಲ್ಲಿ ಧರ್ಮತತ್ವಜ್ಞಾನ ಕೇಂದ್ರಗಳನ್ನೊಳಗೊಂಡ ಅನ್ನಬ್ರಹ್ಮ ಶ್ರೀಕೃಷ್ಣ ಪರಮಾತ್ಮನನ್ನು ಸೇವಿಸುವ ಅಷ್ಟಮಾಂಗನೆ ಯರಂತಿರುವ, ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾದ ಅಷ್ಟ ಅಷ್ಟಮಠಗಳು. ತೆಂಕಿಗೆ ಕೇವಲ ಹತ್ತು ಮೈಲಿನಲ್ಲಿ ಮಧ್ವಾಚಾರ್ಯರ ಜನ್ಮಸ್ಥಳ ಪಾಜಕ ಕ್ಷೇತ್ರ· ಕೇವಲ 4 ಮೈಲು ದೂರದ ಬಡಗಿನ ಬಾರಕೂರಿ (ತುಳುವ ರಾಜಧಾನಿ) ನಲ್ಲಿ ಮಧ್ವಾಚಾರ್ಯರ ಗುರು-ಪೀಠವಾದ ಭಂಡಾರಗಿರಿ ಮಠ. (ಅಚ್ಯುತ ಪ್ರೇಕ್ಷಾ-ಚಾರ್ಯರ ಪರಂಪರೆ) ಹೀಗೆ ಒಂದೆಡೆ ಕಲೆ, ಇನ್ನೊಂದೆಡೆ ತತ್ವಜ್ಞಾನ ಇವೆರಡನ್ನೂ ಬೆಸೆಯುವ ಕೊಂಡಿಯಂತಿದೆ ಬೈಕಾಡಿ ಗ್ರಾಮದ ಭದ್ರಗಿರಿ. ಇವೆರಡನ್ನು ಸಂಧಿಸುವ ಸುವರ್ಣ ಮಾಧ್ಯಮವೇ ಸುವರ್ಣಾನದಿ. ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ,ತುಳು ಎಂಬ ಎರಡು ಭಾಷಾ ಮಾಧ್ಯಮಗಳನ್ನು ವಿಭಜಿಸುವ ರೇಖೆಯೇ ಸುವರ್ಣಾನದಿ. ನದಿಯ ಈಚೆಯ ದಡ ಅಂದರೆ ಭದ್ರಗಿರಿಯ ಆಚೆಗೆ ತುಳು ಮಾತಾಡುವವರಿಲ್ಲ. ಕೇವಲ ಒಂದು ಮೈಲಿನ ಅಂತರದಲ್ಲೆ ತುಳು ಭಾಷೆಯ ಗಂಧವೇ ಇಲ್ಲದ ಕನ್ನಡಿಗರಿದ್ದಾರೆ. ಹಳೇಗನ್ನಡದ ಇವರ ಆಡುಮಾತು ಇಂದಿನ ಶಾಲಾಕಾಲೇಜುಗಳಿಗೆ ಪಠ್ಯಪುಸ್ತಕವಾದೀತು !

ಈ ಪರಿಸರದಲ್ಲಿ ಬೆಳೆದ ದಾಸರ ಬಾಲ್ಯ ಪ್ರಾಥ-ಮಿಕ ಶಾಲಾ ಶಿಕ್ಷಣದಲ್ಲೇ ಮುಗಿದು ಕಲೆ ಸಂಸ್ಕೃತಿಗಳೆಡೆಗೆ ಅವರು ಆಕರ್ಷಿತರಾದುದರಲ್ಲೇನೂ ಆಶ್ಚರ್ಯವಿಲ್ಲಾ. ಮೊದ ಮೊದಲು ಕಲೆಗಳಿಂದ ಆಕರ್ಷಿತರಾಗಿ ಬಳಿಕ ನಾನಾ ಕಲೆಗಳಿಂದ ಕಲೆತಿರುವ ಕಲೆಯಾದ ತತ್ವಜ್ಞಾನ ಪ್ರಧಾನವಾದ ಕೀರ್ತನ ಕಲೆಯ ಸೇವೆ ಅವರಲ್ಲಿ ಮೂಡಿ ಅವರು ಹರಿದಾಸರಾದುದು ಆಕಸ್ಮಿಕವೇನಲ್ಲಾ.

ಹಾಗೆ ನೋಡಿದರೆ ದಾಸರ ತಂದೆ–ತಾಯಿ ಇವರ ಪೂರ್ವಪರಂಪರೆ ಕಲಾವಿದ ಪರಂಪರೆಯೇ ಆಗಿತ್ತು. ದಾಸರ ತಾಯಿ ಸ್ವತಃ ನೂರಾರು ಭಜನೆ ಹಾಗೂ ಹಾಡುಗಬ್ಬಗಳನ್ನು ತಿಳಿದಿದ್ದರು. ಮಾತ್ರವಲ್ಲಾ ಹಾಡುತ್ತಿದ್ದರು, ದಾಸರ ತಾಯಿಯ–ತವರು ಭದ್ರಗಿರಿಯಿಂದ ಸುಮಾರು 20 ಮೈಲಿ ದೂರದ ಅನಂತ ಪದ್ಮನಾಭನ ಪವಿತ್ರ ಕ್ಷೇತ್ರವಾದ ಪೆರಡೂರು. ಅದು ಯಕ್ಷಗಾನದ ಕೇಂದ್ರವೂ ಹೌದು.ಮೇಳದಲ್ಲಿ ಬಹಳಕಾಲ ಭಾಗವತರೂ ಮದ್ದಳೆಗಾರರೂ ಆಗಿ ಸೇವೆ ಸಲ್ಲಿಸಿದ ಅಣ್ಣಪ್ಪ ನಾಯಕರೇ ದಾಸರ ತಾಯಿಯ ತಂದೆಯವರು. ಇಂದಿಗೂ ದಾಸರ ಸೋದರ ಮಾವಂದಿರ ಮಕ್ಕಳು ಆ ಮೇಳದಲ್ಲೇ ಭಾಗವತರಾಗಿದ್ದಾರೆ. ದಾಸರ ತಂದೆ ಅನಕ್ಷರಸ್ಥರಾದರೂ ಸ್ವತಃ ಯಕ್ಷಗಾನದ ಅರ್ಥಧಾರಿಗಳು. ನಿಜವಾಗಿ ಯಕ್ಷಗಾನ ತಾಳಮದ್ದಲೆಗಳು ದಕ್ಷಿಣ–ಕನ್ನಡ ಜಿಲ್ಲೆಗೇ ಕಲಾ ಸರಸ್ವತೀ ಕೊಟ್ಟ ದೊಡ್ಡ ಒಂದು ಕೊಡುಗೆ. ಇಲ್ಲಿಯ ಅನಕ್ಷರಸ್ಥರಾದ ಗ್ರಾಮೀಣ ಜನರು, ಪುರಾಣಗಳಲ್ಲಿನ ಪಾತ್ರವಹಿಸಿ ಆಡುವ ಸಾಹಿತ್ಯಾತ್ಮಕವಾದ ಅವರ ಮಾತುಗಾರಿಕೆ, ಶಬ್ದ ಸರಣಿ. ಪಂಪ, ರನ್ನ, ಕುಮಾರ ವ್ಯಾಸರನ್ನು ಜ್ಞಾಪಕಕ್ಕೆ ತರುವಂತಿದೆ. ಯಾವ ಕನ್ನಡ ಪಂಡಿತನೂ ಕಣ್ಣಾಡಿಸದಷ್ಟು ಗ್ರಂಥಗಳ ಜ್ಞಾನ ನಮ್ಮ ಹಳ್ಳಿಯ ಅನಕ್ಷರಸ್ಥರಿಗಿದೆ, ದಾಸರಿಗೆ ತನ ಹರಿಕಥಾ ವ್ಯವಸಾಯ ಪ್ರಾರಂಭ ಮಾಡಿದಾಗ ಕಥೆ ಕೇಳಲು ಸಿಕ್ಕಿದ ಶ್ರೋತೃಗಳೆಂದರೆ ಈ ಸಂಸ್ಕೃತ ಹಳ್ಳಿಯ ಜನರು. ಈಗಿನಂತೆ ರಾಮಾಯಣ ಭಾಗವತಗಳ ಗಂಧಗಾಳಿ ಇಲ್ಲದೆ, ಹೇಳಿದ್ದಕ್ಕೆಲ್ಲ ಹಲ್ಲುಕಿರಿದು ತಲೆ ತೂಗುವ ನವ ನಾಗರಿಕರಲ್ಲಾ. ಹೀಗಾಗಿ ದಾಸರಿಗೆ ಗ್ರಾಮವೇ ಆ

ಗ್ರಾಮದ ಜನರೇ, ಗ್ರಾಮ ದೇವತೆಯಾದ ಕಾಮೇಶ್ವರನೇ, ಗ್ರಾಮಾಧಿಪತಿಯಾದ ವೀರವಿಠ್ಠಲನೇ ಗುರು. ಈ ದೇಶೀ ಪದ್ಧತಿಗೆ ಒಂದು ಮಾರ್ಗ ಪದ್ಧತಿ ದಾಸರಿಗೆ ದೊರಕಿದುದು ೧೯೫೩ರಲ್ಲಿ. ಶ್ರೀ ಆಚಾರ್ಯ ಮಧ್ವರ ಪರಂಪರೆಯ ಔತ್ತರೇಯ ಪೀಠಗಳಲ್ಲಿ ಒಂದಾದ ಶ್ರೀ ಕಾಶೀಮಠದ ಪರಂಪರೆಯಲ್ಲಿ ಬಂದ ಶ್ರೀ ಶ್ರೀ ಸುಧೀಂದ್ರ ತೀರ್ಥ ಶ್ರೀಪಾದಂಗಳವರೇ ದಾಸರಿಗೆ ಕೀರ್ತನೆಗೆ ಶಾಸ್ತ್ರೀಯವಾದ ಮಾರ್ಗಪದ್ಧತಿಯನ್ನು ಅನುಗ್ರಹಿಸಿದವರು. ಆಗ ಶ್ರೀ ಶ್ರೀಗಳವರು ಚಾತುರ್ಮಾಸ್ಯ ವ್ರತಕ್ಕಾಗಿ ಕೋಟೇಶ್ವರದ ಪಟ್ಟಾಭಿರಾಮಚಂದ್ರ ದೇವಸ್ಥಾನದಲ್ಲಿ ಇದ್ದರು, ದಾಸರು ಶ್ರೀಗಳವರ ದರ್ಶನ ಪಡೆದು ತನ್ನನ್ನು ಹರಿಗುರು ಸೇವೆಗೆ ಅರ್ಹನಾಗಿಸಿ ಜೀವನ ಉಜ್ಜೀವನ ಪಥವನ್ನು ಕಾಣಿಸಿ ಕಾಪಾಡಬೇಕೆಂದು ಪ್ರಾರ್ಥಿಸಲು, ಗುರುಗಳು, ದಾಸರಿಗೆ ಮಠದಲ್ಲಿ ಆಶ್ರಯವಿತ್ತು ಕಾಲ ಕಾಲಕ್ಕೆ ತತ್ವರಹಸ್ಯ, ಧರ್ಮಾಚರಣೆ, ಕೀರ್ತನ ಪದ್ಧತಿಯ ಮಹಿಮೆ, ಸಾಧನಾ ಮಾರ್ಗ ಬೋಧಿಸಿ ನಿತ್ಯವೂ ಅವರ ಆರಾಧ್ಯ ದೇವರಾದ ಶ್ರೀ ವೇದವ್ಯಾಸ ರಘುಪತಿ ದೇವರ ಮುಂದೆ ಕೀರ್ತನ ಮಾಡಿಸಿ, ತಾನೇ ಕುಳಿತು ಕೇಳಿ ದೋಷಗಳನ್ನು ತಿದ್ದಿ ಆಶೀರ್ವದಿಸಿ ಅನುಗ್ರಹಿಸಿದರಂತೆ. ಅಂದಿನಿಂದ ಇಂದಿನ ತನಕವೂ ಪ್ರತಿ ವರ್ಷ ದಾಸರು ಶ್ರೀ ಶ್ರೀಗಳವರ ಚಾತುರ್ಮಾಸಾದಿ ವ್ರತ ದಿನಗಳಲ್ಲಿ ಶ್ರೀ ಗುರು ಸನ್ನಿಧಿಗೆ ಹೋಗಿ ಕೀರ್ತನೆ ಸೇವೆ ಮಾಡಿ ಬರುವ ಪದ್ಧತಿ ಇಟ್ಟುಕೊಂಡಿದ್ದಾರೆ. ಶ್ರೀಮಠದಲ್ಲಿ ಇದ್ದಾಗ ದಾಸರು,

" ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ "

ಎಂಬ ಗೀತೋಕ್ತಿಯಂತೆ ಗುರುಪಾದಕ್ಕೆರಗಿ ನಾನಾ ರೀತಿ ಅವರ ಸೇವೆಗೈದು ಕಾಲ ಕಾಲದಲ್ಲಿ ಗುರುಗಳಲ್ಲಿ ಆಧ್ಯಾತ್ಮಿಕ ರಹಸ್ಯಗಳನ್ನು ಕೇಳಿ ತಿಳಿದು ತನ್ನ ಸಂಶಯ ಪರಿಹರಿಸಿಕೊಳ್ಳುತ್ತಿದ್ದರಂತೆ.

### ಅಂಕಿತವಿಲ್ಲದೇ ಇರಬಾರದು

ಆದರೂ ದಾಸರಿಗೆ ಗುರುಗಳಿಂದ ಅಂಕಿತ ಪಡೆವ ಪೂರ್ವಪರಂಪರೆ ತನಗಿಲ್ಲಾ ಎಂಬ ಒಂದು ಕೊರತೆ ಮನಸ್ಸನ್ನು ಕೊರೆಯುತ್ತಿತ್ತು. ಅದು 1956 ರಲ್ಲಿ ಶ್ರೀ ಕಾಶೀಮಠಾಧೀಶರ ಉಡುಪಿಯ ಚಾತುರ್ಮಾಸ್ಯದ ಸಂದರ್ಭದಲ್ಲಿ ಪೂರ್ಣಗೊಂಡಿತು. ಆಗ ದಾಸರು ಶ್ರೀ ಹರಿಗುರು ಸನ್ನಿಧಿಯಲ್ಲಿ 4 ತಿಂಗಳು ಮಹಾಭಾರತ ಹರಿಕಥೆಯನ್ನು ಮಾಡಿ ಮಂಗಲದಂದು ಪ್ರಾತಃಕಾಲದಲ್ಲಿ ಸ್ನಾನ ಸಂಧ್ಯಾತೀರಿಸಿ ಗುರುಪಾದಕ್ಕೆ ಅಡ್ಡಬಿದ್ದು ನನಗೆ ಅಂಕಿತವಿತ್ತು ಉದ್ಧರಿಸಬೇಕೆಂದು ಪ್ರಾರ್ಥಿಸಲು ಗುರುಗಳು ಸಮ್ಮತಿಸಿ, ದಾಸರಿಗೆ, ಚಕ್ರಾಂಕನಗೈದು ಶ್ರೀ ಶಾಲಿಗ್ರಾಮ ಚಕ್ರಾಣಿಕಗಳನ್ನೂ, ತುಲಸೀಮಾಲೆಯನ್ನೂ ಇತ್ತು ರಕ್ಷಾವಸನ ಮಠದಿಂದ ಶಹಲು ಜೋಡಿ, "ಕೀರ್ತನಾಗ್ರೇಸರ" ಎಂಬ ಬಿರುದು ಸ್ವರ್ಣಪದಕ, ಎಲ್ಲಕ್ಕಿಂತ ಹೆಚ್ಚೆಂದರೆ ಸಹಸ್ರಾರು ಜನರ ಮುಂದೆ "ಮೂಲನಾರಾಯಣ" ಎಂಬ ಅಂಕಿತವಿತ್ತು ಹರಸಿದರಂತೆ. ದೈವೀಕಳೆಯಿಂದೊಡಗೂಡಿದ ಈ ಸಮಾರಂಭವು ಅತ್ಯಂತ ಮನೋಹರವಾಗಿತ್ತೆಂದು ಉಡುಪಿಯ ಮಹಾಜನರು ಈಗಲೂ ಜ್ಞಾಪಿಸಿಕೊಳ್ಳುವರು.

### ದಾಸರ ಸಂಚಾರ

ಗುರುವಿನ ಗುಲಾಮನಾದೆನೆಂದು ಹಿಗ್ಗಿದ ದಾಸರು ಹಿಂದಿನಗಿಂತ ಹೆಚ್ಚು ಉತ್ಸಾಹದಿಂದ ಭಕ್ತಿಧರ್ಮ ಪ್ರಚಾರಕ್ಕೆ ತಮ್ಮನ್ನು ಮುಡುಪಾಗಿಟ್ಟುಕೊಂಡರು. ಕರ್ನಾಟಕ, ಮೈಸೂರು. ಉತ್ತರ–ದಕ್ಷಿಣ ಕನ್ನಡ, ಹಾಗೂ ತುಳು ನಾಡಿನಲ್ಲಿ ದಾಸರು ಸಂಚರಿಸದ ಹಳ್ಳಿಗಳೇ ಇಲ್ಲಾ ಎಂದರೆ ಅತಿಶಯೋಕ್ತಿಯಲ್ಲಾ. ದಾಸರ ವೈಶಿಷ್ಟ್ಯವೆಂದರೆ ಆಯಾ ಭಾಷೆಯ ಹಳ್ಳಿಗಳಲ್ಲಿ ಅವರ ಆಡುಮಾತುಗಳಲ್ಲೇ ಅಂತಃಕರಣ ಕುಲುಕುವಂಥಹ ಆದರ್ಶನೀತಿ ಕಥೆ, ಭಜನೆ ಇವುಗಳ ದ್ವಾರಾ ಜನರಲ್ಲಿ ಸಾತ್ವಿಕಶಕ್ತಿಯನ್ನು ಜಾಗ್ರತಗೊಳಿಸುವುದು.

ಹಾಗೆಯೇ ದಾಸರು ಮುಂಬಯಿ, ಗುಜರಾತ, ಮದ್ರಾಸ್, ಆಂಧ್ರ, ಕೇರಳದಲ್ಲಿರುವ ಹೊರನಾಡಿನ ಕನ್ನಡಿಗರಿಗೂ ಅಲ್ಲಿಗೆ ಹೋಗಿ ಕೀರ್ತನ ಭಕ್ತಿ ಪ್ರಚಾರ ಮಾಡಿದ್ದಾರೆ. ಇಂದಿಗೂ ಮಾಡುತ್ತಿದ್ದಾರೆ. ಅವರ ಅವಿಶ್ರಾಂತ ಅಧ್ಯಯನದ ಫಲವಾಗಿ ಅವರಿಗೆ ಹಿಂದೀ, ಮರಾಠಿ ಭಾಷೆಯಲ್ಲೂ ಪ್ರಭುತ್ವವಿರುವುದು. ಅವರು ತನ್ನೀ ಕೀರ್ತನೆಯಲ್ಲಿ ಅಸಂಖ್ಯಾತ ಅನ್ಯ ಭಾಷೆಯ ಸಂತರ ವಾಣಿಗಳನ್ನು ಉದಾಹರಿಸುವುದೇ ಸಾಕ್ಷಿಯಾಗಿದೆ. ಹಿಂದೀ ಮರಾಠಿಯಲ್ಲೂ ಆಯಾಯ ಪ್ರಾಂತ್ಯಗಳಲ್ಲಿ ಹರಿಕಥೆಗಳನ್ನು ಮಾಡಿ ಆ ಜನರ ಪ್ರೀತಿಗೆ ಪಾತ್ರರಾಗಿ

ದ್ದಾರೆ. ಅವರ ಕೊಂಕಣಿ ಭಾಷೆಯ ಕೀರ್ತನೆಗಳು ಗೋವಾದಿಂದ ಗೋಮಾಂತದ ತನಕ ಇವರ ಕೊಂಕಣಿ ಜನರಿಗೆ ಬಹು ಪ್ರಿಯವಾಗಿದೆ. ಸತ್ಸಂಗ ಯಾತ್ರಾ ಪ್ರವಾಸಗಳನ್ನೇರ್ಪಡಿಸಿ ದಾಸರು ಆ ಸೇತು ಹಿಮಾಚಲ ವನ್ನು ಅನೇಕ ಬಾರಿ ಸುತ್ತಿದ್ದಾರೆ, ಈ ದಿಶೆಯಲ್ಲಿ ಅವರ ಅನುಭವ ಅಪಾರ, ತಮ್ಮ ಅವಿಶ್ರಾಂತ ಸಂಚಾರ ಅಧ್ಯಯನಗಳ ಬಿಡುವಿಲ್ಲದ ಕಾರ್ಯಕ್ರಮ ಗಳಲ್ಲೂ ದಾಸರು ಅನೇಕ ಪತ್ರಿಕೆಗಳಿಗೆ ಅಮೂಲ್ಯ ಲೇಖನಗಳನ್ನು ಒದಗಿಸವುದಲ್ಲದೇ, ಕೀರ್ತನಕಾರರಿಗೆ ಉಪಯುಕ್ತವಾಗುವ ಅನೇಕ ಗ್ರಂಥರಚನೆ ಮಾಡಿದ್ದಾರೆ. ಗೀತಾರ್ಥ ಚಿಂತನೆ, ಹರಿಕಥಾ ಪೂರ್ವರಂಗ, ಯಾತ್ರಿಕನ ಭಜನೆಗಳು, ಹಾಗೂ ಅನೇಕ ಹಿಂದೀ ಮರಾಠೀ ಸಂತರ ಸಾಹಿತ್ಯಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇನ್ನೂ ಮಾಡುತ್ತಲೇ ಇದ್ದಾರೆ. ದಾಸರಲ್ಲಿ ಪ್ರತ್ಯಕ್ಷ ಪರೋಕ್ಷವಾಗಿ ಕೀರ್ತನಾಭ್ಯಾಸ ಮಾಡಿದ ಅನೇಕ ಶಿಷ್ಯ ಸಂಪತ್ತು ಕನ್ನಡ ನಾಡಿನಲ್ಲಿ ಹರಿಕಥೆಗಳನ್ನು ನಡೆಸುತ್ತಾ ಇದ್ದಾರೆ. ತಮ್ಮನ್ನು ಕೀರ್ತನಕಾರರಾಗಿಸಲು ಶಿಕ್ಷಣ ವೀಯಬೇಕೆಂದು ಇಂದಿಗೂ ದಾಸರಿಗೆ ಅಸಂಖ್ಯಾತ ಪತ್ರಗಳು ಬರುತ್ತಿವೆ.

### ಗ್ರಂಥ ರಚನೆ

ಈ ನಡುವೆ ದಾಸರು ತಾವೇ ನಾಟಕ ಬರೆದು ನಿರ್ದೇಶಿಸಿದ್ದೂ ಇದೆ. ತಾವೇ ಪಾತ್ರವಹಿಸಿದ್ದೂ ಇದೆ. ಇವರು ಬರೆದ ಮೊದಲ ನಾಟಕ 'ಪರಿವರ್ತನ' ಎಂಬ ಕೊಂಕಣೀ ನಾಟಕ (1956) ಅದರಲ್ಲಿ ದಾಸರು ತಾವೇ ಪಾತ್ರವಹಿಸಿದ್ದಾರೆ. ಹಾಗೆಯೇ ಯಕ್ಷಗಾನ ಬಯಲಾಟ. ನಾಟಕಗಳಲ್ಲೂ ಪಾತ್ರವಹಿಸಿ ಅಸಂಖ್ಯಾತ ಕಲಾವಿದರ ಮೆಚ್ಚುಗೆಯನ್ನು ಪಡೆದಿದ್ದಾರೆ, ಇವರು ಶ್ರೀ ಪುರಂದರ ದಾಸರ ನಾಟಕದಲ್ಲಿ ವಹಿಸಿದ ಶ್ರೀ ವ್ಯಾಸರಾಯರ ಪಾತ್ರ ಕಂಡು ಮೆಚ್ಚಿದ ಮಹನೀಯರುರೊಬ್ಬರು ಚಲನ ಚಿತ್ರ ಪ್ರಪಂಚಕ್ಕೂ ಆಹ್ವಾನಿಸಿದ್ದರು. ದಾಸರು ವಿನಮ್ರರಾಗಿ ಅದನ್ನು ನಿರಾಕರಿಸಿದುದು ಅವರ ತತ್ತ್ವನಿಷ್ಠೆಯ ದ್ಯೋತಕವಾಗಿದೆ. ದಾಸರು ಮೂಲನಾರಾಯಣ ಅಂಕಿತದಿಂದ ಸಹಸ್ರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಅನೇಕ ಹರಿಕಥಾ ಸಾಹಿತ್ಯವೂ ಈಗ ಅಚ್ಚಿನಲ್ಲಿ ಇದೆ.

### ಪತ್ರಿಕಾಕರ್ತರಾಗಿ

ದಾಸರು ದಾಸ ಸಾಹಿತ್ಯ ಹಾಗೂ ಅಧ್ಯಾತ್ಮ ಪ್ರಸಾರಕ್ಕಾಗಿ 1960ರಲ್ಲಿ "ದಾಸ ಬಂಧು" ಎಂಬ ಮಾಸ ಪತ್ರಿಕೆ ಪ್ರಾರಂಭ ಮಾಡಿ 61ರಲ್ಲಿ, ಶ್ರೀ ಕೇಶವದಾಸರು ದಿನ ಪತ್ರಿಕೆಯಾದ "ದಾಸವಾಣಿ" ಮಾಸ ಪತ್ರಿಕೆಯಾಗಿ ಪರಿವರ್ತಿಸಿದಾಗ ತಮ್ಮ ಪತ್ರಿಕೆ ನಿಲ್ಲಿಸಿ ದಾಸವಾಣಿಗೇ ಹೆಚ್ಚಿನ ಲೇಖನಗಳನ್ನು ಬರೆದು ತನ್ಮೂಲಕ ಸಂದೇಶ ವೀಯುತ್ತಿದ್ದಾರೆ. ಇವರು ಬರೆದ ನೀತಿ ಕಥೆ, ದಾಸ ಸಂದೇಶಗಳು ದಾಸವಾಣಿ ಓದುಗರಿಗೆ ಅಧ್ಯಾತ್ಮ ರಸ ದೂಟವನ್ನು ಉಂಟುಮಾಡುತ್ತಾರೆ. ಅನೇಕ ದಿನ ಪತ್ರಿಕೆ ಗಳಿಗೆ, ಮಾಸ ಪತ್ರಿಕೆಗಳಿಗೆ ಅವರು ಅಮೂಲ್ಯ ಲೇಖನ ಒದಗಿಸಿದ್ದಾರೆ. ದಾಸವಾಣಿಯಲ್ಲಿ ಅವರು ಬರೆಯುವ ವಿಮರ್ಶಾತ್ಮಕವಾದ ಲೇಖನ, ಕೀರ್ತನ ಸಾಹಿತ್ಯ ಅನೇಕ ಕೀರ್ತನಕಾರರರಿಗೆ ತಮ್ಮ ಕೀರ್ತನ ಕಲೆಯ ಅಭಿವೃದ್ಧಿಗೆ ಸಹಾಯವಾಗಿದೆ. ಅನೇಕ ಸ್ಮರಣ ಸಂಚಿಕೆಗಳಿಗೆ ಅವರು ಬರೆದ ಸಹಸ್ರಾರು ಲೇಖನಗಳು ಸಂಗ್ರಹಕ್ಕೆ ಯೋಗ್ಯ ವಾಗಿದೆ. ಅನೇಕ ಸಂಘ ಸಂಸ್ಥೆಗಳು ಪ್ರಕಟಿಸಿದ ಸ್ಮರಣ ಸಂಚಿಕೆಗಳಿಗೆ ದಾಸರೇ ನಿರ್ದೇಶನ ಮಾಡಿದ್ದುಂಟು. ಇದೆಲ್ಲವನ್ನು ದಾಸರು ನಿಷ್ಕಾಮ ಹಾಗೂ ನಿಸ್ಪೃಹರಾಗಿ ಮಾಡುವ ಸೇವೆಯೇ ಹೊರತು ಇತರ ಲಾಕಿಕ ಫಲದಾಸೆ ಯಿಂದಲ್ಲ ಎಂಬುದು ಗಮನಾರ್ಹವಾದುದು.

### ದಾಸರ ಕೀರ್ತನೆಯ ವೈಶಿಷ್ಟ್ಯ

ಅಚ್ಯುತದಾಸರು ತಮ್ಮ ಅಚ್ಚು ಮೆಚ್ಚಿನ ದಾಸ ರೆಂದು ಅವರ ಅಭಿಮಾನಿಗಳು ಹೇಳುವುದು ಅವರ ಕೀರ್ತನ ಕಲೆಯ ವೈಶಿಷ್ಟ್ಯಕ್ಕಾಗಿ ಎಲ್ಲಕ್ಕಿಂತ ಅವರ ಕೀರ್ತನೆಯ ಉಪಕ್ರಮ ಉಪಸಂಹಾರಗಳೇ ಬಹಳ ಸುಂದರ, ಉಪಕಥೆಗಳು ಕೇವಲ ಹಾಸ್ಯವಾಗಿರದೆ ದಾಸ್ಯರಸ ಯುಕ್ತವಾದ ಬೋಧಪ್ರದಗಳು ಮಾತ್ರವಲ್ಲಾ ಮೂಲಕಥೆಗೆ ಅತೀ ಹತ್ತಿರದ ಸಂಬಂಧ ಉಳ್ಳವುಗಳು ಹೆಚ್ಚುಕಡಿಮೆ 3 ಗಂಟೆಗಳ ಅವರ ಕೀರ್ತನೆಯುಲ್ಲಿ 1 ಗಂಟೆ ಪೀಠಿಕಾ ಪ್ರಕರಣ, ಅದು ಕಥೆಯ ಮೂಲ ಸತ್ವ. ಆ ಬಳಿಕ ಸಾಮೂಹಿಕ ಸಂಕೀರ್ತನೆ. ಅದು ಸಾಧನೆ ಆಮೇಲೆ ಕಥೆ, ಕೊನೆಗೆ ಮೂಲಪೀಠಿಕೆಯ ಹಾಡಿನ ಅರ್ಥ ಸಮನ್ವಯದೊಂದಿಗೆ ಮಂಗಲ.

ದಾಸರು ತಮ್ಮ ಕೀರ್ತನೆಗಳಲ್ಲಿ ಸನಕಾದಿಗಳಿಂದ ಹಿಡಿದು ಕನಕಾದಿ ದಾಸರ ತನಕ ದೃಷ್ಟಾಂತಗಳನ್ನು ಕೊಡುವುದು ಅವರ ಅಧ್ಯಯನದ ಪ್ರೌಢಿಮೆಯನ್ನು ಕಾಣಿಸುತ್ತದೆ, ಅವರು ಜನಕ ಮಹಾರಾಜನ ತತ್ವ-ಜ್ಞಾನದಿಂದ ಜನ ಸಾಮಾನ್ಯನ ಸಾಕ್ಷಿಕತೆಯನ್ನು ಉದಾಹರಿಸಿ ಸಾಮಾನ್ಯರಲ್ಲೂ ಭರವಸೆ ಮೂಡಿಸುವುದೂ ಅನ್ಯಾದೃಷ್ಯವಾದುದು. ದಿನಕ್ಕೆ 2–3 ಕಥೆ ಮಾಡಿದರೂ ಜಗ್ಗದ ಬಗ್ಗದ ಅವರ ಕಂಠ ಶ್ರೀ ದೈವದತ್ತವಾದ ಕೊಡುಗೆ. ಶಿರೋವೇಷ್ಟನದಿಂದೊಡಗೂಡಿದ ಶುಭ್ರ ವಸನ ಧರಿಸಿದ ಗಂಭೀರವಾದ ಅವರ ವೇಷಭೂಷಣವೇ ಕೀರ್ತನ ಸಭೆಗಳಲ್ಲಿ ಒಂದು ಪವಿತ್ರ ವಾತಾವರಣ ಉಂಟು ಮಾಡಿ ಶ್ರೋತೃಗಳಿಗೆ ದಾಸರಲ್ಲಿ ಸಹಜವಾಗಿಯೊ ಗೌರವ ಭಾವ ಮೂಡಿಸುವಂತಿರುತ್ತದೆ. ಸಾತ್ವಿಕರ ಅನೇಕ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡುವುದು ಅವರ ನಿಗರ್ವೀ ನಿರಾಡಂಬರ ಅವರ ವ್ಯಕ್ತಿತ್ವಕ್ಕೆ ಇನ್ನೂ ಹೆಚ್ಚಿನ ಮೆರಗನು ಕೊಟ್ಟಿದೆ.

ಎಲ್ಲಕ್ಕಿಂತ ದಾಸರು ಪ್ರಾತಃಕಾಲದಲ್ಲಿ ನಡೆಸುವ ಗೀತಾಪ್ರವಚನವಂತೂ ಅಧ್ಯಾತ್ಮರಸದೂಟ. ಭಗವದ್ಗೀತೆ ಉಪನಿಷತ್ತುಗಳಲ್ಲಿನ ವಿಷಯಗಳನ್ನು ದಾಸರ ಶರಣರ ಸಂತರ ಕೀರ್ತನೆಗಳೊಡನೆ ಸಮನ್ವಯ ಮಾಡುವ ಅವರ ಜಾಣ್ಮೆ ವ್ಯಾಸಂಗ ವ್ಯಾಪ್ತಿ ಪಂಡಿತ ಪಾಮರರಿಗೂ ಮಾನ್ಯವಾಗಿದೆ. ದಾಸರ ಸ್ವಮತ ಧಾರ್ಮ್ಯದೊಂದಿ-ಗಿರುವ ಪರಮತ ಸಹಿಷ್ಣುತೆ ಎಲ್ಲಾ ಮತದ ಜನರಿಗೂ ದಾಸರಲ್ಲಿ ಗೌರವ ಮೂಡಲು ಕಾರಣವಾಗಿದೆ. ವೈಷ್ಣವ ಶೈವ ಪೀಠಗಳಲ್ಲದೆ ಅನೇಕ ವೀರಶೈವ, ಜೈನಪೀಠಗಳೂ ದಾಸರನ್ನು ಕರೆಸಿ ಕೀರ್ತನವೇರ್ಪಡಿಸಿ ಅನೇಕ ಬಿರುದು ಸನ್ಮಾನಿಸಿದೆ. ಜೈಲುಗಳಲ್ಲಿ, ಮನೋರೋಗಿಗಳ ಆಸ್ಪತ್ರೆಯಲ್ಲಿ, ಅನಾಥ ಆಶ್ರಮಗಳಲ್ಲಿ, ಪ್ರಾಥಮಿಕ ಶಾಲೆಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ, ಯಾತ್ರೆಗಳಲ್ಲಿ, ಜಾತ್ರೆಗಳಲ್ಲಿ ನೂರಾರು ಸಭಾ ಸಮಾರಂಭಗಳಲ್ಲಿ ಒಟ್ಟಿನಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಆಯಾಯ ಜನರಿಗೆ ಆತ್ಮಾನಂದವನ್ನುಂಟು ಮಾಡುವ ದಾಸರ ಕೀರ್ತನೆ ಅವರಿಗೆ ಹಾಗೂ ಸಮಾಜಕ್ಕೂ ದೊರೆತ ಒಂದು ವರಪ್ರಸಾದವೇ ಆಗಿದೆ ಎನ್ನಲು ಅಡ್ಡಿಯಿಲ್ಲ.

## ಆದರ್ಶ ಸಂಸಾರ

### "ಸತಿಯು ಅನುಕೂಲಳು ಬೇಕು"

ದಾಸರು ಗೃಹಸ್ಥಾಶ್ರಮ ಸ್ವೀಕರಿಸಿದುದು 1951 ಇಸವಿಯಲ್ಲಿ. ಆಗ ಅವರ ವಯಸ್ಸು 19. ದಕ್ಷಿಣ ಕನ್ನಡ ಜಿಲ್ಲೆಯ ವೈದಿಕ ಮನೆತನದ ಸುಮಿತ್ರಾದೇವಿಯೇ ಅವರ ಧರ್ಮಪತ್ನಿ, (ಈಗ ಶ್ರೀಮತಿ ಎಂದು ಹೆಸರು.) ಪತಿಗೆ ಅನುಕೂಲರಾದ ಶ್ರೀಮತಿದೇವಿಯರು ದಾಸರ ಗೃಹಸ್ಥ ಜೀವನದ, ಮನೆಯ ಎಲ್ಲಾ ಹೊಣೆ ತಾವು ಹೊತ್ತು ಪತಿಯ ಪುಣ್ಯ ಕಾರ್ಯದಲ್ಲಿ ಸದ್ದಿಲ್ಲದೆ ಸಹಾಯ ಸಲ್ಲಿಸುವ ಸುವ್ರತೆಯರು, ದಾಸರ ಅಸಂಖ್ಯಾತ ಅಭಿಮಾನಿಗಳೂ ಭಕ್ತರೂ ಶಿಷ್ಯರೂ ಮನೆಗೆ ಬಂದಾಗ ಆದರ್ಶ ಸತ್ಕಾರವೀಯುವ ಅನ್ನಪೂರ್ಣೆಯವರು. ಪತಿಯ ಕೀರ್ತನೆ ನಿತ್ಯ ಕೇಳುವ ಭಾಗ್ಯ ತನಗಿಲ್ಲ ಎಂಬ ಇವರ ಕೊರಗು, ಅತಿಥಿ ಸೇವೆಯೇ ಹರಿಸೇವೆ ಎಂಬ ಭಾವದಿಂದ ತುಂಬಿ ಬರುತ್ತದೆಂದು ಅವರೆ ಹೇಳುತ್ತಾರೆ, ಮಹಾ ಮಹಾ ಮಂಗಲ ಸಮಾರಂಭಗಳಲ್ಲಿ ಪತ್ನಿಯನ್ನು ಕರೆಸಿ ಎಲ್ಲರ ಆನಂದದಲ್ಲಿ ಅವರೂ ಪಾಲುಗೊಳ್ಳುವಂತೆ ಮಾಡುವುದಲ್ಲದೇ ತನ್ನ ತೀರ್ಥಯಾತ್ರೆಗಳಲ್ಲೆಲ್ಲಾ ಅವರನ್ನೂ ಕರೆದೊಯ್ದಿದ್ದಾರೆ. ಅನುಕೂಲಳಾದ ಈ ಆದರ್ಶ ಪತ್ನಿಯನ್ನು ಪಡೆದ ದಾಸರು ಹರಿಕೃಪೆಯಿಂದ ಶ್ರೇಯ ಪ್ರೇಯ ಎರಡನ್ನೂ ಹೊಂದಿದ್ದಾರೆ.

## ಭದ್ರಗಿರಿಯ ಸಹೋದರರು

ಮೇಲಿನ ಈ ಖ್ಯಾತಿ ವಿಶ್ವದಲ್ಲಿ, ಭಾರತದಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ಉಂಟು ಮಾಡಿದವರು ಶ್ರೀ ಅಚ್ಯುತದಾಸರ ತಮ್ಮಂದಿರಾದ; ಅಂತರ್ರಾಷ್ಟ್ರೀಯ ಖ್ಯಾತರಾದ ಸಂತ ಭದ್ರಗಿರಿ ಕೇಶವದಾಸರು. ಸ್ವತಃ ಆಂಗ್ಲ ವಿದ್ಯಾ ವಿಶಾರದರಾದರೂ B.A, LLB ಪದವಿ-ಧರರಾದ ಬಹುಭಾಷಾ ಪಾಂಡಿತ್ಯವುಳ್ಳ ಶ್ರೀ ಕೇಶವ-ದಾಸರು ತಮ್ಮ ಎಲ್ಲಾ ದಾಸಾಶ್ರಮ ಕೇಂದ್ರಗಳಿಗೆ ತನ್ನ ಅಣ್ಣಂದಿರನ್ನೇ ಗೌರವಾಧ್ಯಕ್ಷರಾಗಿಸಿ ಅವರಿಂದ ಸಲಹೆ ಪಡೆಯುವುದು, ಅವರಿಗೆ ಅಣ್ಣಂದಿರಲ್ಲಿರುವ ಅಪಾರ ಗೌರವವನ್ನು ಸೂಚಿಸುತ್ತದೆ. ದೂರದ ಹಳ್ಳಿಯಿಂದ, ಸಹೋದರರನ್ನೆಲ್ಲಾ ನಗರಕ್ಕೆ ತಂದು

ತನ್ನೊಡನೆ ಸಹೋದರರನ್ನು ಖ್ಯಾತನಾಮರಾಗಿಸಿದ ಅವರ ಭ್ರಾತೃಪ್ರೇಮ ಅಸದೃಶವಾದುದು. ಹಾಗೆಯೇ ಅಚ್ಯುತದಾಸರು ತನ್ನ ಸಹೋದರನ ಎಲ್ಲಾ ಸತ್ಕಾರ್ಯಗಳನ್ನೂ ತನ್ನ ನೈತಿಕ ಹಾಗೂ ಪ್ರಾಮಾಣಿಕ ಬೆಂಬಲದಿಂದ ಸಹಕರಿಸಿ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿರುವರು.

ಶ್ರೀ ಕೇಶವದಾಸರು ಪ್ರಧಾನ ಸಂಚಾಲಕರಾಗಿಯೂ 1964 ಮತ್ತು 65 ರಲ್ಲಿ ಅಖಿಲ ಕರ್ನಾಟಕ ಹಾಗೂ ಅಖಿಲ ಭಾರತ ಕೀರ್ತನಕಾರರ ಸಮ್ಮೇಳನದಲ್ಲಿ ಶ್ರೀ ಅಚ್ಯುತದಾಸರು ಸಂಚಾಲಕರಾಗಿಯೂ ಸಮ್ಮೇಳನ ಸಂಚಿಕೆಯ ಪ್ರಧಾನ ಸಂಪಾದಕರಾಗಿಯೂ ಸಮ್ಮೇಳನ ಯಶಸ್ವಿಯಾಗಿಸಿರುವರು, ಹಾಗೆಯೇ ದಾಸರ 3 ನೇ ತಮ್ಮಂದಿರಾದ ಶ್ರೀ ಭದ್ರಗಿರಿ ಸರ್ವೋತ್ತಮದಾಸರು ಪದವೀಧರರಿದ್ದು ತಾವು ಸ್ವತಂತ್ರ ಮುದ್ರಣಾಲಯವನ್ನು ನಡೆಸುತ್ತ ಇತ್ತ ಹರಿಕಥಾ ವ್ಯವಸಾಯವನ್ನೂ ನಡೆಸುತ್ತ ತಮ್ಮ ಅಣ್ಣಂದಿರರ ಸಕಲ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮ ಸಹಾಯಹಸ್ತ ವೀಯುತ್ತಾರೆ. ಕೊನೆಯ ಸಹೋದರ ವಿಠ್ಠಲದಾಸರೂ ಭಜನ ಸಂಕೀರ್ತನೆಗಳಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದು ಅಣ್ಣಂದಿರರ ಎಲ್ಲಾ ಕಾರ್ಯಕ್ರಮಗಳಲ್ಲಿ ನೆರವಾಗುವ ನಿಷ್ಠೆ ಉಳ್ಳವರು. ಜೀವನ ಪಥದಲ್ಲಿ ಇವರು ಬೇರೆ ಬೇರೆಯಾದರೂ ಉಜ್ಜೀವನ ಪಥದಲ್ಲಿ ಒಂದಾಗಿ ಮುನ್ನಡೆಯುವ ಆದರ್ಶವು ಯಾರಾದರು ಅನುಕರಿಸುವಂತಿದೆ.

### ರಜತೋತ್ಸವ – ಭಾರತ ಜ್ಯೋತಿ ಟ್ರಸ್ಟ

ದಾಸರು ಕೀರ್ತನ ರಂಗದಲ್ಲಿ ಸ್ಮರಣೀಯ ಸೇವೆ ಸಲ್ಲಿಸಿ 25 ವರ್ಷಗಳು ಮುಗಿಯುತ್ತಲೇ ಅವರ ಅಭಿಮಾನಿಗಳು ಹರಿದಾಸ ದೀಕ್ಷಾ ರಜತೋತ್ಸವದ ಸಿದ್ಧತೆ ನಡೆಸಲು ಅಣಿ ಮಾಡುತ್ತಿರುವಾಗ ಅದು ವ್ಯಕ್ತಿನಿಷ್ಠೆಯಲ್ಲಿ ಪರ್ಯವಸಾನ ಹೊಂದದೆ ಒಂದು ಧ್ಯೇಯಕ್ಕಾಗಿ ಇರಬೇಕೆಂದು ದಾಸರು ನಿರ್ದೇಶಿಸಿದರು. ತನ್ನಂತೆ ಕೀರ್ತನ ರಂಗದಲ್ಲಿ 40–50 ವರ್ಷಗಳ ತನಕ ಸೇವೆ ಸಲ್ಲಿಸಿದ ಹರಿಯ ಕೀರ್ತನಕಾರರನ್ನು ಗೌರವಿಸುವ ಸಲುವಾಗಿ ತನ್ನ ರಜತೋತ್ಸವ ನಡೆಯಬಹುದೆಂದೂ ಇದರಿಂದ ಕೀರ್ತನ ಪರಂಪರೆಗೆ ತಾನೇನಾದರೂ ಸೇವೆ ಸಲ್ಲಿಸುವಂತಾಗಲೆಂದು ಅವರು ಅಪೇಕ್ಷಿಸಿ ಅಭಿಮಾನಿಗಳಿಂದ ಸಂಗ್ರಹವಾದ ನಿಧಿಯನ್ನು ತಾವು ನಿರ್ಮಿಸಿದ ಭಾರತ ಜ್ಯೋತಿ ಟ್ರಸ್ಟಿಗೆ ಸಮರ್ಪಿಸಿ ಅದರ ಧ್ಯೇಯೋದ್ದೇಶಗಳನ್ನು ಜನತೆಯ ಮುಂದಿಟ್ಟಿದ್ದಾರೆ, ಈ ಕೀರ್ತನ ಪರಂಪರೆಯನ್ನು ಬೆಳೆಸಿ ಉಳಿಸಿಕೊಂಡು ಹೋಗುವ ವಿಧಿ ವಿಧಾನಗಳು ಟ್ರಸ್ಟಿನ ಧ್ಯೇಯೋದ್ದೇಶಗಳಲ್ಲಿ ಸೇರಿವೆ. ಆ ವಿವರಗಳನ್ನು ಈ ಸಂಚಿಕೆಯಲ್ಲಿ ಬೇರೆಡೆಗೆ ನೋಡಬಹುದು, ಭಾರತಮಾತೆಯ ಧನ್ಯ ಪುತ್ರರೆನಿಸಿದ ಶ್ರೀ ಕೀರ್ತನಾಗ್ರೇಸರ, ಕೀರ್ತನಾಚಾರ್ಯ, ಕೀರ್ತನ ಸಾಮ್ರಾಟ, ಸಂತ ಭದ್ರಗಿರಿ ಅಚ್ಯುತದಾಸರ ಕೀರ್ತನ ಸೇವೆಯ ರಜತೋತ್ಸವ, ಸ್ವರ್ಣೋತ್ಸವ ಹಾಗೂ ವಜ್ರೋತ್ಸವಗಳನ್ನು ಕಾಣುವ ಭಾಗ್ಯ ಕನ್ನಡಿಗರದ್ದಾಗಲೀ ಎಂದು ಹಾರೈಸುತ್ತೇವೆ.

* * *

———

ತಾನು ಇಂದು ಊಟ ಮಾಡುವದಿಲ್ಲ ಎಂದು ಒಬ್ಬ ಗೃಹಿಣಿ ಹೇಳಬಹುದು. ಆದರೆ ತಾನು ಇಂದು ಅಡಿಗೆ ಮಾಡುವದಿಲ್ಲಾ ಎಂದು ಆಕೆ ಹೇಳಲಾಗದು. ಅವಳು ಊಟ ಮಾಡದಿದ್ದರೆ ಅವಳಿಗೆ ಮಾತ್ರ ನಷ್ಟ. ಅಡಿಗೆ ಮಾಡದಿದ್ದರೆ ಎಲ್ಲರಿಗೂ ಉಪವಾಸ. ಹಾಗೆ ಕಾಮ್ಯಕರ್ಮವನ್ನು ಬಿಡಬಹುದು. ನಿಯತಕರ್ಮವನ್ನು ಬಿಡುವದರಿಂದ ಸಮಾಜಕ್ಕೆ ಹಾನಿಯೆಂದು ತಿಳಿಯಬೇಕು.

—ಸಂತ ಅಚ್ಯುತದಾಸರ ಹರಿಕಥಾ ಪೂರ್ವರಂಗದಿಂದ

ನಿಷ್ಕಾಮವೇ ವೈರಾಗ್ಯ ಹೊರತು ನಿಷ್ಕ್ರಿಯವು ವೈರಾಗ್ಯವಲ್ಲ.

— ಸಂತ ಅಚ್ಯುತದಾಸ

# ಕೀರ್ತನಾಚಾರ್ಯ

**ಲಕ್ಷ್ಮಣದಾಸ ವೇಲಣಕರ**

ದಾಸರ ಚರಣ ಕಿಂಕರ

ಕರ್ನಾಟಕ ಕೀರ್ತನ ರಂಗದಲ್ಲಿ ಉಜ್ವಲವಾಗಿ ಬೆಳಗುತ್ತಿರುವ ಧ್ರುವತಾರೆಯೆಂದರೆ ಭದ್ರಗಿರಿ ಸಹೋದರರಲ್ಲಿ ಹಿರಿಯರಾದ ಸಂತ ಅಚ್ಯುತದಾಸರು. ಇವರು ಹರಿಕಥಾ ಪ್ರಪಂಚದ ಅನಭಿಷಿಕ್ತ ದೊರೆ. ಕನ್ನಡ ನಾಡಿನಲ್ಲಿ ಇವರ ಹರಿಕಥೆ ಕೇಳದ ಜನರೇ ವಿರಳ. ಅವ್ಯಾಹತವಾಗಿ 25 ವರ್ಷದಿಂದ ಕೀರ್ತನವೇ ತಮ್ಮ ಕಾಯಕವಾಗಿಸಿಕೊಂಡು ಕನ್ನಡ ನಾಡಿನ ಉದ್ದಗಲ ಅಡ್ಡಾಡಿ ಹರಿಕಥೆಗಳನ್ನು ಮಾಡಿ ಜನರಿಗೆ ಧರ್ಮ, ಸಂಸ್ಕೃತಿ ಪ್ರಚಾರ ಮಾಡುತ್ತಿರುವ ಇವರು ನಿಜವಾಗಿ ಕನ್ನಡಾಂಬೆಯ ವರಪುತ್ರರು. ಭಾರತಮಾತೆಯ ಧನ್ಯ ಪುತ್ರರು.

ಕನ್ನಡದಲ್ಲಿ ಹರಿಕಥೆಗೆ ನಿಶ್ಚಿತವಾದ ಶುದ್ಧ ಪದ್ಧತಿ ಇಲ್ಲದೇ ಯದ್ವಾ ತದ್ವಾ ಏನಾದರೂ ನಾಲ್ಕು ಹಾಡು ಹಾಗೂ ಕೀಳುಮಟ್ಟದ ಹಾಸ್ಯದಿಂದೊಡಗೂಡಿದ ಪುರಾಣ ಕಥೆಗಳನ್ನು ವಿಕೃತವಾಗಿಸಿ ಹೇಳುವ ಒಂದು ಕಾರ್ಯಕ್ರಮಕ್ಕೆ ಹರಿಕಥೆ ಎಂದು ಜನಸಾಮಾನ್ಯರು ತಿಳಿದಿದ್ದಾರೆ. ತತ್ವಜ್ಞಾನ, ಧರ್ಮ, ಸಂಸ್ಕೃತಿ ಭಕ್ತಿ ಇವುಗಳ ಗಂಧವಿಲ್ಲದ ಈ ಹರಿಕಥೆಗಳು ಸಹಜವಾಗಿ ವಿಚಾರವಂತ, ಪಂಡಿತ ಉತ್ತಮ ಶ್ರೋತೃಗಳ ಉಪೇಕ್ಷೆಗೆ ಗುರಿಯಾದುದಕ್ಕೆ ಆಶ್ಚರ್ಯವಿಲ್ಲ. ಅದರ ಜೊತೆಗೆ ಹರಿದಾಸರ ಕಲುಷಿತ ಚಾರಿತ್ರ್ಯ, ಸಂಕುಚಿತವಾದ ಮತ ಛಲ ಸಾರ್ವಜನಿಕ ಸಮಾಜದ ಮೇಲೆ ಹರಿಕಥೆ ಪ್ರಭಾವ ಬೀರಲು ಅಶಕ್ತವಾಯ್ತು. ಜ್ಞಾನ, ಭಕ್ತಿ, ವೈರಾಗ್ಯ, ಸಂಸ್ಕೃತಿ, ಸಾಹಿತ್ಯ, ಕಲೆ, ನೀತಿ, ಸನಾತನ ಧರ್ಮ ಪ್ರಚಾರಕ್ಕೆ ಇರುವ ಹರಿಕಥಾ ಮಾಧ್ಯಮ ಸಮಾಜದಲ್ಲಿ ಒಂದು ಮನರಂಜನಾ ಕಾರ್ಯಕ್ರಮವಾಗಿ ಹರಡಿಕೊಂಡಿತು, ಇಂಥಹ ಪರಮಾರ್ಥ ಪ್ರಸಂಗ ಸಂತಾನ ನಿಯಂತ್ರಣವೇ ಮೊದಲಾದ ಕೀಳುಮಟ್ಟದ ಪ್ರಚಾರ ಸಾಧನವಾಯ್ತು. ಹಾಗೂ ಅಧ್ಯಯನ, ಜ್ಞಾನಾರ್ಜನೆ, ಶುದ್ಧ ಆಚರಣೆ, ಭಗವದ್ಭಕ್ತಿ ಇಂಥಹ ಕಷ್ಟ ಸಾಧ್ಯ ವಿಷಯ ಗಳಿಸದೆ, ಸುಲಭವಾಗಿ "ಹರಿದಾಸ" ಎನಿಸಿ ಕೊಂಡು, ಅನಧಿಕಾರಿಗಳು ಇದರಲ್ಲಿ ಪ್ರವೇಶಿಸಿ ಜನರನ್ನು ಸ್ವಲ್ಪ ಕಾಲ ನಕ್ಕು ನಗಿಸಿ ಸ್ವೇಚ್ಛಾಮಯ ಜೀವನೋಪಾಯಕ್ಕೆ ಒಂದು ದಾರಿ "ಹರಿಕಥೆ" ಎಂದು ಅನೇಕರು ತಿಳಿದು ನಡೆಸುವ "ಹರಿಕಥಾ ಕಾಲಕ್ಷೇಪ" ವೆಂದರೆ ನಿಜವಾಗಿಯೂ ಕಾಲದ ಕೊಲೆಯೇ ಸರಿ. ನಿಜ ಅರ್ಥದಲ್ಲಿ "ಹರಿಕಥಾ ಕಾಲಕ್ಷೇಪ"ವೆಂದರೆ ತನ್ನ ಅಮೂಲ್ಯವಾದ ಕಾಲವನ್ನು ಹರಿಯ ಕಥೆಯಲ್ಲಿ ಇಡು. (ಕಳೆ) ಎಂದರ್ಥ. ಆದರೆ ಈ ಅರ್ಥ ನಮ್ಮ ಹರಿಕಥಾ ಪ್ರಪಂಚದಿಂದ ಬಹಳ ದೂರವಾಗಿದೆ.

ಕನ್ನಡ ಕೀರ್ತನ ರಂಗದಲ್ಲಿ ಇಂತಹ ವಾತಾವರಣ ತಲೆದೋರಿದಾಗ ಭದ್ರಗಿರಿ ಸಹೋದರರು ಕ್ರಾಂತಿಯೇ ನಡೆಸಿ ಸಮಾಜಕ್ಕೆ ಶುದ್ಧವಾದ ಹರಿಕಥಾ ಮಾರ್ಗ ವನ್ನು ತೋರಿಸಿಕೊಟ್ಟು, ಕೀರ್ತನೆಗೆ ಒಂದು ಭವ್ಯ ವೇದಿಕೆ ನಿರ್ಮಾಣ ಮಾಡಿದರು. ಭದ್ರಗಿರಿ ಅಚ್ಯುತ-ದಾಸರ ಹರಿಕಥೆ ಕೇಳಿದವರಿಗೆ ಇದರ ಸತ್ಯತೆ ಮನವರಿಕೆ ಆಗದಿರಲಾರದು. ತತ್ವಜ್ಞಾನ, ಸಂಸ್ಕೃತಿ, ಸಾಹಿತ್ಯ, ಭಕ್ತಿ, ಜ್ಞಾನ, ಧರ್ಮ ಅವರ ಕೀರ್ತನೆಯಲ್ಲಿ ಓತಪ್ರೋತ ತುಂಬಿರುತ್ತದೆ. ಭದ್ರಗಿರಿ ಅಚ್ಯುತದಾಸರ ಪಂಡಿತ ಪಾಮರರೂ ಅರ್ಥವಿಸುವ ಸರಳವಾದ ಆದರೂ ಪ್ರೌಢವಾದ ಭಾಷಾ ಸಂಪತ್ತು, ಮಧುರವಾದ ಗಂಭೀರ ಕಂಠಶ್ರೀ, ಶುದ್ಧ ಚಾರಿತ್ರ್ಯ, ಆಚಾರ ಸಂಪನ್ನತೆ, ಭಾರತೀಯ ಸಂತ ವಾಙ್ಮಯದ ವಿಶಾಲ ಅಧ್ಯಯನ, ವ್ಯಾಸರಿಂದ ಹಿಡಿದು ದಾಸರ ತನಕ ನಿರ್ಮಾಣಗೊಂಡ ವಿಪುಲ ಸಾಹಿತ್ಯದ ಪರಿಚಯ, ರನ್ನ, ಪಂಪ, ಲಕ್ಷ್ಮೀಶ, ಕುಮಾರವ್ಯಾಸಾದಿ ಕನ್ನಡ ಶ್ರೇಷ್ಠ ಕವಿಗಳ ಕಾವ್ಯದ

ಅಭ್ಯಾಸ, ಕನ್ನಡ ಮಾತ್ರವಲ್ಲದೆ ಹಿಂದೀ, ಮರಾಠಿ, ತುಳು, ಕೊಂಕಣೀ, ತೆಲುಗು ಮೊದಲಾದ ಅನ್ಯ ಭಾಷಾ ಜ್ಞಾನ, ಭಾರತೀಯ ಭಿನ್ನ ಭಿನ್ನ ಆಸ್ತಿಕ ಮತ ತತ್ತ್ವ ಜ್ಞಾನಗಳ ನಿಶ್ಚಿತವಾದ ಜ್ಞಾನವೇ ಶ್ರೀ ಭದ್ರಗಿರಿ ಅಚ್ಯುತದಾಸರಲ್ಲಿ ಇರುವ ವೈಶಿಷ್ಟ್ಯ.

ಸಾಧಾರಣ ಹರಿದಾಸರಲ್ಲಿರುವ ದೋಷಗಳಾದ ಜನರ ನಿಂದೆ, ಆತ್ಮ ಶ್ಲಾಘನೆ, ಅಶ್ಲೀಲ ಕೀಳುಮಟ್ಟದ ಹಾಸ್ಯ ಇವುಗಳು ಅಚ್ಯುತದಾಸರಲ್ಲಿ ಹುಡುಕಿದರೂ ಸಿಗಲಾರವು. ಅವರ ಕೀರ್ತನದಲ್ಲಿ ವಿನೋದವಿದೆ, ಆದರೆ ಅದು ವೈಚಾರಿಕವಾಗಿ, ಮಾರ್ಮಿಕವಾಗಿ ಒಡ-ಗೂಡಿರುತ್ತದೆ. ಸಮಾಜದಲ್ಲಿಯ ಅಂಧಶ್ರದ್ಧೆ ಮೂಢ ನಂಬಿಕೆಗಳ ಟೀಕೆ ಇದೆ; ಆದರೆ ಅದು ಜನ ನಿಂದೆ ಅಲ್ಲಾ. ಕಾಂತಾ ಸಮ್ಮತವಾಗಿ ನಿರ್ದೇಶಿಸುವ ಮಾರ್ಗದರ್ಶನ. ಅಲ್ಲದೆ ಅವರು ಕೀರ್ತನೆಯಲ್ಲಿ ಸಂದರ್ಭಕ್ಕೆ ಸರಿಯಾಗಿ ಹೇಳುವ ಅಸಂಖ್ಯ ದೃಷ್ಟಾಂತ ಕಥೆಗಳು ಉತ್ತಮ ಶ್ರೋತೃಗಳಿಗೆ ಅತೀಪ್ರೀತಿ. ಪೂರ್ವ ಪೀಠಿಕಾ ಪ್ರಕರಣ ದಲ್ಲಿ ಅವರು ಮಾಡುವ ವಿಷಯ ಪ್ರತಿಪಾದನೆ ನಿತ್ಯ ಜೀವನಕ್ಕೆ ಹಿಡಿದ ಕನ್ನಡಿಯಾಗಿರುತ್ತದೆ. ಅವರ ದಕ್ಷಿ-ಣೋತ್ತರ ಮಧುರ ಸಂಗೀತ ರಸಿಕ ಶ್ರೋತೃಗಳಿಗೆ ಒಂದು ರಸಜ್ಞಾನ. ಶ್ರೀ ದಾಸರು ನಡೆಸುವ ಗೀತಾ ಪ್ರವಚನ ವಂತೂ ಜಿಜ್ಞಾಸು ಶ್ರೋತೃಗಳಿಗೆ ಉತ್ತಮ ವಸ್ತು. ಅವರು ಸ್ವತಃ ಮಾಧ್ವ ವೈಷ್ಣವ ಸಂಪ್ರದಾಯಕ್ಕೆ ಸೇರಿ-ದವರಾದರೂ ಅನ್ಯ ಸಂಪ್ರದಾಯ, ಅನ್ಯ ಮತದ ಟೀಕೆ ನಿಂದನೆ ಅವರ ಕೀರ್ತನೆಯಲ್ಲಿಲ್ಲಾ. ನವರಸ ಯುಕ್ತವಾಗಿ ಹೇಳುವ ಸಾಧು ಸಂತರ ಚರಿತ್ರೆ, ಪುರಾಣ ಕಥೆಗಳನ್ನು ಅವರ ಬಾಯಿಯಿಂದಲೇ ಕೇಳ-ಬೇಕು. ಅಂತೂ ಪಂಡಿತ–ಪಾಮರ, ಬಡವ–ಬಲ್ಲಿದ, ಜ್ಞಾನಿ-ಅಜ್ಞಾನಿ, ಬಾಲ–ವೃದ್ಧ, ಸ್ತ್ರೀ–ಪುರುಷರೇ ಆದಿ ಸಮಾಜದ ಎಲ್ಲಾ ಕೋಮಿನವರಿಗೆ, ಮತದವರಿಗೆ ದಾಸರ ಕೀರ್ತನವೆಂದರೆ ಒಂದು ಹಬ್ಬ. ಇದೇ ಭದ್ರಗಿರಿ ಅಚ್ಯುತದಾಸರಲ್ಲಿರುವ ವೈಶಿಷ್ಟ್ಯ.

ಭದ್ರಗಿರಿ ಅಚ್ಯುತ ದಾಸರು ಕನ್ನಡ ನಾಡಿನಲ್ಲಿ ಮಾತ್ರವಲ್ಲ ಹೊರನಾಡಿನಲ್ಲೂ ಆಂಧ್ರ, ಮದ್ರಾಸು, ಮುಂಬಯಿ, ಮಹರಾಷ್ಟ್ರ, ಕೇರಳ, ಮಧ್ಯಪ್ರದೇಶ ಭಾರತದಾದ್ಯಂತ ಸಂಚರಿಸಿ ತಮ್ಮ ಶ್ರೀಮಂತ ಕೀರ್ತನದ ಪರಿಚಯ ಮಾಡಿಕೊಟ್ಟಿದ್ದಾರೆ. ಅಂತಲೇ ಅವರಿಗೆ "ಕೀರ್ತನಾಚಾರ್ಯ" ಎಂಬ ಬಿರುದು ಸಾರ್ಥಕವಾಗಿದೆ. ಮುಂಬಯಿಯ ಜನತೆ ಇವರಿಗೆ "ಕೀರ್ತನ ಸಮ್ರಾಟ" ಎಂಬ ಬಿರುದನ್ನಿತ್ತು ಗೌರವಿಸಿತು. ಇದು ಅವರ ಪಾಂಡಿತ್ಯಕ್ಕೆ ವ್ಯಕ್ತಿತ್ವಕ್ಕೆ ಸಂದ ಪ್ರಾಮಾಣಿಕವಾದ ಗೌರವ. ಅವರು ನಿಜವಾಗಿಯೂ ಹರಿಕಥಾ ಸಾರ್ವಭೌಮರೇ.

ಅವರ ವೈಯಕ್ತಿಕ ಜೀವನವೂ ಅಷ್ಟೇ ಶ್ರೇಷ್ಠ ಮಟ್ಟದ ಆದರ್ಶ ಜೀವನ. "ನುಡಿಯಂತೆ ನಡೆ" "ಬೋಲೆ ತೈಸೆ ಚಾಲೆ। ತ್ಯಾಚಿ ವಂದಾವಿ ಪಾವಲೆ" ಎಂದು ತುಕಾರಾಮರು ಹೇಳಿದ ವಂದನೀಯ ವಿಭೂತಿ ಯೆಂದರೆ ಅಚ್ಯುತದಾಸರೇ. ಸಂತ ಅಚ್ಯುತದಾಸರಿಗೆ ಇರುವ "ಸಂತ" ಎಂಬ ಉಪಾಧಿ ಕೇವಲ ಅಲಂಕಾರ ಕ್ಕಿರದೆ ನಿಜವಾಗಿ ಅವರು ಸಂತರೇ ಆಗಿದ್ದಾರೆ. ಜನರಿಗೆ ಅವರಲ್ಲಿರುವ ಪೂಜ್ಯತೆ, ಪ್ರೀತಿಯೇ ಇದಕ್ಕೆ ಸಾಕ್ಷಿಯಾಗಿದೆ. ಜನ ಪ್ರೀತಿ ಬೇರೆ, ಪೂಜ್ಯತೆ ಬೇರೆ. ಓರ್ವ ಸಿನೇಮಾ ನಟನಿಗೆ ಜನಪ್ರೀತಿ ಇರುತ್ತದೆ. ಪೂಜ್ಯತೆ ಇರುವುದಿಲ್ಲ. ಆದರೆ ಓರ್ವ ಸಂತನಿಗೆ ಪೂಜ್ಯತೆಯೂ ಪ್ರೀತಿಯೂ ಎರಡೂ ಇರುತ್ತವೆ. ಇದಕ್ಕೆ ವಿಶಿಷ್ಟವಾದ ದೈವೀ ಸಂಪತ್ತು ಬೇಕಾಗುತ್ತದೆ. ಅಂಥ ದೈವೀ ಸಂಪತ್ತು ಪಡೆದ ಭದ್ರಗಿರಿ ಅಚ್ಯುತರಿಗೆ ಪ್ರೀತಿ ಗೌರವ ಪೂಜ್ಯತೆ ಲಭ್ಯವಾಗಿವೆ.

ಆಶ್ರಿತ ವರ್ಗದಲ್ಲಿ ಅವರಿಗೆ ಅಪಾರವಾದ ಪ್ರೇಮ. ಅವರ ಕಷ್ಟ ನಿಷ್ಠುರಗಳಲ್ಲಿ ತಾವೂ ಭಾಗಿ-ಯಾಗಿ ಅವರಿಗೆ ಕೈಲಾದ ಸಹಾಯ, ಸ್ಫೂರ್ತಿ, ಮಾರ್ಗದರ್ಶನ ನೀಡಿ ಅವರ ಶ್ರೇಯಸ್ಸಿಗೆ ಸದಾ ಹಾರೈಸುವವರು. ಶಿಷ್ಯವರ್ಗದಲ್ಲೂ ಅವರಿಗೆ ಹೆಚ್ಚಿನ ಆದರ. ಅವರ ಉನ್ನತಿಗಾಗಿ, ವಿದ್ಯೆಗಾಗಿ ಬಿಚ್ಚುಮನ ದಿಂದ ಹಗಲಿರುಳು ಶ್ರಮಿಸುತ್ತಿರುವರು. ಶಿಷ್ಯರು ಮಾಡಿದ ಅಪರಾಧ-ಪ್ರಮಾದ ಎಷ್ಟೇ ಇದ್ದರೂ ಅವ-ರಲ್ಲಿ ಕ್ಷಮೆ ಇದೆ. ಕ್ಷಮಾಮೂರ್ತಿಯೇ ಅವರು. ಎಂಥಹ ಕ್ಲಿಷ್ಟ ಸನ್ನಿವೇಶದಲ್ಲೂ ಅವರು ಸ್ಥಿತಪ್ರಜ್ಞರು. ಶಾಂತಮೂರ್ತಿಗಳು.

ನನಗೆ ಇಂಥ ವಿಭೂತಿ ಪುರುಷರು ಗುರುಗಳಾಗಿ ಲಭಿಸಿದುದು ನನ್ನ ಜನ್ಮಾಂತರದ ಪುಣ್ಯ ವಿಶೇಷ.

ಸಮುದ್ರದಲ್ಲಿ ಅಪಾರವಾದ ನೀರು ಇದೆ, ನಾವು ತಂದ ಪಾತ್ರೆಯಷ್ಟೇ ನಮಗೆ ಲಭ್ಯ. ಅಂತೆಯೇ ನನ್ನಂಥ ಅಲ್ಪಮತಿಯ ಅಲ್ಪಾಧಿಕಾರಿಯನ್ನೂ ಸಹ ಶಿಷ್ಯನಾಗಿ ಸ್ವೀಕರಿಸಿ ಹೆಚ್ಚಿನ ರೀತಿಯಲ್ಲಿ ಪ್ರೀತಿಸಿ ತಮ್ಮ ಪುತ್ರನಂತೆ ನಡೆಸಿಕೊಂಡುದು ಅವರ ಹಿರಿಮೆಯ ಔನ್ನತ್ಯ. ನನ್ನ ಆಧ್ಯಾತ್ಮಿಕ ಜೀವನದ ಹೊಣೆ ಹೊತ್ತ ಅವರು ವೈಯಕ್ತಿಕ ಜೀವನಕ್ಕೂ ಆಶ್ರಯದಾತರಾಗಿದ್ದಾರೆ. ಇಂಥ ಗುರುಗಳನ್ನು ಪಡೆದ ನಾನೇ ಧನ್ಯ ಎಂದು ಹೇಳಿಕೊಳ್ಳಬೇಕು. ಇಂಥಹ ಮಹಾತ್ಮರನ್ನು ಹಡೆದ ಅವರ ತಾಯಿ ಧನ್ಯೆ, ಪಡೆದ ಕನ್ನಡ ನಾಡು ಧನ್ಯ, ಧನ್ಯ ಭಾರತಾಂಬೆ.

ಜೈ ಗುರುದೇವದತ್ತ

* * *

o o o o o o o o o o

ಮಾಡದೇ ಮಾಡಿದ ಜ್ಞಾನಿಯಾಗು
ಮಾಡಿಯೂ ಮಾಡದ ಕರ್ಮವ ನೀಗೊ

ಮಾಡದೇ ಮಾಡುವದೆಂದರೆ ಜ್ಞಾನಿಯ ಕರ್ಮ. ಜ್ಞಾನಿಯು ತಾನೇನನ್ನೂ ಮಾಡುವದಿಲ್ಲ. ಆದರೆ ಆತನು ಜಗತ್ತನ್ನೇ ಕರ್ಮದಲ್ಲಿ ತೊಡಗಿಸುತ್ತಾನೆ. ಒಂದು ಯಂತ್ರದ ಚಕ್ರವು ಅತಿ ವೇಗದಲ್ಲಿ ತಿರುಗುತ್ತಾ ಇದ್ದರೆ ಅದು ಸುಮ್ಮನಿದ್ದಂತೆ ಕಾಣಿಸುತ್ತದೆ. ಆದರೆ ಅದನ್ನು ಮುಟ್ಟಿದರೆ ಅದರ ವೇಗ ತಿಳಿಯುತ್ತದೆ. ಜ್ಞಾನಿಯ ಕರ್ಮ ಅಂತಹದು.

— ಸಂತ ಅಚ್ಯುತದಾಸರ ಹರಿಕಥಾ ಪೂರ್ವ ರಂಗದಿಂದ

o o o o o o o o o o

ವ್ಯಕ್ತಿಯ ಸಂಕಲ್ಪವು ವಿಶ್ವಸಂಕಲ್ಪದ ಒಂದು ಭಾಗ. ಇವೆರಡರ ನಡುವೆ ಸಾಮರಸ್ಯವನ್ನು ಹುಡುಕಿ ತೆಗೆಯುವುದೇ ಪ್ರಗತಿಯ ರಹಸ್ಯವಾಗಿದೆ, ಎಲ್ಲಿಯವರೆಗೆ ಆ ಮಹತ್ತರ ಸಂಕಲ್ಪವನ್ನು ಕಡೆಗಣಿಸಿ ಒಬ್ಬ ವ್ಯಕ್ತಿಯು ತನ್ನ ಅಹಂ–ಸಂಕಲ್ಪವನ್ನೇ ಬೆಂಬತ್ತುವನೋ ಅಲ್ಲಿಯವರೆಗೆ ತಿಕ್ಕಾಟ, ಹೋರಾಟ, ದುರಂತವೂ ಸಹ ಅನಿವಾರ್ಯ. ಆದರೆ ಅದೇ ವ್ಯಕ್ತಿಯು ತನ್ನನ್ನು ತಾನು ಗುರುತಿಸಿ, ತಾನು ಯಂತ್ರಮಾತ್ರವಾಗಿ ಪರಿಣಮಿಸಿದರೆ,—ತಿಕ್ಕಾಟವು ಮಾಯವಾಗುತ್ತ ಸಮರಸಯುತವಾದ ಕ್ರಿಯಾವಿಧಾನವು ಕೈಗೂಡುವುದು. ಈ ಯಂತ್ರದ ಅಥವಾ ಉಪಕರಣದ ಪಾತ್ರವನ್ನು ಗ್ರಹಿಸುವುದೇ ಪ್ರಥಮ ಅಗತ್ಯ.

— ಶ್ರೀ ಅರವಿಂದರು

# ಆರ್ಯ ಸಂಸ್ಕೃತಿ

ಶ್ರೀ ರಟ್ಟಿಹಳ್ಳಿ ರಾಮಪ್ಪ

ಸಂಸ್ಕೃತಿ ಎಂಬ ಮಾತು ಈಚಿನದಲ್ಲ. ಸಂಸ್ಕೃತಿ. ಸಂಸ್ಕಾರ ಎಂಬ ಈ ಎರಡು ಪದಗಳೂ ಒಂದೇ ಅರ್ಥವನ್ನು ಬೋಧಿಸುವ ಶಬ್ದಗಳು. ಅಂದ ಮೇಲೆ ಸಂಸ್ಕೃತಿ ಎಂದರೆ 'ಚೆನ್ನಾಗಿ ಮಾಡುವಿಕೆ' ಎಂದರ್ಥ. ಸಂಸ್ಕೃತಿಯು ಬಾಹ್ಯ ಆಂತರಿಕ ಎಂದು ಎರಡು ಬಗೆಯುಳ್ಳದ್ದಾಗಿರುತ್ತದೆ. ಉದಾಹರಣೆಗೆ ಒಂದು ಮನೆಯನ್ನು ನಿರ್ಮಲವಾಗಿಟ್ಟು, ಗೋಡೆಗಳಿಗೆ ಸುಣ್ಣ ಬಣ್ಣ ಹಚ್ಚಿಸಿ, ನೆಲವನ್ನು ಗುಡಿಸಿ, ಸಾರಿಸಿ ರಂಗವಲ್ಲಿ ಕಾರಣೆಗಳನ್ನು ರಚಿಸಿ ದೀಪವನ್ನು ಬೆಳಗಿಸಿದರೆ ಆ ಮನೆಗೆ ಒಂದು ಸಂಸ್ಕಾರವನ್ನು ಮಾಡಿದಂತಾಗುತ್ತದೆ. ಅಂತೆಯೇ ಪಾತ್ರೆಯನ್ನು ತೊಳೆದು, ಬಟ್ಟೆಯನ್ನು ಶುಭ್ರವಾಗಿಟ್ಟರೆ ಅದಕ್ಕೆ ಸಂಸ್ಕಾರವಾಗುತ್ತದೆ. ಹಾಗೆಯೇ ದೇಹದ ಕೊಳೆಯನ್ನು ಕಳೆದರೆ ದೇಹಶುದ್ಧಿಯಾಗುತ್ತದೆ. ಭಗವದ್ಗೀತೆಯು ತಿಳಿಸುವ ಜ್ಞಾನವೆಂಬ ನೀರಿನಿಂದ ನಮ್ಮ ಮನಸ್ಸು ಹೃದಯಗಳ ಕೊಳೆಯನ್ನು ತೊಳೆದರೆ ಆಂತರಿಕ ಶುದ್ಧಿಯಾಗಿ ಸಂಸ್ಕಾರವಾಗುತ್ತದೆ, ಸದಾಚಾರ, ಸದ್ಭಾವನೆಗಳಿಂದ ನಮ್ಮ ನಡವಳಿಕೆಯನ್ನು ತಿದ್ದಿಕೊಂಡರೆ ನಾವು ಸುಸಂಸ್ಕೃತರಾಗುತ್ತೇವೆ. ಸಂಸ್ಕೃತಿಯು ಈ ಒಂದು ಜನ್ಮದಲ್ಲೇ ರೂಪುಗೊಳ್ಳುತ್ತದೆ.ನಂತರ ಅನುವಂಶಿಕವಾಗಿ ಬೆಳೆಯುತ್ತದೆ. ಹೀಗೆಯೇ ನಮ್ಮ ಆರ್ಯರ ಸಂಸ್ಕೃತಿಯೂ ಬೆಳಯುತ್ತಾ ಬಂದಿದೆ, ಶ್ರೇಷ್ಠರಾದ ಜನರ ಧರ್ಮವೂ ಸಹ ಶ್ರೇಷ್ಠವಾದುದೇ. ಈ ಆರ್ಯರ ಧರ್ಮಕ್ಕೆ 'ಆರ್ಯ ಧರ್ಮ' ಎಂದು ಹೆಸರಾಗಿದೆ. ತಾವು ಶ್ರೇಷ್ಠರಾಗಿದ್ದುದಲ್ಲದೆ ಇಡೀ ವಿಶ್ವವನ್ನೇ ತಮ್ಮಂತೆ ಶ್ರೇಷ್ಠವಾದುದನ್ನು ಮಾಡುವುದು ಈ ಆರ್ಯರ ಹವಣಿಕೆ. 'ಯಾವಾಗಲೂ ಎಲ್ಲರ ಶುಭವಾರ್ತೆಯನ್ನೇ ಕೇಳಬೇಕು; ಯಾವಾಗಲೂ ಎಲ್ಲರ ಸುಖವೊಂದೇ ನಮ್ಮ ಕಣ್ಣಿಗೆ ಗೋಚರವಾಗಬೇಕು.' ಇದೇ ದೇವರಲ್ಲಿ ಇವರ ಪ್ರಾರ್ಥನೆ. ಎಲ್ಲಾ ಜನರೂ ಸುಖಿಗಳಾಗಬೇಕು ಜಗತ್ತಿಗೆ ಶುಭವಾಗಬೇಕೆಂಬುದೇ ಆರ್ಯರ ಕೋರಿಕೆ. ಋಗ್ವೇದದಲ್ಲಿ ಉಲ್ಲೇಖಿಸಿರುವಂತೆ 'ಆರ್ಯ' ಎಂದರೆ ಶ್ರೇಷ್ಠ ಎಂದರ್ಥ,ಆರ್ಯನೆಂದರೆ-ಬಹಿರಿಂದ್ರಿಯ ನಿಗ್ರಹವುಳ್ಳವನು; ಸತ್ಯವನ್ನು ಹೇಳುವವನು; ದಾನ ಮಾಡುವವನು; ಕೃಪಾಶೀಲನಾಗಿರುವವನು; ಅಹಂಕಾರವಿಲ್ಲದೆ ವಿನೀತನಾಗಿರುವವನು; ಸುಖ-ದುಃಖಗಳನ್ನು ಸಹಿಸಬಲ್ಲವನು;ಜನರ ನಡುವಳಿಕೆಯಲ್ಲೂ ಮಾತಿನಲ್ಲೂ, ಮನಸ್ಸಿನಲ್ಲಿ ಉಂಟಾಗುತ್ತಿರುವ ಭಾವಗಳಲ್ಲೂ ಒಳ್ಳೆಯ ಗುಣಗಳು ಎಂದರೆ ಸತ್ಯ, ಧರ್ಮ, ಅಹಿಂಸೆ ಸಹಾನುಭೂತಿ, ಪರೋಪಕಾರ, ಸೇವೆ ಮತ್ತು ಸಹಕಾರ ಮನೋಭಾವ, ಈ ಗುಣಗಳಿಂದ ಕೂಡಿದ ನಡುವಳಿಕೆಗೆ ಸಂಸ್ಕೃತಿ ಎನ್ನಬಹುದು. ಇಂಥಹ ಸಂಸ್ಕೃತಿಯನ್ನು ಹಿಂದಿನ ಕಾಲದ ಭಾರತಾರ್ಯಾದಿ ಬೆಳಸಿಕೊಂಡು ಬರುತ್ತಿದ್ದರು, ಮಾನವ ಪ್ರಗತಿ ಸಂಸ್ಕೃತಿಯಿಂದ ಮುಂದುವರಿಯುತ್ತದೆ. ಧರ್ಮದ ತಿಳುವಳಿಕೆ ಆಚರಣೆಯಿಂದ ಬರುತ್ತದೆ. ಈ ಅಂಶಗಳನ್ನು ಆಯಾ ಕಾಲದಲ್ಲಿ ರಚಿತವಾದ ಎಲ್ಲಾ ಒಳ್ಳೆಯ ಗ್ರಂಥಗಳಲ್ಲೂ ಉಲ್ಲೇಖಿಸಿದೆ. ಈ ಸಂಸ್ಕೃತಿ, ಧರ್ಮಮೂಲವಾಗಿರುವುದರಿಂದ, ಜನತೆಗೆ ಶಾಂತಿಯನ್ನೂ ಸೌಖ್ಯವನ್ನೂ ನೀಡುತ್ತಾ ಬಂದಿದೆ. ಮುಂದೆಯೂ ನೀಡಬಲ್ಲದು. ಆದ್ದರಿಂದಲೇ ಇದು ಉಳಿದು ಬೆಳೆದು ಬಂದಿದೆ. ಧರ್ಮವೆಂದರೆ ಪ್ರತಿಯೊಬ್ಬನೂ ಮಾಡಬೇಕಾದ ಕೆಲಸ. ಇದರಲ್ಲಿ ಸಹಕಾರ ಮನೋಭಾವವೂ ಅಡಗಿರುತ್ತದೆ. ಗಂಡಸರು, ಹೆಂಗಸರು, ಚಿಕ್ಕವರು, ದೊಡ್ಡವರು ಎಲ್ಲರೂ ತಮ್ಮ ತಮ್ಮ ಧರ್ಮವನ್ನು ಪಾಲಿಸಬೇಕು. ಪಿತೃಧರ್ಮ, ಮಾತೃಧರ್ಮ, ಪುತ್ರಧರ್ಮ, ಗುರುಧರ್ಮ, ಆಳಿನ ಧರ್ಮ, ಶ್ರೀಮಂತರ ಧರ್ಮ, ಬಡವರ ಧರ್ಮ, ಪತಿಧರ್ಮ, ಪತ್ನಿಧರ್ಮ ಹೀಗೆ ಪ್ರತಿಯೊಬ್ಬ ವ್ಯಕ್ತಿಯೂ

ಮಾಡಬೇಕಾದ ಕೆಲಸಕ್ಕೆ ಧರ್ಮ ಎಂದು ಸ್ಪಷ್ಟಪಡಿಸ ಬಹುದು. ನಮ್ಮ ಜನಾಂಗದಲ್ಲಿ ಸಂಸ್ಕೃತಿಯು ಮೊದಲಿನಿಂದಲೂ ಧರ್ಮವನ್ನು ಅವಲಂಬಿಸಿ ಉಂಟಾಗಿರುವ ಮನೋವೃತ್ತಿಯಾಗಿದೆ. ಇದು ವಿಶ್ವ ಧರ್ಮಕ್ಕೆ ದಾರಿದೀಪವಾಗಿದೆ. ಈ ಬಗೆಯ ಸಂಸ್ಕೃತಿಯು ಸಾಹಿತ್ಯದಲ್ಲಿ ಅಮರವಾಗಿರುತ್ತದೆ.

ಈ ಆರ್ಯ ಸಂಸ್ಕೃತಿಯು ಸುಮಾರು ಐದು ಸಾವಿರ ವರ್ಷಗಳಿಂದ ಬೆಳೆದು ಬಂದ ಹಿರಿಯ ಸಂಸ್ಕೃತಿ ಯಾಗಿದೆ. ಜಗತ್ತಿನಲ್ಲಿರುವ ಗ್ರಂಥಗಳಲ್ಲಿ ವೇದಗಳೇ ಅತ್ಯಂತ ಪ್ರಾಚೀನವಾದುದೆಂದು ಬೇರೆ ಹೇಳಬೇಕಿಲ್ಲ. ಪುರಾತನ ಕಾಲದಲ್ಲಿ ಈಜಿಪ್ಟ್, ಗ್ರೀಸ್, ಬ್ಯಾಬಿಲೋನಿಯ ಮುಂತಾದ ದೇಶಗಳಲ್ಲಿ ಅತ್ಯುತ್ತಮ ನಾಗರೀಕತೆಯನ್ನು ಪಡೆದಿದ್ದರೂ, ಇಂದು ಅವು ಹೇಳ ಹೆಸರಿಲ್ಲವಾಗಿವೆ. ಆದರೆ ನಮ್ಮ ಆರ್ಯ ಸಂಸ್ಕೃತಿ ಅಚ್ಚಳಿಯದೆ ಇಂದಿಗೂ ಭಾರತೀಯನ ನರ ನಾಡಿಗಳಲ್ಲಿ ಹರಿಯುತ್ತಿದೆ. ಜೀವಂತವಾಗಿದೆ. ನಮ್ಮ ಸಂಸ್ಕೃತಿಯಲ್ಲಿ ಧರ್ಮ ಮುಂದಾಗಿರುವಂತೆ ಆಸ್ತಿಕತೆಯೂ ಪ್ರಾಮುಖ್ಯತೆಯನ್ನು ಪಡೆದಿದೆ. ದೇವರು ನಿತ್ಯನು ತ್ರಿಕಾಲಾಭಾಧ್ಯನಾಗಿರುತ್ತಾನೆ. ಅವನು ಸರ್ವಜ್ಞ. ಆದ್ದರಿಂದ ನಮ್ಮೆಲ್ಲರ ಕರ್ಮಗಳನ್ನೂ ಕಾಮನೆಗಳನ್ನೂ ತಿಳಿಯುವ ಸಾಕ್ಷಿಯಾಗಿರುತ್ತಾನೆ. ದೇವರು ಸರ್ವಶಕ್ತನು. ನಮ್ಮ ಪ್ರಾರ್ಥನೆಯನ್ನು ಕೋರಿಕೆಗಳನ್ನೂ ಲಾಲಿಸಿ ಫಲವನ್ನು ಕೊಡಬಲ್ಲನು. ಇಂಥ ಮಹೋನ್ನತ ಗುರಿಗಳನ್ನೊಳಗೊಂಡ ಸಂಸ್ಕೃತಿಯನ್ನು ನಾವು ಅನುಸರಿಸಿಕೊಂಡು, ಅನುಷ್ಠಾನಕ್ಕೆ ತಂದುಕೊಂಡು ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು. ಪುರುಷಾರ್ಥಗಳನ್ನು ವಿವೇಚಿಸಿ ಸಾಧಿಸಬೇಕು. ಜೀವಧ್ಯೇಯ ಅಥವಾ ಉದ್ದೇಶಗಳೇ ಪುರುಷಾರ್ಥಗಳು. ಈ ಪುರುಷಾರ್ಥಗಳು ಅವರ ತಿಳುವಳಿಕೆ, ರುಚಿ–ಸಂಸ್ಕೃತಿ–ಅವರವರ ವಯೋ-ಗುಣಕ್ಕೆ ತಕ್ಕಂತೆ ಭಿನ್ನವಾಗಿಗುತ್ತದೆ. ಪಾಮರರಿಗೆ ಆರ್ಥಿಕ ಸಂಪತ್ತೇ ಜೀವನದ ಗುರಿಯಾಗಿರಬಹುದು. ಭೂಲೋಕವನ್ನೇ ತಮ್ಮದಾಗಿ ಮಾಡಿಕೊಳ್ಳಬೇಕೆಂಬ ಆಸೆಯಿರುವ ಜನರೂ ಉಂಟು. ಆಸೆಗೆ ಮಿತಿಯುಂಟೆ?

ಈಗಿನ ವೈಜ್ಞಾನಿಕರಂತೆಯೇ ಆರ್ಯರು ಮೊದಲು ಬಾಹ್ಯ ಪ್ರಪಂಚದ ಸ್ವರೂಪವನ್ನು ಅದರ ಕಾರಣವನ್ನು ಪರಿಶೀಲಿಸಿದರು. ಈ ಪ್ರಪಂಚದಲ್ಲಿರುವ ಪದಾರ್ಥಗಳು ಐದು ಬಗೆಯವು. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಎಂಬ ಪಂಚಭೂತಗಳ ಪರಮಾಣುಗಳಿಂದ ಏರ್ಪಟ್ಟಿದೆ ಎಂದು ತಿಳಿದರು. ಮಾನವನಿಗಿರುವ ಪಂಚ ಜ್ಞಾನೇಂದ್ರಿಯಗಳಿಂದ ಅವನಿಗೆ ಉಂಟಾಗುವ ಅನುಭವಗಳ ಆಧಾರದ ಮೇಲೆ ಈ ಪ್ರಪಂಚವು ಪಂಚ ಭೌತಿಕವಾದುದೆಂದು ನಿರ್ಧರಿಸಿದರು. ಅದೇ ಮೂಲ ಕಾರಣವಾದ ಪ್ರಕೃತಿತತ್ವದ ಪ್ರಥಮ ಕಾರ್ಯವೆಂದು ಹೇಳಿದರು. ಜಡವಸ್ತುಗಳಿಗೆ ಪ್ರಕೃತಿಯೇ ಮೂಲಾಧಾರ. ಚೇತನವಸ್ತುವೇ ಜೀವ. ಪೂರ್ವಿಕರಾದ ಆರ್ಯರು ತಮ್ಮ ಧ್ಯಾನ ಯೋಗದಿಂದ ಈ ಎಲ್ಲ ತಿಳುವಳಿಕೆಯನ್ನು ಪಡೆಯುತ್ತಿದ್ದರು. ಹೀಗೆ ಆರ್ಯ ಸಂಸ್ಕೃತಿಯಲ್ಲಿ ಜೀವನಧರ್ಮ, ಆಸ್ತಿಕತೆ, ಮೋಕ್ಷಕ್ಕೆ ದಾರಿ, ವಿಜ್ಞಾನ– ಎಲ್ಲವೂ ಅಡಕವಾಗಿವೆ. ಆರ್ಯಧರ್ಮವು ತತ್ವಜ್ಞಾನದ ಆಧಾರದ ಮೇಲೆ ನೆಲೆಗೊಂಡಿದೆ. ಪರಮಾತ್ಮನಲ್ಲಿ ಮತ್ತು ಗುರುವಿನಲ್ಲಿ ಬೇಧವೆಣಿಸಬಾರದೆಂದು ಶೃತಿಯಲ್ಲಿ ಉಕ್ತವಾಗಿದೆ. ಆರ್ಯರಿಗೆ–'ಹಿಂದೂ' ಎಂದು ಕರೆಯುವ ಇನ್ನೊಂದು ಶಬ್ದವಿದೆ. ಎಲ್ಲಾ ತ್ಯಾಜ್ಯವಾದುದನ್ನು ದೂಷಿಸುವವನೇ ಹಿಂದೂ. ಆರ್ಯಧರ್ಮವೇ ಹಿಂದೂ ಧರ್ಮ. ಇಷ್ಟು ಹಿರಿಮೆ ಗರಿಮೆಗಳ ಹಿಂದೂ ಧರ್ಮ ರಾಜಕೀಯ ಕಾರಣಗಳಿಂದಾಗಿ, ಆಡಳಿತ ವ್ಯತ್ಯಾಸಗಳಿಂದಾಗಿ ಬೆಳೆಯಲು ಹಲವಾರು ಎಡರು - ತೊಡರುಗಳು ಬಂದವು. ಪರಕೀಯರ ದಬ್ಬಾಳಿಕೆಗೆ ಸಿಕ್ಕಿ ಹಿಂದೂ ಧರ್ಮ ನಶಿಸಿ ಹೋಗುತ್ತದೆಯೆಂಬ ಭೀತಿ ಆಗಾಗ್ಗೆ ಕಂಡು ಬಂತು; ಆದರೆ ಹಿಂದೂ ಧರ್ಮದ ಸಾರವನ್ನು ಸಮಗ್ರವಾಗಿ ಅರಿತು ಜನತೆಯನ್ನು ಎಚ್ಚರಗೊಳಿಸಲು ಹಲವಾರು ಕಾರಣ ಪುರುಷರು ಜನಿಸಿದರು. ಶಂಕರಾಚಾರ್ಯ, ಮಧ್ವಾಚಾರ್ಯ – ರಾಮಾನುಜಾಚಾರ್ಯರಿಂದ ಹಿಡಿದು ಇತ್ತೀಚಿನ ಸ್ವಾಮಿ ವಿವೇಕಾನಂದ ಗಾಂಧೀಜಿಯರಾದಿಯಾಗಿ ಹಿಂದೂ ಧರ್ಮವನ್ನು ರಕ್ಷಿಸಿದರು. ಅದರ ಸಿರಿಮೆಯನ್ನು ವಿಶ್ವಕ್ಕೆ ಸಾರಿದರು.

ಇಂದು ಮಾನವನ ದಿನೆಗಟ್ಟಲೆಯ ಜೀವನ ಕ್ರಮ ಕಲಾಮಯವಾಗಿ ಪರಿಷ್ಕಾರಗಳನ್ನು ಪಡೆಯುತ್ತಾ ತುಂಬು ಜೀವನದ ಪೂರ್ಣತೆಯ ಕಡೆಗೆ ಮುಂದುವರೆಯುತ್ತಿದೆ. ಜೀವನವು ವಿಶಾಲಮಯವಾಗ

ಬೇಕಾಗಿದೆ. ಆಧ್ಯಾತ್ಮಿಕ ಜೀವನಕ್ರಮ ಉತ್ತಮಗೊಳ್ಳ ಬೇಕಾಗಿದೆ, ಪಾಶ್ಚಾತ್ಯರು ನಮ್ಮನ್ನಾಳುತ್ತಿದ್ದಾಗ ಅವರ ದೇಶಾಭಿಮಾನ, ಕಲಾಭಿಮಾನ ಜನರಲ್ಲಿ ಬೇರೂರುವಂತೆ ಮಾಡಲು ವಿದ್ಯಾರ್ಥಿಗಳ ವ್ಯಾಸಂಗ ವಿಷಯಗಳಲ್ಲಿ ಅವನ್ನು ಸೇರಿಸಿದರು. ಹಾಗೆಯೇ ಅವನ್ನು ಪಠ್ಯ ಪುಸ್ತಕಗಳಲ್ಲಿ ಅಳವಡಿಸಿದರು. ಈಗ ನಮ್ಮ ಭಾರತ ಲೋಕ ತಂತ್ರಾತ್ಮಕ ಗಣರಾಜ್ಯವಾಗಿದೆ. ನಮ್ಮನ್ನು ನಾವೇ ಆಳಿ ಕೊಳ್ಳುತ್ತಿದ್ದೇವೆ. ನಮ್ಮ ಸಂಸ್ಕೃತಿಯ ಪರಿಚಯ ಇಂದಿನ ಪೀಳಿಗೆಗೆ ಅತ್ಯಾವಶ್ಯಕ, ಅಂತಲೇ ನಮ್ಮ ಆರ್ಯ ಸಂಸ್ಕೃತಿಯ, ಅದರ ಹಿರಿಮೆಯ ಬಗ್ಗೆ ಇಂದಿನ ಮಕ್ಕಳಿಗೆ ಪರಿಚಯ ಮಾಡಿ ಕೊಟ್ಟು ಅವರನ್ನು ಉತ್ತಮ ಭಾರತೀಯನನ್ನಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ಸಂಸ್ಕೃತಿ ಧರ್ಮಗಳ ಬಗ್ಗೆ, ನೀತಿಪಾಠಗಳನ್ನು ಕಡ್ಡಾಯವಾಗಿ ಶಾಲಾ ಕಾಲೇಜುಗಳಲ್ಲಿ ಬೋಧಿಸುವುದು ಅತ್ಯಾವಶ್ಯಕ. ಆಗ ಮಾತ್ರ ನಮ್ಮ ಸಂಸ್ಕೃತಿ ಬೆಳೆಯು ತ್ತದೆ; ಅಳಿಯದೆ ಉಳಿಯುತ್ತದೆ. ನಮ್ಮ ದೇಶ ಮತ್ತೊಮ್ಮೆ ರಾಮ ರಾಜ್ಯವಾಗುತ್ತದೆ. ಇದೇ ಈ ಲೇಖಕನ ಕಳಕಳಿಯ ಪ್ರಾರ್ಥನೆ. * * *

---

### ಬೇರೆ ಬೇರೆ ಇಂದ್ರಿಯಗಳು ವಿನಾಶದೆಡೆ ಸೆಳೆದೊಯ್ಯುವ ಬಗೆ

ನೈನೇಂದ್ರಿಯ ವಿಷಯದಿಂದ
ಪತಂಗ ಕೆಡುವದು ದೀಪದ ಜ್ವಾಲೆಯಲ್ಲಿ.
ಶ್ರವಣೇಂದ್ರಿಯ ವಿಷಯದಿಂದ
ಎರಳೆ ಕೆಡುವದು ಬೇಟೆಗಾರನ ಸರಳಿನಲ್ಲಿ.
ಘ್ರಾಣೇಂದ್ರಿಯ ವಿಷಯದಿಂದ
ಭ್ರಮರವು ಕೆಡುವದು ಸಂಪಿಗೆಯ ಪುಷ್ಪದಲ್ಲಿ.
ರಸನೇಂದ್ರಿಯ ವಿಷಯದಿಂದ
ಮತ್ಸ್ಯ ಕೆಡುವದು ಜಲಗಾರನ ಬಲೆಯಲ್ಲಿ.
ತ್ವಗೇಂದ್ರಿಯ ವಿಷಯದಿಂದ
ಗಜ ಕೆಡುವದು ರಾಜನ ಕೃತಕದಲ್ಲಿ.
ಇಂತಿಷ್ಟು ಪ್ರಾಣಿಗಳು
ಒಂದೊಂದು ವಿಷಯಕ್ಕೆ ಬಂಧನಕೆ ಒಳಗಾದವು.
ಇಂತಪ್ಪ ಪಂಚೇಂದ್ರಿಯ
ವಿಷಯ ವ್ಯಾಪಾರದಲ್ಲಿ ಹರಿದಾಡುವ
ಮಂದಮತಿ ಎನ್ನನ್ನು
ಸಲಹಿಕೊಳ್ಳಯ್ಯಾ ದೇವಾ ಅಖಂಡೇಶ್ವರಾ.

# ಭದ್ರಗಿರಿಯಿಂದ ಬದರಿ - ಗಿರಿಗೆ

**ಕಟೀಲ ಗೋವಿಂದ ಪೈ**

ಬಾಲ ಭಾಸ್ಕರನ ಹೊಂಗಿರಣಗಳು ಆಗ ತಾನೆ ಗವಾಕ್ಷದಿಂದ ಒಳಹೊಕ್ಕು ನೆಲದ ಮೇಲೆ ನಲಿದಾಡುತ್ತವೆ. ಮಗುವೊಂದು ಅಂಬೆಗಾಲಿಕ್ಕುತ್ತಾ ಅದರ ಸೌಂದರ್ಯಕ್ಕೆ ಮಾರುಹೋಗಿ ತಿನ್ನಲೋ ಎಂಬಂತೆ ಬಾಯ್ದೆರೆದು, ಹಿಡಿಯಲೋ ಎಂಬಂತೆ ಮುಂದೆ ಬರುತ್ತಾ ಇದೆ. ಕಿರಣಗಳು ಬಾಯೊಳಗೆ ಹೊಕ್ಕರೂ ರುಚಿಯಿಲ್ಲ; ಕೈಯಿಂದ ಹಿಡಿದರೂ ಸಿಗಲಾರದು; ಬೇಸರದಿಂದ ಹಿಂದೆ ಸರಿದು ಕುಳಿತುಕೊಂಡಿತು. ಮರುಕ್ಷಣದಲ್ಲಿ ಆ ಕಿರಣಗಳಲ್ಲಿ ಧೂಳಿಯ ಕಣಗಳು ಕುಣಿದಾಡಿದುವು. ಮಗುವಿನ ಆಸೆ ಮರುಕಳಿಸಿತು. ಕೈ ಚಾಚಿತು; ಅದುಮಿತು; ಅಮುಕಿತು. ಇಲ್ಲ ಇಲ್ಲ. ಏನೂ ಇಲ್ಲ. ಏನೂ ಸಿಗಲೊಲ್ಲದು. ಪುನಃ ಆಸೆ, ಪುನಃ ನಿರಾಶೆ. ಕೊನೆಗೆ ಸುಸ್ತಾಗಿ ಕುಳಿತುಬಿಟ್ಟಿತು. ಅದೇ ಹೊತ್ತಿಗೆ ಮಗುವನ್ನು ಹುಡುಕುತ್ತ ಹುಡುಕುತ್ತ ತಾಯಿಯೂ ಬಂದುಬಿಟ್ಟಳು, – "ಅಮ್ಮಾ" ಎಲ್ಲ ದುಃಖ ನಿರಾಶೆಯನ್ನು ಮರೆತು ಮಗುವು ತಾಯ ತೋಳತೆಕ್ಕೆಯಲ್ಲಿ ಬ್ರಹ್ಮಾನಂದವನ್ನು ಅನುಭವಿಸಿತು

ಘಟನೆ ಚಿಕ್ಕದಾದರೂ, ಅಲ್ಲೆ ನಿಂತು ಇಷ್ಟು ಹೊತ್ತೂ ಎವೆ ಇಕ್ಕದೆ ನೋಡಿದ ನನ್ನ ಮನಸ್ಸನ್ನು ಸಾಕಷ್ಟು ಕದಡಿಸಿತು. ಮುಂಜಾನೆ ನಡೆದ ಘಟನೆಯು ದಿನದ ಎಲ್ಲಾ ಕಾರ್ಯ ಕಲಾಪಗಳಲ್ಲಿಯೂ ಹಾಸುಹೊಕ್ಕಾಯ್ತು. ಸಂಸಾರದಲ್ಲಿ ಮನುಷ್ಯನ ಪಾಡಾದರೂ ಇಷ್ಟೇ ಅಲ್ಲವೇ? ಇಚ್ಛಿತ ವಸ್ತುವು ದೊರಕದಿರಲು ಎಷ್ಟೊಂದು ನಿರಾಶೆ – ಪುನರಪಿ ಪ್ರಯತ್ನ, ಪುನರಪಿ ನಿರಾಶೆ. ಈ ಆಸೆಗೆ ಅಂತ್ಯವೇ ಇಲ್ಲವೇ? ಆರಾಮ ಕುರ್ಚಿಯಲ್ಲಿ ಕುಳಿತು ಇದನ್ನೇ ಯೋಚಿಸುವಲ್ಲಿ ಮಿತ್ರರೊಬ್ಬರು ಬಂದು ಕುಳಿತು ಎಷ್ಟು ಹೊತ್ತು ಕಳೆಯಿತೋ ತಿಳಿಯದು. ಅವರು ಕೆಮ್ಮಿದಾಗಲೇ ಹಗಲುಗನಸಿನಿಂದ ಎಚ್ಚರ, ನಿತ್ಯದ ಗಾಳಿ ಸೇವನೆಯ ಕಾರ್ಯಕ್ರಮ ಬಿಟ್ಟು ಇಂದು ಹತ್ತಿರದ ಗುಡಿಯಲ್ಲಿ ನಡೆಯುವ ಹರಿಕೀರ್ತನೆಗೆ ಹೋಗಲು ನನ್ನ ಮಿತ್ರ ಕೇಳಿಕೊಂಡಾಗ ಏನೋ ನನ್ನ ಮನಸ್ಸು ಕೂಡಲೇ ಒಡಂಬಟ್ಟಿತು. ಕೀರ್ತನೆ ಆರಂಭವಾಗಿತ್ತು. ಜನಸ್ತೋಮವು ಕಿಕ್ಕಿರಿದಿತ್ತು. ಒಂದು ಗಂಟೆ ಕಳೆದರೂ ಪೀಠಿಕೆ ಮುಗಿಯದು; ಮುಗಿಯದಿರಲೆಂದು ಮನಸ್ಸಿನ ತವಕ. ಮುಂಜಾನೆಯ ಘಟನೆಗೂ ಪೀಠಿಕೆಗೂ ಎಷ್ಟೊಂದು ಹೊಂದಿಕೆ. "ಸಂಸಾರದಲ್ಲಿ ಅಡಿಗಡಿಗೆ ಹೊಡೆತಗಳನ್ನು ತಿಂದರೂ ಮನಸ್ಸು ಪುನಃ ಪುನಃ ಅದರಲ್ಲಿ ಸೇರಲು ಬಯಸುವುದು. ಮೆಲ್ಲನೆ ಅದನ್ನು ಆಧ್ಯಾತ್ಮದ ಕಡೆಗೆ ತಿರುಗಿಸಬೇಕು; ಅಭ್ಯಾಸದಿಂದ ಈ ಭವ ಸಾಗರವನ್ನು ದಾಟಬೇಕು. 'ಹೇಗೆ ಬರೆದಿದೆಯೋ ಪ್ರಾಚೀನದಲಿ, ಹಾಗೆ ಇರಬೇಕೋ ಸಂಸಾರದಲಿ' ಕಥೆ ಮುಗಿಯಿತು. ಪ್ರತಿ ದಿನ ಸಾಯಂಕಾಲ ಅದೇ ಹೊತ್ತಿಗೆ ಏಳು ದಿನ ಇನ್ನೂ ಕಥೆ ಇದೆಯೆಂದಾಗ ನನಗಾದ ಆನಂದ ಅಷ್ಟಿಷ್ಟಲ್ಲ. ದಾರಿಸಾಗುತ್ತ ಮಿತ್ರನಿಂದ ಹರಿದಾಸರ ಕುರಿತು ತಕ್ಕಮಟ್ಟಿಗೆ ತಿಳಿದುಕೊಂಡೆ. ಹೆಸರು ಅಚ್ಯುತ ದಾಸರೆಂದೂ, ನಮ್ಮವರೇ, ನಮ್ಮ ಜಿಲ್ಲೆಯವರೇ– ಭದ್ರಗಿರಿಯವರು ಎಂದು ಕೇಳಿದಾಗ ಎಲ್ಲಿಲ್ಲದ ಒಂದು ಆತ್ಮೀಯತೆ ಒಡಮೂಡಿತು.

ಹರಿಕಥಾ ಸಪ್ತಾಹ ಮುಗಿಯಿತು, ಹರಿದಾಸರ ಕುರಿತು ತಿಳಿಯುವ ಹಂಬಲ ಹೆಚ್ಚಾಯ್ತು. ಈ ಮೊದಲೂ ಅನ್ಯರು ಮಾಡಿದ ಎಷ್ಟೋ ಹರಿಕಥೆಗಳನ್ನು ಕೇಳಿದ್ದೆ. ಮೂರನೇ ದಿನವೇ ಮರೆತಿದ್ದೆ. ಹರಿಕಥೆಗಳೆಂದರೆ ಅರ್ಥ ಇಲ್ಲದ ಉಪಕಥೆಗಳು; ಕೆಲವು ರೂಢಿಯ ಹಾಸ್ಯ ಚಟಾಕಿ; ಕಥಾವಸ್ತು ಶೂನ್ಯಕ್ಕೆ ಹತ್ತಿರ – ಇಷ್ಟೇ ಇತ್ತು ನನ್ನ ಕಲ್ಪನೆ ಹರಿಕಥೆ ಎಂದರೆ. ಆದರೆ ಶ್ರೀ ಅಚ್ಯುತದಾಸರ ಹರಿಕಥೆಗಳನ್ನು ಕೇಳಿದ ನಂತರ ನನ್ನ ಅಭಿಪ್ರಾಯವು ತೀರಾ ತಿರುಗುಮುರುಗಾಯ್ತು. ಆಧ್ಯಾತ್ಮ ಜೀವನವನ್ನು ರೂಪಿಸಲು ಇದೊಂದು ಪೂರಕವಾದ ದಾರಿಯೆಂದು ಖಚಿತ ಮಾಡಿ-

ಕೊಂಡೆ. ಇಷ್ಟಾದರೂ ಬೇರೆ ಕೆಲವು (ಎಲ್ಲಾ ಅಲ್ಲ) ಹರಿದಾಸರಿಂದ ಭಿನ್ನರಾದ ಈ ಹರಿದಾಸರು ಯಾರು ?

ಹಿಂದೂ ತತ್ವಶಾಸ್ತ್ರ ಪ್ರಕಾರ ಪ್ರತಿಯೊಬ್ಬ ಮಾನವನಲ್ಲಿಯೂ ಪರಮಾತ್ಮನ ಅಂಶವು ಇದ್ದೇ ಇದೆ. ಕೆಲವರಲ್ಲಿ ಸ್ವಲ್ಪ ಹೆಚ್ಚು. ಆ ಕೆಲವರಲ್ಲಿ ಸೇರಿದವರು ನಮ್ಮ ಅಚ್ಯುತದಾಸ ಬಂಧುಗಳು. ಇವರ ಮಾತಾ-ಪಿತೃಗಳು ಉಡುಪಿ ತಾಲೂಕಿನ ಭದ್ರಗಿರಿಯವರು. ತಂದೆ ಶ್ರೀ ವೆಂಕಟರಮಣ ಪೈಗಳು. ತಾಯಿ ಶ್ರೀಮತಿ ರುಕ್ಮಿಣಿದೇವಿಯವರು. ಇವರ ಗರ್ಭದಲ್ಲಿ ಹುಟ್ಟಿದ ಹಿರಿಯ ಮಗನಾದ ನರಸಿಂಹ ಪೈಯವರು ಕುಶಾಗ್ರಮತಿ ಯವರಾದರೂ ಹದಿನೆಂಟರ ಹರೆಯದಲ್ಲೇ ಇಹಲೋಕ ವನ್ನು ತ್ಯಜಿಸಿದರು. ಅನಂತರದ ನಾಲ್ಕು ಮಂದಿ ಗಂಡು-ಮಕ್ಕಳಲ್ಲಿ ಶ್ರೀ ದಾಸರೇ ಹಿರಿಯವರು. ಇವರು ಕ್ರಿ.ಶ. 1932ರ ಮಾಘ ಬಹುಳ ತೃತೀಯದಂದು ಜನ್ಮವೆತ್ತಿ-ದರು. ಈ ನಾಲ್ವರು ಬಂಧುಗಳ ಭ್ರಾತೃವಾತ್ಸಲ್ಯವು ಆ ಮಹಾಮಹಿಮರಾದ ಶ್ರೀ ರಾಮ, ಲಕ್ಷ್ಮಣ, ಭರತ, ಶತ್ರುಘ್ನರ ವಾತ್ಸಲ್ಯಕ್ಕಿಂತ ಕಡಿಮೆಯೇನೂ ಅಲ್ಲ. "ಅಣ್ಣಾ" ಎಂದು ಸಂಬೋಧಿಸುವುದನ್ನು ಕೇಳುವಾಗಲೇ, ಕೇಳುವವರ ಬಾಯಲ್ಲಿ ನೀರು ಬರುವಂತಾಗುತ್ತದೆ. ಭದ್ರಗಿರಿಯವರೊಡನೆ ಬದರಿ ಗಿರಿಗೆ ಹೋಗುವ ದಾರಿ ಯಲ್ಲಿಯೇ ನಾನು ಈ ಎಲ್ಲ ವಿಷಯಗಳನ್ನು ಕಂಡೆ, ಕೇಳಿದೆ. ದಾಸಾಶ್ರಮ ಅಂತರ್ರಾಷ್ಟ್ರೀಯ ಕೇಂದ್ರದ ಸ್ಥಾಪಕರೂ, ಅಂತರ್ರಾಷ್ಟ್ರೀಯ ಖ್ಯಾತಿವೇತ್ತರೂ ಆದ ಸಂತ ಭದ್ರಗಿರಿ ಕೇಶವದಾಸರು ಇವರ ಅನುಜರು. ಇವರ ಇನ್ನಿರ್ವ ಸಹೋದರರಾದ ಶ್ರೀ ಭದ್ರಗಿರಿ ಸರ್ವೋತ್ತಮದಾಸರು, ಭದ್ರಗಿರಿ ವಿಠ್ಠಲದಾಸರು ಕೀರ್ತನೆ, ಭಜನೆಗಳಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಾ ಇದ್ದಾರೆ. ಶ್ರೀ ದಾಸರು ಕ್ರಿ. ಶ. 1950 ನೇ ಡಿಸೆಂಬರ್ 28 ರಂದು ಪಡುಬಿದ್ರಿಯ ವೈದಿಕ ಶ್ರೇಷ್ಠರಾದ ಶ್ರೀ ವಾಮನ ಭಟ್ಟರ ಪುತ್ರಿ ಶ್ರೀಮತಿ ಎಂಬವರನ್ನು ವಿವಾಹವಾಗಿ ಬೆಂಗಳೂರಿನಲ್ಲಿ ಆದರ್ಶ ಜೀವನವನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಅತ್ತ ಸಂತ ಕೇಶವದಾಸರು ಅತಿಸಣ್ಣ ಹರೆಯ ದಿಂದಲೇ ಇಂಗ್ಲಂಡ್, ಅಮೇರಿಕಾ ಮೊದಲಾದ ದೇಶ ಗಳಲ್ಲಿ ಕೀರ್ತನೆ, ಉಪನ್ಯಾಸಗಳನ್ನು ಮಾಡಿ, ದೇವಸ್ಥಾನ ಗಳನ್ನು ಸ್ಥಾಪಿಸಿ, ಹಿಂದೂ ಧರ್ಮವನ್ನು ಮಗದೊಮ್ಮೆ ವೈಭವ ಶಿಖರಕ್ಕೇರಿಸುವ ಸಾಹಸದಲ್ಲಿ ತಲ್ಲೀನರಾಗಿರು ವಾಗ, ಅಣ್ಣ ಅಚ್ಯುತದಾಸರು ಭಾರತವಿಡೀ ಹತ್ತಾರು ಬಾರಿ ತಿರುಗಿ, ತಮ್ಮ ಯಾತ್ರೆಗಳಲ್ಲಿ ಸಹಸ್ರ ಸಹಸ್ರ ಭಕ್ತರನ್ನು ಕೂಡಿಕೊಂಡು ಕೀರ್ತನೆ ಮಾಡುತ್ತಾ, ಭಜನೆ ಮಾಡುತ್ತಾ ತಾಯ್ನಾಡದ ಭರತಭೂಮಿಯಲ್ಲಿಯೇ ಹಿಂದೂ ಧರ್ಮವು ಚಿರಸ್ಥಾಯಿಯಾಗುವಂತೆ ಮಾಡುತ್ತಾ ಇದ್ದಾರೆ. ಇವರ ಯಾತ್ರಾ ಮಂಡಳಿಯಲ್ಲಿ ಅಪ್ಪಿ ತಪ್ಪಿ ಯಾದರೂ ಒಮ್ಮೆ ಹೋದರೆ ಸಾಕು ಎಂತಹ ನಾಸ್ತಿಕನೂ ಆಸ್ತಿಕನಾಗಿ ಇನ್ನು ಮುಂದಿನ ಸಂದರ್ಭ ಅದೆಂದು ಬರುವುದೋ ಎಂದು ಕಾಯುತ್ತಾ ಇರುತ್ತಾನೆ. ಇವರು ತಮ್ಮ ಸಹಯಾತ್ರಿಕನಲ್ಲಿ ತೋರಿಸುವ ವಾತ್ಸಲ್ಯವೇ ಅದಕ್ಕೆ ಮೂಲ ಕಾರಣ. ಕೆಳಗಿನ ಉದಾ ಹರಣೆಯೇ ಇದಕ್ಕೆ ಸಾಕ್ಷಿ,

1967 ನೇ ಇಸವಿಯ ಬೇಸಗೆ. ಮಂಗಳೂರಿನ ಶ್ರೀ ವೆಂಕಟರಮಣ ದೇವಸ್ಥಾನದಿಂದ ಬದರಿ ಯಾತ್ರೆ ಗಾಗಿ ಎರಡು ಬಸ್ಸುಗಳಲ್ಲಿ ನೂರಾರು (ಭರ್ತಿ 106) ಭಕ್ತಬಾಂಧವರು ಮುಂಜಾನೆ ಶ್ರೀ ದೇವರ ಪ್ರಾರ್ಥನೆ ಮಾಡಿ ಜೈ ಜೈ ಕಾರದೊಡನೆ ಹೊರಟರು. ಕರ್ನಾಟಕದ ಹಲವಾರು ರಮಣೀಯ ಸ್ಥಳಗಳನ್ನು ಕಂಡು, ಮುಂದೆ ಆಂಧ್ರದಲ್ಲಿ ಹಲವಾರು ನರಸಿಂಹ ದೇವಸ್ಥಾನಗಳನ್ನು ಸಂದರ್ಶಿಸಿ ಆಯಿತು. ತರುವಾಯ ಉತ್ಕಲ ರಾಜ್ಯದ ಭುವನೇಶ್ವರವನ್ನೂ, ಪುರಿಯ ಪ್ರಸಿದ್ಧ ಜಗನ್ನಾಥನನ್ನೂ ನೋಡಿ ಆಯಿತು. ಅಲ್ಲಿಂದ ಬಂಗಾಳಕ್ಕೆ ಹೋಗಿ ಕಲ್ಕತ್ತದ ಶ್ರೀ ರಾಮಕೃಷ್ಣ ಆಶ್ರಮವನ್ನೂ, ನವದ್ವೀಪ ದಲ್ಲಿ ಶ್ರೀ ಚೈತನ್ಯ ಮಹಾಪ್ರಭುಗಳು ಜನ್ಮವೆತ್ತಿದ ಆ ಮನೆಯನ್ನೂ ಸಂದರ್ಶಿಸಿದೆವು. ಮುಂದೆ ಕಾಶಿ, ಪ್ರಯಾಗ, ಗಯಾ ಮುಂತಾದ ಅತ್ಯಂತ ಪವಿತ್ರ ಯಾತ್ರಾ ಸ್ಥಳಗಳನ್ನು ಕಂಡು ಅಯೋಧ್ಯೆಗೆ ಬಂದು ತಲುಪಿದೆವು. ಭಗವಾನ್ ಶ್ರೀ ರಾಮಚಂದ್ರನ ಈ ಜನ್ಮಸ್ಥಳದಲ್ಲಿ ದಿನ ವಿಡಿ ತಿರುಗಾಡಿ, ಎಷ್ಟೋ ದೇವಾಲಯಗಳನ್ನು ನೋಡಿ ರಾತ್ರಿ 9–30ಕ್ಕೆ ಮುಂದಿನ ಯಾತ್ರೆಗಾಗಿ ಬಸ್ ಹತ್ತಿದೆವು. ಬಸ್ ಬಿಡಲು ತಯಾರಾಯಿತು. ನನಗೆ 105 ಡಿಗ್ರಿಯ ಕಠಿಣಜ್ವರ. ಅತಿಕಷ್ಟದಿಂದ ಬಸ್ಸಿನಿಂದ ಕೆಳಗಿಳಿದು ಹತ್ತಿರದ ಕಟ್ಟೆಯ ಮೇಲೆ ಕುಳಿತು, "ನನಗಿದು ಪರಿಚಿತ

ಜ್ವರ, ಗಾಬರಿ ಇಲ್ಲ, ಎರಡು ದಿನಗಳೊಳಗೆ ವಾಸಿಯಾಗುತ್ತದೆ, ನಾನು ಇಲ್ಲಿಯೇ ಯಾವುದಾದರೊಂದು ಹೋಟೆಲಲ್ಲಿ ಉಳಿದು ಎರಡು ಮೂರುದಿನಗಳಲ್ಲಿಯೇ ನಿಮ್ಮನ್ನು ಸೇರುವೆನು. ನೀವು ಮುಂದಿನ ಪ್ರಯಾಣ ಬೆಳಸಿರಿ, ಒಬ್ಬನಿಗಾಗಿ ನೂರಾರು ಜನರು ಎರಡು ದಿನದ ಸಮಯ ಹಾಳು ಮಾಡಿ ಸಹಸ್ರಾರು ರೂಪಾಯಿ ವ್ಯರ್ಥ ಮಾಡುವುದು ಸರಿಯಲ್ಲ" ಎಂದು ಮನಸ್ಸಾಕ್ಷಿಗೆ ಸರಿಯಾಗಿಯೇ ತೊದಲ್ನುಡಿಯಲ್ಲಿಯೇ ಶ್ರೀ ದಾಸರಲ್ಲಿ ಹೇಳಿದೆ. ದಾಸರು ನನ್ನ ಮಾತಿಗೆ ಕಿವಿಗೊಡದೆ ಮುಂದಿನ ಪ್ರಯಾಣವನ್ನು ನಿಲ್ಲಿಸಿ ಬಸ್ಸುಗಳನ್ನು ನಮ್ಮ ವಸತಿ ಗೃಹಗಳಿಗೆ ತಿರುಗಿಸಿದರು. ಡಾಕ್ಟರರಿಂದ ಔಷಧಿ ತಂದರು. ಚೆನ್ನಾಗಿ ಆರೈಕೆ ಮಾಡಿದರು. ಮಧ್ಯರಾತ್ರಿ ಸುಮಾರಿಗೆ ನಿದ್ದೆಯೂ ಬಂತು. ಬೆಳಿಗ್ಗೆ 5, 6ರ ಸುಮಾರಿಗೆ ಎಚ್ಚರವಾದಾಗ ನಮ್ಮಲ್ಲಿಯ ಸಹಯಾತ್ರಿಕರಾದ ಮಡಿಕೇರಿ ಯುವರೊಬ್ಬರು ತಮ್ಮ ಇಹಲೋಕ ಯಾತ್ರೆಯನ್ನು ಮುಗಿಸಿದ್ದು ತಿಳಿದು ಬಂತು. ತಡೆಯಲಾರದ ಸೆಕೆಗಾಗಿ ಹಿಂದಿನ ರಾತ್ರೆ ಚಡಪಡಿಸುತ್ತಾ ಮಧ್ಯರಾತ್ರೆಯ ಸುಮಾರಿಗೆ ನಿದ್ದೆ ಹೋದವರು ಮತ್ತೆ ಏಳಲೇ ಇಲ್ಲ. ಪತ್ನಿಯು ಎಬ್ಬಿಸಲು ಹೋದಾಗ ಮಾತೇ ಇಲ್ಲ. ಪ್ರಾಣ ಪಕ್ಷಿಯು ಗೂಡು ಬಿಟ್ಟು ಅದೆಷ್ಟೋ ಸಮಯವಾಗಿತ್ತು. ಮರಣದ ಸುದ್ದಿ ಕೇಳಿದ ಹೆಚ್ಚಿನ ನಮ್ಮ ಸಹಯಾತ್ರಿಕರು ನಾನೇ ಆ 'ಆಸಾಮಿ' ಎಂದು ನನ್ನನ್ನು ನೋಡಲು ಬಂದರು. ಸಾಯಬೇಕಾದವನು ನಾನು. ಹಿಂದಿನ ದಿನದ ಜ್ವರ ಮತ್ತು ಸಂಕಟ ಮರಣಕ್ಕೆ ಸಾಕಾಗುವಷ್ಟು ಇದ್ದುವು. ಸತ್ತರೂ ಸತ್ತಿರಬಹುದೆಂದು ಬಹುಜನರು ಊಹಿಸಿದ್ದರಂತೆ. ಆದರೆ ಭಗವಾನ್ ಶ್ರೀ ರಾಮಚಂದ್ರನ ಆ ಜನ್ಮಸ್ಥಳದಲ್ಲಿ ದೇಹ ಬಿಡುವ ಪುಣ್ಯ ನನಗೆಲ್ಲಿಂದ ಬರಬೇಕು ? ಆ ಪುಣ್ಯ ಜೀವಿಗೆ ಅಲ್ಲಿ, ಆ ಸ್ಥಳದಲ್ಲಿ ಸಾಯುವ ಯೋಗವಿದ್ದುದರಿಂದಲೇ ನನ್ನ ನೆವದಿಂದಾಗಿ ಬಸ್ಸು ನಿಲ್ಲಿಸಲ್ಪಟ್ಟಿತು. ಮುಂದೆ ಆ ಪುಣ್ಯ ಸ್ಥಳದಲ್ಲಿ ಶವದಹನವಾಗಿ, ಎಲ್ಲರಿಗೂ ಶರಯೂ ನದಿಯ ಸ್ನಾನ ಭಾಗ್ಯ ದೊರೆಯಿತು. 'ಒಬ್ಬನಿಗಾಗಿ ಎಷ್ಟೆಲ್ಲ ಜನ ಕಷ್ಟ ಪಡಬೇಕು' ಎಂದು ರಾತ್ರಿಯೇ ದಾಸರು ಬಸ್ಸನ್ನು ಮುಂದೆ ಹೋಗಗೊಡುತ್ತಿದ್ದರೆ ಏನಾಗುತ್ತಿತ್ತೋ? ಇದೆಲ್ಲ ತಿಳಿದೇ ದಾಸರು ಪ್ರಯಾಣ ನಿಲ್ಲಿಸಿದರೆಂದು ಇದರ ಅರ್ಥವಲ್ಲ. ಅದನ್ನು ಮುಂದಾಗಿ ತಿಳಿಯಲು ಸಾಧ್ಯವೆ? ಅವರಿಗೆ ಸಹ ಯಾತ್ರಿಕರಲ್ಲಿ ಇದ್ದ ಪ್ರೀತಿ ವಾತ್ಸಲ್ಯವೇ ಪ್ರಯಾಣದತಡೆಗೆ ಕಾರಣವಾಯ್ತು.

ಹಿಂದಿನ ಕಾಲದಲ್ಲಿ, ಭಾರತದಲ್ಲಿ, ಅತ್ಯಂತ ಕಠಿಣ ರೋಗಗಳನ್ನು ಗುಣಪಡಿಸುವ ವೈದ್ಯರು ಬಹುಮಂದಿ ಇದ್ದರು. ಆದರೆ ಹೆಚ್ಚಿನ ವೈದ್ಯರು ತಮ್ಮ ವಿದ್ಯೆಯನ್ನು ಯಾರಿಗೂ ಕಲಿಸದೆ ಆ ವಿದ್ಯೆಯು ಅವರೊಂದಿಗೇ ನಾಶವಾಯ್ತು. ಆ ಕಾರಣದಿಂದ ವೈದ್ಯರ ಸಂಖ್ಯೆಯೂ ಕಡಿಮೆಯಾಯ್ತು. ತಮ್ಮ ವಿದ್ಯೆಯನ್ನು ಕಲಿತವರು ತಮಗಿಂತ ಕೀರ್ತಿವಂತರಾಗಬಾರದೆಂದೇ ತಮ್ಮ ವಿದ್ಯೆಯನ್ನು ಅನ್ಯರಿಗೆ ಕಲಿಸುತ್ತಿರಲಿಲ್ಲ. ಆದರೆ ಭವರೋಗವನ್ನು ಗುಣಪಡಿಸುವ ನಮ್ಮ ದಾಸರು ಹಾಗಲ್ಲ. ಹರಿಕೀರ್ತನಾ ವಿದ್ಯೆಯಿಂದ ಭಾರತವಿಡೀ ತಮ್ಮ ಕೀರ್ತಿ ಪಸರಿಸುತ್ತಾ ಇದ್ದರೂ ಹರಿನಾಮದ ಪ್ರಚಾರಕ್ಕೆ ತಾವೊಬ್ಬರೇ ಸಾಲದೆಂದು ತಿಳಿದು ತಮ್ಮಂತೆ ಹಲವಾರು ಕೀರ್ತನಗಾರರನ್ನು ತಯಾರಿಸುವ ಹರಿಕೀರ್ತನಾ ಕಾಲೇಜೊಂದನ್ನು ಬೆಂಗಳೂರಿನ ತಮ್ಮ ದಾಸಾಶ್ರಮದಲ್ಲಿ ಸ್ಥಾಪಿಸಿದರು. ತಮ್ಮ ಶಿಷ್ಯರು ತನಗಿಂತ ಹೆಚ್ಚು ಕೀರ್ತಿ ಪಡೆದರೆ ತಮ್ಮ ಕೀರ್ತಿ ಕಡಿಮೆ ಯಾದೀತೆಂಬ ಭಾವನೆ ಅವರಲ್ಲಿ ಇಲ್ಲ. ಹರಿನಾಮ ಪ್ರಚಾರವೇ ಅವರ ಧ್ಯೇಯ.

ಹರಿಕಥೆಗಾಗಿ, ಭಜನೆಗಾಗಿ ಅಸಂಖ್ಯಾತ ಪದ್ಯಗಳನ್ನು ರಚಿಸಿದ್ದಾರೆ. 1956ರಲ್ಲಿ ಉಡುಪಿಯಲ್ಲಿ ನಡೆದ ಶ್ರೀ ಕಾಶೀಮಠಾಧೀಶ ಶ್ರೀ ಶ್ರೀ ಸುಧೀಂದ್ರ ತೀರ್ಥರ ಚಾತುರ್ಮಾಸದ ಸಂದರ್ಭದಲ್ಲಿ ನಾಲ್ಕು ತಿಂಗಳು ಮಹಾಭಾರತವನ್ನು ಹರಿಕಥಾ ರೂಪವಾಗಿ ನಡೆಸಿದಾಗ ಶ್ರೀಗಳವರು ಚಕ್ರಾಂಗನ ಗೈಸಿ "ಮೂಲನಾರಾಯಣ" ಅಂಕಿತ ಪ್ರದಾನ ಗೈದು ಬಂಗಾರದ ಪದಕ ಹಾಗೂ "ಕೀರ್ತನಾಗ್ರೇಸರ" ಎಂಬ ಬಿರುದನ್ನು ಕೊಟ್ಟು ಅನುಗ್ರಹಿಸಿದರು. ಅಂದಿನಿಂದ ಮೂಲನಾರಾಯಣ ಮುದ್ರಿಕೆಯಿಂದ ಹಲವು ನೂರು ಪದ್ಯಗಳನ್ನೂ, ಪದಗಳನ್ನೂ, ಸ್ತುತಿಗಳನ್ನೂ ರಚಿಸಿದ್ದಾರೆ, ಗೋಕರ್ಣ ಪರ್ತಗಾಳೀ ಶ್ರೀ ದ್ವಾರಕಾನಾಥ ಸ್ವಾಮಿಗಳು "ಕೀರ್ತನಾಚಾರ್ಯ" ಎಂಬ ಬಿರುದನ್ನು ಇತ್ತು ಆಶೀರ್ವದಿಸಿದ್ದಾರೆ.

ಇಷ್ಟಾದರೂ ಶ್ರೀ ದಾಸರ ದೃಷ್ಟಿಯಿಂದ ಧರ್ಮ ಪ್ರಚಾರವು ಕಡಿಮೆಯೇ ಆಯಿತು, 'ದಾಸವಾಣಿ'ಯೆಂಬ

ಪತ್ರಿಕೆಯನ್ನು ಪ್ರಕಟಿಸಿ ಅದರಲ್ಲಿ ನೀತಿ ಕಥೆಗಳನ್ನೂ, ಬೋಧನೆಗಳನ್ನೂ ಬರೆಯುತ್ತಾ ಇದ್ದಾರೆ. ದೇಶದ ಪ್ರಸಿದ್ಧ ಪತ್ರಿಕೆಗಳಿಗೆ ತಮ್ಮ ಲೇಖನಗಳನ್ನು ಕಳಿಸುತ್ತಾರೆ,

ಮೊದಮೊದಲು ಕನ್ನಡದಲ್ಲಿಯೇ ಕೀರ್ತನೆ ನಡೆಸುತ್ತಿದ್ದ ದಾಸರು ಕ್ರಮೇಣ ಕೊಂಕಣಿ, ಮರಾಠಿ, ತುಳು, ಹಿಂದಿ ಭಾಷೆಗಳಲ್ಲಿಯೂ ಮಾಡತೊಡಗಿದರು. ಪ್ರಾಯಶಃ ಭಾರತದಲ್ಲಿ ಇವರ ಕಥೆಗಳನ್ನು ಕೇಳದ ರಾಜ್ಯವೇ ಇಲ್ಲವೆನ್ನಬಹುದು. ನವರಸಭರಿತವಾದ ಇವರ ಕಥೆಗಳಲ್ಲಿ ಉಪಕಥೆ, ನಾಣ್ಣುಡಿ, ಪುರಾಣ ಕಥೆ, ಆಧುನಿಕ ವಾರ್ತೆಗಳು ಎಲ್ಲವೂ ಸೇರಿವೆ. ರಾಮಾಯಣ, ಭಾರತ, ಭಾಗವತ, ಗೀತೆ, ಭಕ್ತಿವಿಜಯದ ಸಂತರು, ಆಳ್ವಾರರು, ದಾಸರು, ಆಚಾರ್ಯರು – ಇವರೆಲ್ಲ ಇವರ ಕಥಾವಸ್ತು. ಸಾಮಾನ್ಯ ಮನುಷ್ಯನು ಒಂದು ವರ್ಷದಲ್ಲಿ, ಕೆಲವರು ಇಡೀ ಜೀವಮಾನದಲ್ಲಿ, ಪಡೆಯು ಬಹುದಾದ ಅನುಭವವನ್ನು ಇವರ ಎರಡು ಗಂಟೆಗಳ ಒಂದೇ ಒಂದು ಕಥೆಯನ್ನು ಕೇಳಿದುದರಿಂದ ಪಡೆಯ ಬಹುದು. ಒಂದು ಬಾರಿ ಇವರ ಕಥೆಯ ರುಚಿಯನ್ನು ಸವಿದವನು ನಂತರ ಆ ಕಥೆಯು ಯಾವ ಹೊತ್ತಿನಲ್ಲಿ ಯಾವ ಮೂಲೆಯಲ್ಲಿ ನಡೆದರೂ ಬಂದೇ ಬರುತ್ತಾನೆ. ಇವರ ಗೀತಾ ಪ್ರವಚನವೆಂದರೆ ಅದೊಂದು ಆಧ್ಯಾತ್ಮದ ಔತಣ.

ಒಂದೇ ಒಂದು ದಿನದಲ್ಲಿ ಮಾಡಿದ ಕಥೆಗಳ ಸಂಖ್ಯೆಯನ್ನು ಕೇಳಿದರಂತೂ ಇದು ದೈವನಿರ್ಮಿತ ಯಂತ್ರವೆಂದೇ ಹೇಳಬೇಕಾಗುತ್ತದೆ. ಮುಂಜಾನೆ ಗೀತಾ ಪ್ರವಚನ, ಮಧ್ಯಾಹ್ನ ಕಥೆ, ಸಾಯಂಕಾಲ ಕಥೆ, ರಾತ್ರೆಯಂತೂ ತಪ್ಪದೆ ಕಥೆ. ಹರಿಕಥೆಗೂ "ಮ್ಯಾಟಿನಿ" ಬೇಡವೆ ಎಂದು ಒಮ್ಮೆ ವಿನೋದವಾಗಿ ಹೇಳಿದ್ದರು.

ಈ ರೀತಿ ಬಹುಮುಖ ಪ್ರತಿಭೆಯುಳ್ಳ ಶ್ರೀ ದಾಸರು ತಮ್ಮ ಹತ್ತೊಂಬತ್ತರ ಹರೆಯದಲ್ಲಿ ಹರಿಕಥೆಯನ್ನು ಆರಂಭಿಸಿ ಇದೇ ಕಳೆದ ಶಿವರಾತ್ರೆಗೆ 25 ವರ್ಷಗಳು ಸಂದವು. ಎಂದರೆ ಇದು ಅವರ ಹರಿಕೀರ್ತನೆಯ ರಜತೋತ್ಸವ ವರ್ಷ. ಈ 25 ವರ್ಷಗಳಲ್ಲಿ, ಆಧ್ಯಾತ್ಮದಿಂದ ದೂರ ಸರಿಯುವ ಇಂದಿನ ಜನರಿಗೆ ಉಪಯುಕ್ತವಾಗುವಂತೆ, ಅವರ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳಿಂದ ತಮ್ಮ ಜೀವನವನ್ನು ಸವೆಯಿಸುತ್ತಾ ಬಂದಿದ್ದಾರೆ. ಪ್ರಾಯಷಃ ಅವರು ಅದಕ್ಕಾಗಿಯೇ ಹುಟ್ಟಿರಬೇಕು. ಇಂಥವರು ಹಲವರಿಲ್ಲದ ಕಾಲದಲ್ಲಿ ಶ್ರೀ ದಾಸರಿಗೆ ಪೂರ್ಣ ಆಯುಸ್ಸನ್ನೂ ಸನಾತನ ಹಿಂದೂ ಧರ್ಮವು ಪುನರಪಿ ಜಯಭೇರಿ ಹೊಡೆಯುವಂತಾಗಲಿ; ಅವರ ಹರಿಕಥಾ ಕಾಲಕ್ಷೇಪದ ಸ್ವರ್ಣೋತ್ಸವವೂ, ವಜ್ರೋತ್ಸವವೂ ಜರಗುವಂತಾಗಲಿ ಎಂದು ಆ ಜಗತ್‌ರಕ್ಷಕನನ್ನು ಅನನ್ಯವಾಗಿ ಪ್ರಾರ್ಥಿಸುತ್ತೇನೆ.

* * *

### ವಿಷಯ ಸರ್ಪದ ವಿಷವನ್ನು ಕಳೆವ ಸದ್ಗುರು

ಹಾವು ತುಳಿದೆನೆ ಮಾನಿನಿ
ಹಾವು ತುಳಿದು ಹಾರಿ ನಿಂತೆ ! ಜೀವ ಕಳವಳಗೊಂಡಿತು ಗೆಳತೀ !
ಭಾವ ಸ್ಮೃತಿಯು ತಪ್ಪಿ ಮನದಿ । ದೇವ ನೀನೆ ಗತಿಯು ಎಂದೆ ॥
ಹರಿಗೆ ಹಾಸಿಗೆಯಾದ ಹಾವು । ಹರನ ಕೊರಳೊಳಿರುವ ಹಾವು ।
ಧರೆಯ ಹೊತ್ತು ಮೆರೆವ ಹಾವಿನ । ಶಿರವ ಮೆಟ್ಟಿದೆ ಶಿವನ ದಯದಿ ॥
ಬೋಧಾನಂದದಿಂದ ಬರುವ ! ಹಾದಿಯಲ್ಲಿ ಮಲಗಿ ಇರುವ ॥
ನಾದದಿಂದ ಧ್ವನಿಯ ಕೊಡುವ । ಮೋದ ರೂಪ, ಕ್ರೋಧ ರೂಪ ॥
ಘೋರತರದ ಉರಗವದರ । ಕೋರೆ ಹಲ್ಲು ಮುರಿದರಿಂದ ॥
ಸತ್ಯ ಶಿಶುನಾಳಧೀಶನ ಸೇವಕಗೆ । ಕತ್ತಲೆಯಲ್ಲಿ ಕಾಲಿಗೆ ಸುತ್ತಿಕೊಂಡ ॥

# ಶ್ರೀ ಭದ್ರಗಿರಿ ಅಚ್ಯುತದಾಸರ ಸಾಹಿತ್ಯ ಸೇವೆ

ವಿದ್ವಾನ್ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲು

**ಜೀವನರಂಗ :**

**೧. ಭೂಮಿಕೆ :** 'ಹರಿದಾಸ ಸಾಹಿತ್ಯ'ದ ಉಗಮ ವ್ಯಾಸರಚಿತ ಭಾಗವತಾದಿ ಕೃತಿಗಳಲ್ಲಿ ಕಂಗೊಳಿಸುತ್ತದೆ. 'ಶ್ರವಣಂ, ಕೀರ್ತನಂ, ವಿಷ್ಣೋಃ ಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮನಿವೇದನಂ' (7-5-23 ಭಾಗವತ). ಶ್ರವಣ ಮೊದಲಾಗಿ 'ಆತ್ಮನಿವೇದನ'ದವರೆಗೆ 'ನವವಿಧ'ದ ಭಕ್ತಿಯ ಬಗೆ ಅಲ್ಲಿದೆ. 'ಪ್ರಲ್ಹಾದಸ್ತಾಲಧಾರೀ' ಎಂಬಲ್ಲಿ ಪ್ರಹ್ಲಾದ ಮೊದಲಿಗೆ 'ಹರಿದಾಸ'ನಾಗಿರುವುದು ಮರೆಯಲಾಗದು !

ದೇವವಾಣಿಯಾದ ಸಂಸ್ಕೃತ ಭಾಷೆಯಲ್ಲಿ ಪ್ರಾಚೀನದಿಂದ ಇಂದಿನವರೆಗೂ ಹಲವು ಮಹನೀಯರು ಹರಿಕೀರ್ತನೆಗಳನ್ನು ರಚಿಸಿದ್ದಾರೆ; ಆದರಿಂದ ಅವು ವಿಶ್ವವ್ಯಾಪಕವಾಗಿವೆ. ಅವನ್ನು ಅರಿಯದವರಿಗಾಗಿ, ದೇಶೀಯ ಭಾಷೆಗಳಲ್ಲಿಯೂ ಹರಿಕೀರ್ತನೆಗಳನ್ನು ಬಿತ್ತರಿಸುವುದು ಸಾಧುವಾಗಿದೆ. ಈ ದಿಸೆಯಲ್ಲಿ ತಮಿಳಿನ 'ಆಳ್ವಾರ' ಮೊದಲಾದವರು ಪ್ರಸಿದ್ಧರು, ಕನ್ನಡದಲ್ಲಿ 'ಹರಿದಾಸ'ರಾದ ಶ್ರೀ ನರಹರಿ ತೀರ್ಥರು 'ಆದ್ಯ'ರಾಗಿದ್ದಾರೆ.

ಶ್ರೀ ಮಧ್ವಾಚಾರ್ಯರು (ಇಸವಿ 1200–78) ಸಂಸ್ಕೃತದಲ್ಲಿ 'ದ್ವಾದಶ ಸ್ತೋತ್ರ'ದಲ್ಲಿ – ಭಕ್ತಿಯ ವಿಚಾರವನ್ನು ಪ್ರಸರಿಸಿದ್ದಾರೆ. ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀ ನರಹರಿತೀರ್ಥರು ರಚಿಸಿದ ಕನ್ನಡದ ಕೀರ್ತನೆಗಳೆರಡಾಗಿವೆ. ಆಗ ಗಂಜಾಂ ಜಿಲ್ಲೆಯ ಪ್ರತಿನಿಧಿಯಾದ ಇವರು ಈ ಬಗೆಗೆ ಹೆಚ್ಚು ಗಮನ ವಿರಿಸಲಾಗಲಿಲ್ಲ ! ಅನಂತರ ಕೆಲವರು 'ಆದ್ಯ'ರು ಬರೆದ ಕೃತಿಗಳು ದೊರಕಿವೆಯೆನ್ನುವರು. (ಶ್ರೀ ಕಪಟರಾಳ ಕೃಷ್ಣರಾಯರ ಲೇಖನ) ಮತ್ತೆ ಎರಡು ಶತಕಗಳವರೆಗೆ ಯಾರು ಎಷ್ಟು ಹರಿಕೀರ್ತನೆಗಳನ್ನು ಬರೆದರೆಂಬುದು ಸುತರಾಂ ನಿಕರವಾಗಿ ತಿಳಿದಿಲ್ಲ, ಶ್ರೀಪಾದರಾಯರು, ಶ್ರೀ ವ್ಯಾಸರಾಯರು, ಶ್ರೀ ವಾದಿರಾಜರು (15–16ನೆ ಶತಕ) ಈ ಬಗೆಗೆ ಮುಂದಾಳಾದರು. ಸಂಸ್ಕೃತದಲ್ಲಿ ಬರೆದ ಹರಿಕೀರ್ತನೆಗಳ (ಹರಿಯ ಭಕ್ತಿಪರ ಕೃತಿಗಳ) ಪ್ರಸಾರಕರು 'ವ್ಯಾಸಕೂಟ'ವೆಂದೂ, ಕನ್ನಡದಲ್ಲಿ ಹರಿಕೀರ್ತನೆ ಬರೆದ ಪ್ರಸಾರಕರು 'ದಾಸಕೂಟ'ವೆಂದೂ, ಈ ಎರಡೂ ಕೂಟದವರೂ ಹರಿಭಕ್ತಿಪಾರಮ್ಯವನ್ನು ಸಾರುವುದು ಮೊದಲಾಯಿತು. ಈ ಮಠಾಧೀಶರು ತಂತಮ್ಮ ದೇವರ ಪೂಜೆಯ ಹೊತ್ತಿಗೆ ಸಂಸ್ಕೃತದಂತೆ ಕನ್ನಡದ ಕೃತಿಗಳನ್ನು ಹಾಡಲು ಕಟ್ಟಳೆಗಳನ್ನು ಮಾಡಿದರು; ತಾವೇ ಹಲವು ತರದ ಕೃತಿಗಳನ್ನು (ಉಗಾಭೋಗ, ಸುಳಾದಿ, ಗುಂಡಕ್ರಿಯೆ, ವರ್ಣ, ಪದ, ಹಾಡು, ಕೀರ್ತನೆ) ರಚಿಸಿದರು; ಸಂಗೀತ, ಸಾಹಿತ್ಯ, ಧಾರ್ಮಿಕಗಳೆಂಬ ಮುಪ್ಪುರಿಯುಳ್ಳ ಈ ಕೃತಿಗಳು 'ಹರಿದಾಸ ಸಾಹಿತ್ಯ'ದ ಮೂಲಾಧಾರಗಳಾಗಿವೆ ! ಈ ಮಹಾಜನರ ಆದೇಶದಂತೆ, ಶ್ರೀ ಪುರಂದರದಾಸರು, ಶ್ರೀ ಕನಕದಾಸರು, ಶ್ರೀ ವಿಜಯದಾಸರು, ಶ್ರೀ ಜಗನ್ನಾಥದಾಸರು, ಶ್ರೀ ಪ್ರಸನ್ನ ವೆಂಕಟದಾಸರು ಮೊದಲಾದ ಅನೇಕರು ಹರಿಕೀರ್ತನೆಗಳನ್ನು ರಚಿಸಿ, ನಾಡಿನ ಎಲ್ಲೆಡೆ ಸಂಚರಿಸಿ, ಹರಿಭಕ್ತಿಯನ್ನು ಸಾರಿದ 'ಹರಿದಾಸ'ವರೇಣ್ಯರಾದರು.

**ಅರ್ವಾಚೀನ ಕಾಲದಲ್ಲಿ :** 19ನೆ ಶತಕದಲ್ಲಿ ಈ ಬಗೆಯನ್ನು ಕೈಕೊಂಡ ದ. ಕ. ಜಿಲ್ಲೆಯ ಶ್ರೀ ಪಾವಂಜೆ ಲಕ್ಷ್ಮೀನಾರಾಯಣ, ಶ್ರೀ ಮೆಟ್ಟಿ ವಾಸುದೇವ ಪ್ರಭು, ಶ್ರೀ ಬೋಳಾರ್ ವಾಸುದೇವಯ್ಯ, ಶ್ರೀ ಮುಲ್ಕಿ ರಾಮಕೃಷ್ಣ ಮತ್ತು ಶ್ರೀ ಬಂಗ್ಲೆ ನಾರಾಯಣ ಕಾಮತ, ಶ್ರೀ ತುಬಾಕಿ ಆಚಾರ್ಯರು ಮೊದಲಾದವರ ಕೃತಿಗಳು ಉಲ್ಲೇಖಾರ್ಹವಾಗಿವೆ.

ಈ 20ನೇ ಶತಕದಲ್ಲಿ ಈ ಜಿಲ್ಲೆಯ ಹೆಸರಿಸತಕ್ಕ 'ಹರಿದಾಸ'ರಲ್ಲಿ ಶ್ರೀ ಭದ್ರಗಿರಿ ಅಚ್ಯುತದಾಸರೊಬ್ಬ-ರಾಗಿದ್ದಾರೆಂಬುದು ನಮಗೆಲ್ಲ ಹೆಮ್ಮೆಯ–ಸಂತಸದ ಸಂಗತಿ ! ಅವರೊಬ್ಬ 'ಸಂತರೇ' ಆಗಿದ್ದಾರೆ.

೨. ಹಿನ್ನೆಲೆ ; ಉಡುಪಿ ಕ್ಷೇತ್ರದ ಕಲ್ಯಾಣಪುರ ಬ್ರಹ್ಮಾವರಗಳ ಪರಿಸರದ 'ಭದ್ರಗಿರಿ'ಯು ನಾವೆಲ್ಲ ನೆನಪಿಡತಕ್ಕ ಸ್ಥಳವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ಸತ್ಕುಲೀನ ಶ್ರೀ ವೆಂಕಟರಮಣ ಪೈ ಮತ್ತು ಸೌ. ರುಕ್ಮಿಣೀದೇವಿಯರಲ್ಲಿ ಜನಿಸಿದರು, ಶ್ರೀ ಅಚ್ಯುತ-ದಾಸರು. ಶ್ರೀ ದೇವರ ದಯೆ, ಹಿರಿಯರ ಅನುಗ್ರಹ, ಗುರುಪೀಠಗಳ ಆಶೀರ್ವಾದ, ಸ್ವಾರ್ಜಿತ ವಿದ್ಯಾಭ್ಯಾಸ ಸ್ವಪೂರ್ವಪುಣ್ಯದ ಬೆಂಬಲ ಈ 'ಪಂಚದ್ರವ್ಯಗಳ ಸಂಯೋಗ'ದಿಂದ ಶ್ರೀ ಅಚ್ಯುತದಾಸರು 'ಸಾರ್ಥಕ ನಾಮ'ರಾಗಿ, 'ಪರಿವರ್ಧನೆ'ಗೊಂಡಿರುತ್ತಾರೆ. ಜಿಲ್ಲೆಯ ಪರಿಧಿಯನ್ನು ದಾಟಿ, ಕರ್ಣಾಟಕದ ಮುಖ್ಯ ಪಟ್ಟಣ ಬೆಂಗಳೂರಲ್ಲಿ ದಾಸಾಶ್ರಮವನ್ನು ಶ್ರೀಯುತರು ಸ್ಥಾಪಿ-ಸಿದರು. ಈ ಮಹತ್ಕಾರ್ಯಕ್ಕೆ ಸ್ವಸೋದರರ 'ಐಕ್ಯಮತ್ಯ'ದ ಬೆಂಬಲ, ಸಾರ್ವಜನಿಕ ಮಹಾಶಯರ 'ಔದಾರ್ಯಗಳು' ಕಾರಣಗಳಾಗಿವೆ. ಅಲ್ಲಿ ದೈನಿಕ ವಿನಿಯೋಗಗಳು, ಇತರ ಭಕ್ತರ ವೈಶೇಷಿಕ–ನೈಮಿತ್ತಿಕ ಕಾರ್ಯಕಲಾಪಗಳು ಅನೂಚಾನವಾಗಿ ನಡೆಯಲು ಸುವ್ಯವಸ್ಥೆಗಳು ನಿರೂಪಿತ ಗಳಾಗಿವೆ, ಅಲ್ಲಿಗೊಮ್ಮೆ ಹೋದರೆ ಆ 'ಪುಣ್ಯಾಶ್ರಮ'ದ ಸಂದರ್ಶನದಲ್ಲಿ ಹಲವು ಪುಣ್ಯ ಕಾರ್ಯಗಳನ್ನು ಕಣ್ಣಾರೆ ಕಾಣಬಹುದು. ನನಗೊಂದು ಬಾರಿ ಆ 'ಪವಿತ್ರ ಸ್ಥಾನ' ವನ್ನು ಸಂದರ್ಶಿಸುವ ಭಾಗ್ಯ ಒದಗಿತ್ತು ! 'ದಾಸಾ-ಶ್ರಮ'ದ ಸುಪ್ರಕಟನೆಗಳೂ ಉಲ್ಲೇಖನೀಯಗಳಾಗಿವೆ.

'ದಾಸವಾಣಿ' (ಕನ್ನಡ) 'ದಾಸಜ್ಯೋತಿ' (ಆಂಗ್ಲ) ಪತ್ರಿಕೆಗಳಲ್ಲಿ ಶ್ರೀ ಭದ್ರಗಿರಿ ಸೋದರರ ಕೃತಿಗಳು, ಕಾರ್ಯಕಲಾಪಗಳು (ಸಚಿತ್ರ) ವಿಚಾರ ಪರಿಪ್ಲುತ ಲೇಖನಗಳು ಪ್ರಕಟವಾಗುತ್ತಿವೆ. ಹಲವು ಮಂದಿ ಹಿರಿಯರ–ಕಿರಿಯರ ಲೇಖನಗಳೂ ಅವಲ್ಲಿ ಕಾಣುತ್ತಿವೆ. ಭಾರತೀಯ ಹಾಗೂ ವಿದೇಶೀಯ ವಿಚಾರಧಾರೆಗಳನ್ನು ಅವು ನಮಗೆ ತಿಳಿಯಿಸುತ್ತವೆ; 'ಪ್ರಗತಿಗೆ' ನಮ್ಮನ್ನು ಸಾಗಿಸುತ್ತಿವೆ. ಹರಿದಾಸರ ಸಮ್ಮೇಳನವಾದರೊ, ರಾಜ್ಯದ–ದೇಶದ–ಧಾರ್ಮಿಕ ರಂಗದ ಜಾಗೃತಿಕ ಮಹತ್ವ ವನ್ನು ನಿವೇದಿಸಿದೆ. ಸಂತ ಶ್ರೀ ಅಚ್ಯುತದಾಸರ ಕೃತಿಗಳು 'ಮೂಲನಾರಾಯಣ' ಎಂಬ ಅಂಕಿತದಿಂದ ಕೂಡಿವೆ.

೩. ಅಂಕಿತಪ್ರಾಪ್ತಿ ; ಶ್ರೀ ಕಾಶೀಮಠಾಧೀಶ ರಾದ ಶ್ರೀ ಸುಧೀಂದ್ರತೀರ್ಥರ ದಿವ್ಯಹಸ್ತದಿಂದ 'ಚಕ್ರಾಂಕನ'ಪೂರ್ವಕ 'ವಿಧ್ಯುಕ್ತ'ವಾಗಿ ಈ ಅಂಕಿತ ಶ್ರೀಯುತರಿಗೆ ದೊರೆಯಿತು. ಇದು ಶ್ರೀಯುತರ ಸದ್ಭಾಗ್ಯೋದಯವೇ ಸೈ ! ಶ್ರೀ ಗೋಕರ್ಣ ಪರ್ತಗಾಳಿ ಜೀವೊತ್ತಮ ಮಠದ ಶ್ರೀ ದ್ವಾರಕಾನಾಥತೀರ್ಥರು ಶ್ರೀಯುತರಿಗೆ 'ವೇದಾಂತ' ವಿಚಾರಗಳ ಬೋಧಕ ರಾದುದು' ಸುವರ್ಣಕ್ಕೆ ರತ್ನದ ಸಂಯೋಗ'ವೆಂಬಂತೆ ಸಾಧು ! "ಹರಿಕಥಾಮೃತಸಾರ ಗುರುಗಳ ಕರುಣ-ದಿಂದಾಪನಿತು ಪೇಳುವೆ'ನೆಂದು ಶ್ರೀ ಜಗನ್ನಾಥದಾಸರು ಹೇಳಿದ್ದರು. ಅಂತೆ ಉಭಯ ಮಠಾಧೀಶರು ಶ್ರೀಯುತರಿಗೆ ದಯೆ ಪಾಲಿಸಿದ ವಿಶೇಷಾನುಗ್ರಹದಿಂದಾಗಿ, ಶ್ರೀಯುತರ 'ಹರಿದಾಸ ಸಾಹಿತ್ಯ ಸೇವೆ'ಗೆ ಹಿನ್ನೆಲೆಯೊದಗಿದೆ; ಶೋಭೆಪಡೆದಿದೆ! "ಶ್ಲಿಷ್ಟಾ ಕ್ರಿಯಾ ಕಸ್ಯಚಿದಾತ್ಮಸಂಸ್ಥಾ, ಸಂಕ್ರಾಂತಿರನ್ಯಸ್ಯ ವಿಶೇಷಯುಕ್ತಾ ಯಸ್ಯೋಭಯಂ ಸಾಧು ಸ ಶಿಕ್ಷಕಾನಾಂ ಧುರಿ ಪ್ರತಿಷ್ಠಾಪಯಿತವ್ಯ ಏವ" ಎಂಬ ಮಹಾಕವಿ ಕಾಲಿದಾಸನ ಸೂಕ್ತಿ ಇಲ್ಲಿ ನೆನಪಾಗು-ತ್ತದೆ. 'ಅವೊಬ್ಬನಿಗೆ ತಾನು ಮಾತ್ರ ಸಾಧಕ ನಾಗಿರುವುದು ಸಾಧ್ಯ, ಇತರರನ್ನು ಮಾತ್ರ ಸಾಧಕರನ್ನಾ-ಗಿಸುವುದು ಮಗುದೊಬ್ಬರಿಗೆ ಸಾಧ್ಯ; ಅವನಿಗೆ ಈ ಯೆರಡೂ ಬಗೆಗಳು ಸಾಧ್ಯವೋ, ಆತ' ಶಿಕ್ಷಕಾಗ್ರೇಸರ-' ನಾಗಿ (ಮಹಾ ವಿದ್ವಾನ್ ಆಗಿ) ಪರಿಗಣನೀಯ"ನೆಂಬೀ ಮಾತಿಗೆ ಶ್ರೀ ಸಂತ ಅಚ್ಯುತದಾಸರು ಅತ್ಯುತ್ತಮ ನಿದರ್ಶನರಾಗಿದ್ದಾರೆ. ಶ್ರೀಯುತರೂ ಹರಿದಾಸರಾಗಿ-ದ್ದಾರೆ, ಇತರರೂ ಶ್ರೀಯುತರ ಆದರ್ಶದಲ್ಲಿ 'ಹರಿದಾಸ' ರಾಗಿ ಕೀರ್ತಿ ಪಡೆದಿದ್ದಾರೆ. (ಇಂತಹ ನಿದರ್ಶನಗಳು ಅತ್ಯಪೂರ್ವಗಳಾಗಿ ಕೆಲವು ಶತಕಕ್ಕೊಮ್ಮೆ ಕಂಗೊಳಿಸು-ತ್ತವೆ.)

೪. ಅಂಕಿತ ವಿಚಾರ : ಕನ್ನಡದ ಹರಿದಾಸರಿಗೆ ಪಂಢರಪುರದ 'ವಿಠಲ'ನೇ ಹೆಚ್ಚಾಗಿ ಉಪಾಸ್ಯಮೂರ್ತಿ. ಆ ಮೇರೆಗೆ 'ವಿಠಲ ನಾಮ'ವನ್ನು ತಮ್ಮ 'ಮುದ್ರಿಕೆ' ಯೊಂದಿಗೆ ಕೆಲವರು ಅನುಸಂಧಾನ ಮಾಡುತ್ತಾರೆ : ಶ್ರೀಪಾದರಾಯರು; 'ರಂಗವಿಠಲ', ಶ್ರೀನಿವಾಸ

ನಾಯಕರು; 'ಪುರಂಧರ ವಿಠಲ' ಇತ್ಯಾದಿ. ಕೆಲವರು ಕೇವಲ 'ಮುದ್ರಿಕೆ'ಯನ್ನು ಬಳಸುತ್ತಾರೆ. ಶ್ರೀ ನರಸಿಂಹತೀರ್ಥರು 'ಧೀರ ವೇಣುಗೋಪಾಲ', ಶ್ರೀ ವ್ಯಾಸರಾಯರು : 'ಶ್ರೀಕೃಷ್ಣ', ಶ್ರೀ ವಾದಿರಾಜರು : 'ಹಯವದನ', ಶ್ರೀ ಕನಕದಾಸರು : 'ಕಾಗಿ ನೆಲೆಯಾದಿ ಕೇಶವ', ಇತ್ಯಾದಿ. ಶ್ರೀ ಅಚ್ಯುತದಾಸರೂ ಶ್ರೀ ಗುರುದತ್ತವಾದ 'ಮೂಲನಾರಾಯಣ'ವೆಂಬ 'ಮುದ್ರಿಕೆ' ಯಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಶ್ರೀಯುತರ ಗದ್ಯ-ಪದ್ಯರೂಪದ ಲೇಖನಗಳಲ್ಲಿ, ಗ್ರಂಥಗಳಲ್ಲಿ 'ಅಚ್ಯುತದಾಸ'ರೆಂಬ ಹೆಸರೇ ಒಳಗೊಂಡಿದೆ. ಶ್ರೀಯುತರ ರಚನಾತ್ಮಕ 'ವಾಙ್ಮಯ' ಸದ್ಯಃ ಒಂದು ಬೃಹದ್ಗ್ರಂಥ ವಾಗಿ ಪ್ರಕಟವಾಗಲಿದೆಯೆಂಬುದು ಹರಿದಾಸರೆಲ್ಲರಿಗೆ, ದೈವಿಕ ಭಕ್ತರಿಗೆಲ್ಲರಿಗೆ ಆನಂದಾವಹವಾಗಿದೆ !

ಕೀರ್ತನರಂಗ :

೧. ಔಚಿತ್ಯ : ಶ್ರೀ ಅಚ್ಯುತದಾಸರು 'ಕೀರ್ತನ ರಂಗ'ದಲ್ಲಿರುವ ಬಗೆ ಇಲ್ಲಿ ಬಿತ್ತರಿಸಬೇಕು. ಮಂಗಳೂರ ನೆರೆಯ ಗುರುಪುರದ ದೇವಾಲಯಕ್ಕೊಮ್ಮೆ ಶ್ರೀ ಕೆ. ಆರ್. ಕಾಮತ್ (ಇಡ್ಯಪಟೇಲ್) ಮತ್ತು ನಾನು ಹೋಗಿದ್ದೆವು. ಪಂಢರಪುರ 'ವಿಠಲನಂತೆ, ತಲೆಗೆ ಕಿರೀಟದ ಪೇಟ, ನಿಲುವಂಗಿ 'ಘಟ್ಟುಪಟ್ಟ' ತಾಳ ಮತ್ತು ವಿಠಲ ಚಿತ್ರದೊಂದಿಗೆ ಶ್ರೀಯುತರು 'ಹರಿಕತೆ'ಗೆ ಬುದರು. (ಶ್ರೀಯುತರ ಈ ಚಿತ್ರ 1962 ರ ಮನೋಬೋಧೆಯಲ್ಲಿದೆ.) ಶ್ರೀ ಅಚ್ಯುತದಾಸರ ಮಾತೃಭಾಷೆ ಯಾದ 'ಕೊಂಕಣಿ'ಯಲ್ಲೇ 'ಹರಿಕತೆ' ಸಾಗಿದರೂ, ಮರಾಠಿಯ ಅಭಂಗ, ಸಂಸ್ಕೃತದ ಶ್ಲೋಕ, ಕನ್ನಡದ ವಚನ, ಆಂಗ್ಲದ ಉಲ್ಲೇಖಗಳಿಂದ ವಚೋಲಹರಿ ರಂಜಿಸಿತ್ತು ! "ವಸ್ತ್ರೇಣ ವಪುಷಾ ವಾಚಾ ವಿದ್ಯಯಾ ವಿನಯೇನ' ಎಂಬ 'ಪಂಚವಕಾರ'ಗಳಿಂದಲೇ ಸಂತನಾಗ ಬಲ್ಲನು ಎಂಬುದಕ್ಕೆ ಇವರೊಂದು ಆದರ್ಶ !

೨. ಪರಿಮಿತಿ ಜ್ಞಾನ : ಮುಲ್ಕಿಯಲ್ಲಿ 'ವಿಶ್ವಹಿಂದೂ ಪರಿಷತ್ತಿ'ನ ವತಿಯಿಂದ 'ಹರಿಕತೆ'ಗಳು ಸಾಗಿದ್ದುವು. ಅದೊಮ್ಮೆ ರಾತ್ರಿ ಸುರತ್ಕಲ್ಲಿನ 'ಮಾರಿಯಮ್ಮ'ನ ಗುಡಿಗೆ, ಅದೊಂದು ಸಂಜೆ ವಿದ್ಯಾದಾಯಿನೀ ಶಾಲೆಯ ಮಕ್ಕಳ ಸಭೆಗೆ 'ಹರಿಕತೆ'ಗಾಗಿ ಶ್ರೀಯುತರು ಬಂದಿದ್ದರು. ಸ್ಥಳ-ದೇಶ-ಕಾಲ ಜನರನ್ನು ಪರಿಶೀಲಿಸಿ, ಅಲ್ಲಲ್ಲಿಗೆ ತಕ್ಕಂತೆ ಕತೆಗಳನ್ನು ಬಿತ್ತರಿಸುವ ಜಾಣ್ಮೆಯಲ್ಲಿ ಶ್ರೀ ಅಚ್ಯುತದಾಸರು ಮೇಲ್ಗೈಯವರು ! ಧ್ವನಿಗ್ರಾಹಕ ಫಲಕಗಳಲ್ಲೂ (ಗ್ರಾಮ್‌ಫೋನ್), 'ಆಕಾಶವಾಣಿ' ಗಳಲ್ಲೂ ಆಗಾಗ ಶ್ರೀಯುತರ ಹರಿ-ಕತೆಗಳು ಕೇಳುತ್ತಿವೆ. 'ಈ ಪ್ರಸರಣಗಳಲ್ಲಿ ಸುರಸತೆಯಿಲ್ಲೆಂದು' ತರುಣ ಹರಿದಾಸರೊಬ್ಬರ ಆರೋಪವಾದರೆ, ಅದನ್ನು ಕೇಳಲಾಗದ-ಕಾಣಲಾಗದ 'ಕರುಬುತನವೇ' ಸೈ !

ಕೃತಿರಂಗ :

೧. ಹರಿಭಕ್ತಿ ; 'ಹರಿದಾಸ'ರ ಪಾಲಿಗೆ ಹಿರಿಯ ಗೆಯ್ಮೆಯೆಂದರೆ ಹರಿಯ ಭಕ್ತಿಮಾರ್ಗದ ಅನುಸರಣ. ಈ ಭಕ್ತಿಪಂಥ ಅವೊಂದು ದೇಶದ ಪರಿಮಿತಿಗೊಳಪಟ್ಟಿಲ್ಲ. 'ಉತ್ಪನ್ನಾ ದ್ರಾವಿಡೇ ದೇಶೇ, ವೃದ್ಧಿಂ ಕರ್ಣಾಟಕೇ ಗತಾ' ಎಂಬ ಮಾತು ತೀರಾ ತಪ್ಪಾಗಿದೆ. (ಪದ್ಮ ಪುರಾಣದ ಭಾಗವತ ಮಹಿಮೆ ನೋಡಿ). ನಮ್ಮ ನೆರೆ ನಾಡಿನ 'ಆಳ್ವಾರರು' ಹೇಳಿದವು ಮೌಲಿಕ ಗಳಾಗಿವೆ. ಮರಾಠಿಯ 'ಸಂತಗಾದೆ'ಗಳೂ ಇಲ್ಲಿ ತುಲನಾತ್ಮಕವಾಗಿ ಪರಿಶೀಲನೀಯಗಳಾಗಿವೆ. ಶ್ರೀ ಅಚ್ಯುತದಾಸರು ಸಂಸ್ಕೃತದ 65 ಶ್ಲೋಕಗಳಿಗೆ 'ಸಂತ'ರ ಅಭಂಗಗಳನ್ನು ಉದಾಹರಿಸಿದ್ದಾರೆ. (1975 ರ 'ದಾಸವಾಣಿ' ನೋಡಿ)

೨. ಕೀರ್ತನೆ : 'ಸೋऽಹಂ' ಎಂಬುದಲ್ಲ, 'ದಾಸೋऽಹಂ' ಎಂಬುದೇ 'ಹರಿದಾಸ'ರ ಲಕ್ಷಣ. ಶ್ರೀ ಅಚ್ಯುತದಾಸರ ಕೃತಿಗಳಲ್ಲಿ ಅಡಕವಾಗಿದೆ. "ಹರಿ ನಿನ್ನ ಮಾಯೆ ಅಪಾರ ಅಚಿಂತ್ಯ – ಗರ್ವರಹಿತನಾಗಿ ಸರ್ವದಾ ನಮಿಪೆನು...ಕರುಣೆಗಳ ರಸ ಸಂಸಾರ ಚಕ್ರಕೆ ನಿನ್ನ ವರಲೀಲೆ ಕಾರಣ ಮೂಲ ನಾರಾಯಣ" 'ವಿಷ್ಣು ಧರ್ಮರಹಸ್ಯ'ದಲ್ಲಿ ಈ ಬಗೆತವಿದೆ.

೩. ಕೃತಿಗಳು : ಶ್ರೀ ಸಮರ್ಥ ರಾಮದಾಸರ 'ಮನೋಬೋಧೆ'ಯನ್ನು ಶ್ರೀಯುತರು ಅನುವಾದಿಸಿದ್ದರು; 'ದಾಸಬೋಧ'ವನ್ನು ಸಾರ್ಥಕವಾಗಿ ಬರೆದರು; ಹರಿದಾಸರ-ಹರಿಭಕ್ತರ ಬಗೆಗೆ ಪೌರಾಣಿಕ-ಚಾರಿತ್ರಿಕ ಕತೆಗಳನ್ನು ವಿವರಿಸಿದ ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೀ ಅಚ್ಯುತದಾಸರ ಸತ್ಕೃತಿಗಳೆಲ್ಲವನ್ನು ಒಟ್ಟಿಸಿದರೆ 'ಹರಿದಾಸ ಪರಂಪರೆ'ಗೆ ದೊಡ್ಡ ಕಾಣಿಕೆಯಾಗಬಲ್ಲದು ! ಅಂತಹ ವ್ಯವಹಾರಕ್ಕೆ ಈ 'ಪ್ರಶಸ್ತಿ' ಗ್ರಂಥ 'ನಾಂದಿ ಯಾಗಬಲ್ಲದು ! "ಭದ್ರಂ ಶಂಭಂ ಮಂಗಳಂ !"

# ಹರಿಕಥಾ ಪೂರ್ವರಂಗ

### ಸಂತ ಭದ್ರಗಿರಿ ಅಚ್ಯುತದಾಸರು

ರಾಗ : ಕಾಫಿ ತಾಳ : ಆದಿ

ಮಾಡು ಕರ್ಮವ ಯೋಗಿಯಾಗಿ ।
ಮಾಡಿ ಅರ್ಪಿಸು ಹರಿ ಚರಣಕೆ ಬಾಗಿ ॥ ಪ ॥
ರೂಢಿಯೊಳುತ್ತಮ ಕರ್ಮಕೆ ಫಲವು ।
ಕಾಡೊಳಗಿದ್ದರು ಪಡೆವೆ ನಿಶ್ಚಯವು ।
ಮಾಡದೆ ಮಾಡಿದ ಜ್ಞಾನಿಯಾಗು ।
ಮಾಡಿಯೂ ಮಾಡದ ಕರ್ಮವ ನೀಗೂ ॥ ೧ ॥
ಬೇಡದೆ ಧೃಢ ಮಾಡು ಧ್ಯಾನ ।
ಪಡೆವೆ ಮಹಾಫಲವಿಲ್ಲನುಮಾನ ।
ಕೊಡದಿರುವನೆ ಕರುಣಾ ನಿಧಾನ ।
ಮೃಡ ವಂದಿತ ಮೂಲನಾರಾಯಣಾ ॥ ೨ ॥

ಲೋಕಹಿತಕ್ಕಾಗಿ ಮಾಡುವ ಭಗವದರ್ಪಿತ ಬುದ್ಧಿಯ ನಿಷ್ಕಾಮ ಕರ್ಮವನ್ನೇ ಗೀತೆ, "ಕರ್ಮ ಯೋಗ" ಎಂದು ಕರೆದಿದೆ. ನಿಷ್ಕಾಮ ಕರ್ಮದಿಂದ ಚಿತ್ತಶುದ್ಧಿಯಾಗಿ ಅದು ಜ್ಞಾನಕ್ಕೆ ಕಾರಣವಾಗಿ, ಮುಂದೆ ಸಾಧನೆಯಿಂದ ಧ್ಯಾನಾದಿಗಳು ಸಿದ್ಧಿಸುವುವು. ಆದ್ದರಿದ ಇಲ್ಲಿ ಹೇಳುವ "ಕರ್ಮ"ವೆಂದರೆ—

ಮನುಷ್ಯ ಮಾಡುವ ಊಟ, ನಿದ್ರೆ ಮುಂತಾದ ಕರ್ಮವಲ್ಲಾ. ಗೀತೆಯು ಹೇಳುವ ನಿಯತ ಕರ್ಮ,

'ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋಹ್ಯ ಕರ್ಮಣಃ ।
ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇದಕರ್ಮಣಃ ।
(ಗೀತೆ ೩, ಶ್ಲೋಕ ೮)

ಯಾವ ಕಾರಣದಿಂದ ಕರ್ಮವನ್ನು ಮಾಡದೇ ಇರುವುದಕ್ಕಿಂತಲೂ ಕರ್ಮವನ್ನು ಮಾಡುವುದು ಶ್ರೇಷ್ಠ ವಾದುದೋ ಆ ಕಾರಣದಿಂದ ನೀನು ನಿನಗೆ ವಿಹಿತ ವಾದ ಕರ್ಮವನ್ನು ಮಾಡು ಮತ್ತೂ ಕರ್ಮ ಮಾಡ-ದಿರುವ ನಿನಗೆ ದೇಹ ರಕ್ಷಣೆಯು ಕೂಡ ಸಿದ್ಧಿಸುವುದಿಲ್ಲ.

ಕರ್ಮಗಳಲ್ಲಿ, ಕಾಮ್ಯಕರ್ಮ, ನಿಯತ ಕರ್ಮ ಎಂದು ಎರಡು ವಿಧ. ಕಾಮ್ಯಕರ್ಮ ಮಾಡದಿದ್ದಲ್ಲಿ ಆ ವ್ಯಕ್ತಿಗೆ ಮಾತ್ರ ನಷ್ಟ. ಒಬ್ಬ ವ್ಯಕ್ತಿ ತನ್ನ ಹಾನಿ ಮಾಡಿಕೊಳ್ಳಬಹುದೇನೋ, ಆದರೆ ಸಮಾಜಕ್ಕೆ ಹಾನಿ ಮಾಡುವ ಅಧಿಕಾರ ಅವನಿಗಿಲ್ಲ. ತಾನು ಇಂದು ಊಟ ಮಾಡುವುದಿಲ್ಲಾ ಎಂದು ಒಬ್ಬ ಗೃಹಿಣಿ ಹೇಳಬಹುದು. ಆದರೆ ತಾನು ಇಂದು ಅಡಿಗೆ ಮಾಡುವುದಿಲ್ಲ ಎಂದು ಆಕೆ ಹೇಳಲಾಗದು. ಅವಳು ಊಟ ಮಾಡದಿದ್ದರೆ ಅವಳಿಗೆ ಮಾತ್ರ ನಷ್ಟ. ಅಡಿಗೆ ಮಾಡದಿದ್ದರೆ ಎಲ್ಲರಿಗೂ ಉಪವಾಸ. ಹಾಗೆ ಕಾಮ್ಯಕರ್ಮವನ್ನು ಬಿಡಬಹುದು. ನಿಯತ ಕರ್ಮವನ್ನು ಬಿಡುವುದರಿಂದ ಸಮಾಜಕ್ಕೆ ಹಾನಿ ಎಂದು ತಿಳಿಯಬೇಕು.

ಒಬ್ಬನು ಸಮಾಜದಲ್ಲಿ ವೈದ್ಯನೋ, ವಕೀಲನೋ ಇನ್ನಾವುದೋ ತಾಂತ್ರಿಕ ಪದವೀಧರನೋ ಆಗಬೇಕಾದರೆ ಅವನು ತನ್ನ ಸುತ್ತುಮುತ್ತಲಿನ ಸಾಮೂಹಿಕ ಸಹಾಯ ಪಡೆದಿರುತ್ತಾನೆ. ಅವನ ವಿದ್ಯೆಗೆ ಕೇವಲ ಅವನ ಧನ ಮಾತ್ರ ಸಹಕಾರಿಯಾದುದಲ್ಲ. ಸರಕಾರ ತನ್ನ ಬೊಕ್ಕಸದಿಂದ ಅವನಿಗಾಗಿ ಬಹಳ ಹಣ ವೆಚ್ಚ ಮಾಡಿದೆ. ಆ ಹಣ ಸರಕಾರ ಸಮಾಜದಿಂದಲೇ ಪಡೆದಿರುತ್ತದೆ. ಆಂದಮೇಲೆ ನಾವು ಸಮಾಜದ ಹಣದಿಂದಲೇ ವಿದ್ಯಾವಂತರಾದೆವೆಂದಾಯಿತು. ಅಂಥ ಸಮಾಜದ ಋಣವನ್ನು ನೀನು ಹೇಗೆ ತೀರಿಸುತ್ತೀ ? ಆ ಜನತಾ ಜನಾರ್ಧನನ ಸೇವೆಯಿಂದಲೇ ಆ ಋಣವನ್ನು ನೀನು ತೀರಿಸಬಲ್ಲೆ. ಹಾಗೆ ಮಾನವ ಕಲ್ಯಾಣಕ್ಕಾಗಿ ನಿಷ್ಕಾಮ ಭಾವದಿಂದ ಭಗವದರ್ಪಿತ ಬುದ್ಧಿಯಿಂದ ಮಾಡುವ ಕರ್ಮವೇ "ಯೋಗ" ಎನಿಸುವುದು.

ಹೀಗೆ ಜನಸೇವೆಯನ್ನು, ಸಮಾಜ ಸೇವೆಯನ್ನು ಮಾಡುವವನು ಜನಸೇವಕ ಅಥವಾ ಸಮಾಜ ಸೇವಕ ನಾಗಬಾರದು. ಆತನು ಹರಿಸೇವಕನಾಗಬೇಕು.

'ಮಾಡಿ ಅರ್ಪಿಸಿ ಹರಿ ಚರಣಕೆ ಬಾಗು !

ಯಾವುದೇ ಕರ್ಮವಾಗಲಿ ಲೋಕೋದ್ಧಾರಕ್ಕಾಗಿ ಮಾಡುವೆನೆಂದು ಅಹಂಕಾರ ಪಡುವುದಕ್ಕಿಂತ "ಈ ಲೋಕದ ಉದ್ಧಾರ ಮಾಡಲು ನಾನ್ಯಾರು ? ದೇವರು ನನಗೆ ಈ ಲೋಕದ ಸೇವೆ ಮಾಡುವ ಅವಕಾಶ ಕೊಟ್ಟಿದ್ದಾನೆ ಅದನ್ನು ಮಾಡುತ್ತೇನೆ." ಎಂದು ತಿಳಿದು ತನ್ನಿಂದಾದ ಸೇವೆಯನ್ನು ನಿಷ್ಕಾಮ ಬುದ್ಧಿಯಿಂದ ಮಾಡಬೇಕು. ತಾನು ಮಾಡಿದ ಸೇವೆಯಿಂದ ಲೋಕದ ಉದ್ಧಾರವೆಷ್ಟಾಯಿತೆಂದು ಅಳೆಯುವುದಕ್ಕಿಂತ ಈ ಸೇವೆಯಿಂದ ನನ್ನ ಆತ್ಮೋದ್ಧಾರ ಎಷ್ಟಾಯಿತೆಂದು ತಿಳಿಯಬೇಕು. "ಆತ್ಮಾನಾಂ ಮೋಕ್ಷಾರ್ಥಂ ಜಗದ್ಧಿತಾಯಚ" ಎಂಬ ಆರ್ಯೋಕ್ತಿಯಂತೆ ತನ್ನ ಆತ್ಮೋದ್ಧಾರವಾಗಬೇಕು. ಆ ಮೂಲಕ ಜಗತ್ತಿನ ಹಿತವೂ ಆಗಬೇಕು. ಇಂತಹ ಕರ್ಮವನ್ನೇ ಭಗವತ್ ಗೀತೆ, ಕರ್ಮಯೋಗ ಎಂದು ಹೇಳುತ್ತದೆ.

ಆನೆಗೆ ಎರಡು ಜಾತಿಯ ಹಲ್ಲುಗಳು ಇರುತ್ತವೆ. ಒಂದು ಹೊರಗೆ ಕಾಣಿಸುವ ಹಲ್ಲುಗಳು (ದಂತಗಳು) ಇನ್ನೊಂದು ಒಳಗಿರುವ ತಿನ್ನುವ ಹಲ್ಲುಗಳು. ಹಾಗೇ ಜ್ಞಾನಿಗಳು ಲೋಕದ ಆದರ್ಶಕ್ಕಾಗಿ ಕೆಲವು ಕರ್ಮಗಳನ್ನು ಇತರರಿಗೆ ಕರ್ಮದಲ್ಲಿ ಅಭಿರುಚಿಯುಂಟಾಗಲೆಂದು ಮಾಡುತ್ತಿರುತ್ತಾರೆ. ಆದರೆ ಅದರಿಂದ ಅವರಿಗೆ ಆನಂದವಾಗುವುದಿಲ್ಲ. ಅವರ ಆ ಕರ್ಮಗಳು ಹೊರಗಿನ ತೋರಿಕೆಗೆ ಮಾತ್ರ. ಆನೆಗೆ ತಿನ್ನುವ ಹಲ್ಲುಗಳು ಒಳಗಿನಿಂದ ಇರುವಂತೆ ಜ್ಞಾನಿಯು ಅಂತರಂಗದಲ್ಲಿ ಸದಾ ಬ್ರಹ್ಮನ ಚಿಂತನೆಯಲ್ಲೇ ತೊಡಗಿರುತ್ತಾನೆ. ಅವನು ಮಾಡುವ ಲೋಕಸೇವೆ ಎಲ್ಲಾ ಪರಮಾತ್ಮನ ಪ್ರೀತಿಗಾಗಿ. ಈ ದೃಷ್ಟಾಂತವನ್ನು ಶ್ರೀ ರಾಮಕೃಷ್ಣ ಪರಮಹಂಸರು ಹೀಗೆ ಹೇಳುತ್ತಿದ್ದರು. ಗರಡಿ ವ್ಯಾಯಾಮ ಮಾಡಿ, ಗದೆ ಮುದ್ಗರಗಳನ್ನೆಲ್ಲಾ ಆಡಿಸಿ ಬಳಲಿದ ತರುಣನು ಬಳಿಕ ಕನ್ನಡಿಯಲ್ಲಿ ತನ್ನ ಬೆಳೆದಿರುವ ಮಾಂಸ ಖಂಡಗಳನ್ನು ಕಂಡು ಉಬ್ಬುತ್ತಾನಲ್ಲದೇ, ಆ ಗದೆ ಮುದ್ಗರಗಳು ಎಷ್ಟು ಸವೆದವು ಎಂದು ನೋಡುತ್ತಾನೆಯೇ ? ಹಾಗೆಯೇ ಲೋಕಸೇವೆ ಮಾಡುತ್ತಾ, ಮಾಡುತ್ತಾ, ನಿನ್ನ ಆತ್ಮನ ಬೆಳವಣಿಗೆ ಆದರ ಮುಕ್ತಿ ಇದನ್ನು ಕಂಡು ಹಿಗ್ಗು ಎನ್ನುತ್ತಿದ್ದರು.

ಒಮ್ಮೆ ಆಂಗ್ಲ ವಿದ್ಯಾವಿಶಾರದನಾದ ಕೇಶವ ಚಂದ್ರಸೇನ ಪರಮಹಂಸರನ್ನು ಕಂಡು 'ಭಗವಾನರೇ ! ಹೊಟ್ಟೆಗೆ ಹಿಟ್ಟಿಲ್ಲದೇ ಬಳಲುವ ಸಹಸ್ರಾರು ಬಡವರಿದ್ದಾರೆ. ಅನಕ್ಷರಸ್ಥರಿದ್ದಾರೆ. ಹಳ್ಳಿಗಳಲ್ಲಿ ಶಾಲಾ ಕಾಲೇಜುಗಳಿಲ್ಲಾ, ಕುಡಿಯುವ ನೀರಿನ ಭಾವಿಗಳಿಲ್ಲಾ, ಆಸ್ಪತ್ರೆಗಳಿಲ್ಲಾ, ಇಂತಹ ಲೋಕೋದ್ಧಾರ ಸಮಾಜ ಸೇವೆಯ ಕರ್ಮಗಳು ಅಸಂಖ್ಯ ಮಾಡಬೇಕಾದ ಅಗತ್ಯವಿರುವಾಗ, ನೀವು ಧ್ಯಾನ, ಸಮಾಧಿ, ಭಾವ, ಭಕ್ತಿ, ಎಂದು ಕಾಲ ಕಳೆದರೆ ಹೇಗೆ ?' ಎಂದು ಕೇಳುತ್ತಾನೆ.

ಆಗ ಪರಮಹಂಸರು ನಗುತ್ತಾ, 'ಅಲ್ಪ ಸ್ವಲ್ಪ ಇಂಗ್ಲೀಷ ಕಲಿತವರ ನಿಮ್ಮ ಬುದ್ಧಿಯೇ ಹೀಗೆ ! ಈ ಲೋಕದ ಉದ್ಧಾರ ಮಾಡಲು ನೀನ್ಯಾರೊ ? ಮೊದಲು ನಿನ್ನ ಉದ್ಧಾರವಾಯ್ತೋ ನೋಡಿಕೋ ! ಆ ಮೇಲೆ ಲೋಕದ ಉದ್ಧಾರ. ನಿನಗೆ ಧ್ಯಾನ ಮಾಡಿ ಮಾಡಿ ದೇವರು ಸಿಕ್ಕಿದಾ ಎನ್ನೋಣ. ಆ ದೇವರಲ್ಲಿ ಏನು ಕೇಳುತ್ತಿ ? ಆಸ್ಪತ್ರೆ, ಶಾಲೆ, ಅನಾಥಾಲಯ, ಛತ್ರ ಕಟ್ಟಿಸಿಕೊಡು ಎಂದು ಕೇಳುತ್ತೀಯಾ ? ನಿನಗೆ ದೇವರು ಅನುಕೂಲ ಮಾಡಿದ್ದಲ್ಲಿ ಅವನ ಸೇವೆ ಎಂದು ಲೋಕದ ಸೇವೆ ಮಾಡು. ಲೋಕದ ಉದ್ಧಾರ ಮಾಡಲು ನೀನ್ಯಾರು ?' ಎಂದು ಉತ್ತರ ಕೊಟ್ಟರಂತೆ.

ಹೀಗೆ ತನ್ನ ಪಾಲಿನ ಕರ್ತವ್ಯವನ್ನು ಭಗವದರ್ಪಿತ ಬುದ್ಧಿಯಿಂದ ಮಾಡುವುದೇ ಗೀತೆ ಹೇಳುವ ನಿಷ್ಕಾಮ ಕರ್ಮಯೋಗ.

ನಿಷ್ಕಾಮವೇ ವೈರಾಗ್ಯ ಹೊರತು ನಿಷ್ಕ್ರಿಯವು ವೈರಾಗ್ಯವಲ್ಲ. ಆದ್ದರಿಂದ,

ಗೀತೆಯು :–

'ಯಜ್ಞಾರ್ಥಾತ್ ಕರ್ಮಣೋsನ್ಯತ್ರ ಲೋಕೋಽಯಂ ಕರ್ಮ ಬಂಧನಃ । ತದರ್ಥಂ ಕರ್ಮ ಕೌಂತೇಯ ಮುಕ್ತ ಸಂಗಃ ಸಮಾಚರ ॥ (ಗೀತೆ ೩, ಶ್ಲೋ ೯)

ಎಲೈ ಅರ್ಜುನನೇ ! ಯಾವ ಕಾರಣದಿಂದ ಯಜ್ಞನಾಮಕ ಪರಮಾತ್ಮನೇ ಉದ್ದೇಶ್ಯವಾಗುಳ್ಳ ಕರ್ಮಕ್ಕಿಂತಲೂ ಅನ್ಯ (ಕಾಮ್ಯ) ಕರ್ಮಗಳಲ್ಲಿ ಪ್ರವೃತ್ತನಾದ ಈ ಮನುಷ್ಯನು ಕರ್ಮವನ್ನು ಬಂಧಕವಾಗಿ ಉಳ್ಳವನಾಗುತ್ತಾನೆಯೋ ಆ ಕಾರಣದಿಂದ ಫಲೇಚ್ಛಾ ರಹಿತ

ನಾಗಿ ಆ ಪರಮಾತ್ಮ ಉದ್ದೇಶವಾಗಿ ವಿಹಿತವಾದ ಕರ್ಮವನ್ನು ಮಾಡು.

'ಹರಿಗರ್ಪಿಸದೇ ಅವಕರ್ಮವ ಮಾಡಿದರೂ ಹುರಿದು ಬಿತ್ತಿದ ಬೀಜ । ನೀರೊಳು ಹೋಮ ಮಾಡಿದ ತೆರನಂತೆ ॥

—ಶ್ರೀ ಗೋಪಾಲದಾಸರು

ಇದನ್ನು ಭಾಗವತವು—

'ನೈಷ್ಕರ್ಮ್ಯ ಮಪ್ಯಚ್ಯುತ ಭಾವವರ್ಜಿತಂ'

ನಿಷ್ಕಾಮ ಕರ್ಮವು ಭಗವದರ್ಪಿತ ಬುದ್ಧಿಯಿಂದ ಮಾಡಿಲ್ಲವಾದರೆ ಅದು ಅಹಂಕಾರಕ್ಕೆ ಕಾರಣವಾಗ ಬಹುದು.

ಈ ದೃಷ್ಟಾಂತದಿಂದ ಮನಗಾಣಬಹುದು.

ಛತ್ರಪತಿ ಶಿವಾಜಿ ಮಹಾರಾಜನು ಒಮ್ಮೆ ಒಂದು ಕೋಟೆ ಕಟ್ಟಿಸುತ್ತಿದ್ದನು. ನಿತ್ಯವೂ ಐದಾರು ಸಹಸ್ರ ಮಂದಿ ಕೆಲಸಗಾರರು ಹಗಲೂ ರಾತ್ರಿ ದುಡಿಯು-ತ್ತಿದ್ದರು. ಒಮ್ಮೆ ಛತ್ರಪತಿ ಕೋಟೆಯ ಕೆಲಸದ ಪ್ರಗತಿಯನ್ನು ಕಣ್ಣಾರೆ ನೋಡಲು ತಾನೇ ಬಂದು ಈಕ್ಷಿಸಿದ. ಮಹಾರಾಜನಿಗೆ ಒಳಗೊಳಗೇ ಅಹಂತೆಯ ಕಾರಂಜಿ ಪುಟಿಯಿತು. ನಾನು ಈ ಸಹಸ್ರಾರು ಮಂದಿಗೆ ಅನ್ನ ಕೊಡುವವ. ನಾನು ಕೋಟೆ ಕಟ್ಟಿಸದಿದ್ದರೆ ಇವರಿಷ್ಟು ಮಂದಿಯ ಗತಿ ಏನಾಗುತ್ತಿತ್ತು ?

ಆಗಲೇ ಛತ್ರಪತಿಯ ಕಣ್ಮುಂದೆ ಆವರ ಗುರು ಸಮರ್ಥ ರಾಮದಾಸರು ಕಾಣಿಸಿಕೊಂಡರು. ಗುರುವಿಗೆ ನಮಸ್ಕಾರ ಮಾಡಿದ ಶಿವಾಜಿಯು, "ಗುರುಗಳೇ ! ಈ ಕೋಟೆ ಕಟ್ಟಿಸುವ ನಿಮಿತ್ತದಿಂದ ಈ ಐದಾರು ಸಹಸ್ರ ಮಂದಿಗೆ ನನ್ನಿಂದ ಅನ್ನ ಸಿಗುವಂತಾಯಿತು. ಪಾಪ ಬಡಪಾಯಿಗಳು !" ಸಮರ್ಥರು ಕಣ್ಣರಳಿಸಿ, "ಶಿವರಾಯಾ ! ಬಹಳ ದೊಡ್ಡ ಕೆಲಸ ಮಾಡುತ್ತಿರುವಿ. ಆಹಾ ! ನೀನೆಂಥಾ ಉದಾರಿ !"ಎನ್ನುತ್ತಾ ಸನಿಹದಲ್ಲಿ ಇದ್ದ ಒಂದು ಬಂಡೆಯನ್ನು ಒಡೆಸುವಂತೆ ಶಿವಾಜಿಗೆ ಹೇಳಿದರು. ಶಿವಾಜಿಯು ಓರ್ವ ಕೆಲಸಗಾರನಿಂದ ಕಲ್ಲು ಬಂಡೆ ಒಡೆಸಲು ಆ ಕಲ್ಲಿನೊಳಗೆ ಒಂದು ಕಪ್ಪೆ ಇದು ಅದರೊಳಗೆ ಸ್ವಲ್ಪ ನೀರೂ ಇದೆ. ಇದನ್ನು ಕಂಡ ಸಮರ್ಥರು 'ಅಹಾ ! ಶಿವಾಜಿ !! ನೀನು ಎಂತಹ ಉದಾರಿ ಈ ಐದಾರು ಸಹಸ್ರ ಜನರಿಗೆ ಅನ್ನ ಕೊಡು ವುದು ಮಾತ್ರವಲ್ಲ, ಈ ಕಲ್ಲಿನೊಳಗಿರುವ ಕಪ್ಪೆಗಳಿಗೂ ನಿತ್ಯ ನೀರನ್ನು ಒದಗಿಸುತ್ತಿರುವೆಯಲ್ಲಾ !' ಇದನ್ನು ಕೇಳಿದ ಶಿವಾಜಿಯು ನಾಚಿ, 'ಗುರುಗಳೇ ಇದನ್ನು ಭಗವಂತನೇ ವ್ಯವಸ್ಥೆಗೊಳಿಸಿದ್ದಾನೆ. ಇದರಲ್ಲಿ ನನ್ನ ಔದಾರ್ಯವೇನಿದೆ ?' ಎಂದನು. ಆಗ ಸಮರ್ಥರು, ಶಿವಾಜಿಯ ಬಳಿಗೆ ಬಂದು 'ಶಿವಾಜಿ ! ಕಲ್ಲಿನೊಳಗಿರುವ ಕಪ್ಪೆಗೆ ಅಲ್ಲೇ ನೀರು ಕೊಟ್ಟು ಸಲಹುವ ಭಗವಂತನು ಈ ಐದಾರು ಸಹಸ್ರ ಜನರಿಗೆ ಅನ್ನ ನೀರು ಕೊಡು ಎಂದು ನಿನಗೇನಾದರೂ ಕಾಗದ ಬರೆದನೊ ? ಏಕೆ ವೃಥಾ ಅಹಂಕಾರ ಪಡುವೆ ? ನಿನ್ನ ಪಾಲಿನ ಕರ್ತವ್ಯ ನಡೆಸಿ ಅದನ್ನು ಭಗವಂತನಿಗೆ ಅರ್ಪಿಸಿ, ನಿಷ್ಕಾಮನಾಗು. ನಿಷ್ಕಾಮ ಕರ್ಮದಲ್ಲಿ ಅಹಂಕಾರ ಬರಬಾರದು.'

ಇದೇ "ಮಾಡಿ ಹರಿಗರ್ಪಿಸಿ ಚರಣಕೆ ಬಾಗು" ಎಂಬುದರ ಅರ್ಥ.

ಎರಡನೆಯ ಚರಣದಲ್ಲಿ ಜ್ಞಾನಿಯ ಕರ್ಮ ಹಾಗೂ ಕರ್ಮಯೋಗಿಯ ಜ್ಞಾನ—ಇವು ಹೇಳಲ್ಪಟ್ಟಿವೆ.

ರೂಢಿಯೊಳುತ್ತಮ ಕರ್ಮಕೆ ಫಲವು ।
ಕಾಡೊಳಗಿದ್ದರೂ ಪಡೆವೆ ನಿಶ್ಚಯವು ॥ ೧ ॥

ಕರ್ಮ ಸಿದ್ಧಾಂತವು ಗಹನವಾದುದು.

ನಾವು ಮಾಡುವ ಯಾವುದೇ ಶುಭಾಶುಭ ಕರ್ಮಗಳ ಪರಿಣಾಮವನ್ನು ತಡೆಯುವುದು ಸಾಧ್ಯವಿಲ್ಲಾ. ಅವುಗಳ ಸಂಸ್ಕಾರ ನಮ್ಮದಾಗುವುದು ನಿಶ್ಚಯ.

ನಾವು ಒಂದು ಕೆಲಸ ಮಾಡಿ ಜನರ ಕಣ್ಣು ತಪ್ಪಿಸಬಹುದು. ಕಾನೂನಿನ ಕಣ್ಣಿಗೆ ಮಣ್ಣೆರಚ ಬಹುದು. ಆದರೆ ನಾವು ಮಾಡಿರುವ ಕರ್ಮದ ಸೂಕ್ಷ್ಮ ಪರಿಣಾಮ ನಮ್ಮ ಮೇಲೆ ಆಗಿಯೇ ಆಗುವುದು.

ಇದೇ ಗಾದೆಯು ಮಾತಾಗಿ ನಮ್ಮಲ್ಲಿ ಉಳಿದಿದೆ.

"ಮಾಡಿದ್ದುಣ್ಣೋ ಮಹಾರಾಯ"

ಸಾವಿರಾರು ಹಸುಗಳನ್ನು ಒಂದೆಡೆ ಕೂಡಿಸಿ ಅವುಗಳ ಸಾವಿರಾರು ಕರುಗಳನ್ನು ಬಿಟ್ಟರೂ ಅವುಗಳು ತಮ್ಮ ತಮ್ಮ ತಾಯಿ ಹಸುವಿನ ಬಳಿಗೇ ಓಡಿ ಬರುವಂತೆ ನಮ್ಮ ಕರ್ಮದ ಸಂಸ್ಕಾರಗಳು ಜನ್ಮಾಂತರ ದಲ್ಲಿ ನಮ್ಮನ್ನು ಬೆನ್ನಟ್ಟುವವು ಎಂದು ಜ್ಞಾನಿಗಳು ಹೇಳುತ್ತಾರೆ.

ತನ್ನ ಪಾಲಿನ ಕರ್ತವ್ಯವನ್ನು ಉತ್ತಮವಾಗಿ ನಿರ್ವಹಿಸಿದವನಿಗೆ ಹಕ್ಕು ತಾನಾಗಿ, ಅವನನ್ನು ಹುಡುಕಿ ಕೊಂಡು ಬರುವುದು. ಯಾವುದೇ ಕರ್ಮವು ಈಶ್ವರಾ ರಾಧನವೆಂದು ಮಾಡಿದ್ದಲ್ಲಿ ಅದು ಶುದ್ಧವಾಗುವುದು.

ಗೀತೆಯು ನಮಗೆ ಬಯಕೆಗಳನ್ನು ಈಡೇರಿಸಿಕೊಳ್ಳ ಬೇಡಾ ಎಂದು ಹೇಳುವುದಿಲ್ಲ. ಅದನ್ನು ಶುದ್ಧ ಮಾಡಿ ಭೋಗಿಸು ಎನ್ನುತ್ತದೆ. ನಾವು ಮಾಡುವ ಕಾಯಕ, ವಾಚಕ, ಮಾನಸಿಕ ಕರ್ಮಗಳಿಗೆ ಅದರ ಫಲರೂಪಿಯಾದ ಪರಿಣಾಮ ಇದ್ದೇ ಇದೆ. ಅದು ಧನರೂಪದಲ್ಲೋ ಕೀರ್ತಿರೂಪದಲ್ಲೋ ನಮಗೆ ದೊರಕಿಯೇ ದೊರಕುವುದು.

ಕರ್ಮದ ಗತಿಯು ಬಹಳ ಗಹನವಾದುದೆಂದು ಗೀತೆಯ ಉಕ್ತಿಯಿದೆ.

[ಗಹನಾ ಕರ್ಮಣೋಗತಿಃ]

ಉತ್ತಮ ಕರ್ಮಗಳನ್ನು ಮಾಡಿದವನಿಗೆ ಅದರ ಫಲರೂಪವಾಗಿ ಎಂದೂ ಕೆಟ್ಟ ಫಲ ದೊರಕುವುದಿಲ್ಲ.

"ನಹಿ ಕಲ್ಯಾಣ ಕೃತ ಕಶ್ಚಿತ್ ದುರ್ಗತಿಂ
ತಾತ ಗಚ್ಛತಿ" [ಗೀತೆ]

ಶುಭ ಕರ್ಮಗಳನ್ನು ಮಾಡಿದವನೆಂದೂ ದುರ್ಗತಿಯನ್ನು ಹೊಂದುವುದಿಲ್ಲಾ ಎಂದು ಗೀತೆಯು ಘಂಟಾ ಘೋಷವಾಗಿ ಹೇಳಿದೆ. ನಾವು ಮಾಡುವ ಸತ್ಕರ್ಮಗಳ ಫಲವು ನಮ್ಮನ್ನು ಅಪಾಯಗಳಿಂದ ಕಾಪಾಡುವ ವಜ್ರ ಪಂಜರವಾಗಬಹುದು. ಈ ಕುರಿತು ಭಾರತದ ಒಂದು ಉದಾಹರಣೆ ನೋಡಿರಿ.

ಒಮ್ಮೆ ನಾರದರು ಶ್ರೀ ಕೃಷ್ಣನನ್ನು ಪ್ರಶ್ನಿಸಿದರು:
"ಓ ದೇವ ದೇವ ! ಸುಭದ್ರೆಯು ನಿನಗೆ ಹತ್ತಿರದ ತಂಗಿಯಾದರೂ ಅವಳಿಗೆ "ಕೃಷ್ಣೆ" ಎಂದು ಹೆಸರಿಸದೆ ಆ ದ್ರೌಪದಿಯನ್ನು ಮಾತ್ರ "ಕೃಷ್ಣೆ" ಎಂದು ಜನರು ಕರೆಯುವರಲ್ಲಾ !" ಎಂದು ಕೇಳಲು, ಶ್ರೀ ಕೃಷ್ಣ ಪರಮಾತ್ಮನು "ನಾರದ, ಈ ಹೆಸರು ಅವರು ನನ್ನ ಮೇಲೆ ಇಟ್ಟ ಪ್ರೇಮ ಭಕ್ತಿಗನುಗುಣವಾಗಿ ಬಂದಿದೆ. ನೀನು ಅದನ್ನು ಪರೀಕ್ಷಿಸಬಹುದು" ಎಂದನು.

ನಾರದರು, ಸುಭದ್ರೆ – ಪಾಂಚಾಲಿಯರಿದ್ದಲ್ಲಿಗೆ ಬಂದು ಮೊದಲು ಸುಭದ್ರೆಯನ್ನು ಕಂಡು, ಗಾಬರಿ ಗೊಂಡವರಂತೆ ನಟಿಸಿ, "ಅಮ್ಮ, ಸುಭದ್ರಾ ! ಶ್ರೀ ಕೃಷ್ಣನ ಕೈಯ ಬೆರಳಿಗೆ ಗಾಯವಾಗಿ ರಕ್ತ ಸುರಿಯುತ್ತಿದೆ. ಅದಕ್ಕೆ ಕಟ್ಟಲು ಒಂದು ವಸ್ತ್ರದ ತುಂಡು ಬೇಕಾಗಿದೆ" ಎನಲು, ಸುಭದ್ರೆಯು," ಅಯ್ಯೋ! ಗಾಯವಾಗಿದೆಯೇ! ಹೇಗಾಯಿತಂ? ರಕ್ತ ಸೋರುತ್ತಿದೆಯೇ ? ರಾಮ, ರಾಮ ! ವಸ್ತ್ರದ ತುಂಡು ಎಲ್ಲಿಂದ ತರಲಿ ? ಒಂದು ಹಳೆಯ ಬಟ್ಟೆಯ ಚೂರೇ ಸಿಗಲೊಲ್ಲದು. ನೋಡುವೆ" ನೆಂದು ಹುಡುಕಲಾರಂಭಿಸಿದಳು.

ಆಗಲೇ ಅಲ್ಲಿಗಾಗಮಿಸಿದ, ದ್ರೌಪದಿಯು, ನಾರದರನ್ನು ವಿಷಯವೇನೆಂದು ಕೇಳಲು, "ಅಮ್ಮ ! ದ್ರೌಪದಿ! ಶ್ರೀ ಕೃಷ್ಣ ಪರಮಾತ್ಮನ ಕೈಯ ಬೆರಳಿಗೆ ಗಾಯವಾಗಿದೆ. ಒಂದು ಚೂರು ಬಟ್ಟೆ ಬೇಕಾಗಿದೆ." ಎನಲು ದ್ರೌಪದಿಯು, "ಅಯ್ಯೋ ! ಗಾಯವೇ? ನಾರದರೇ, ಇದೋ ತೆಗೆದು ಕೊಳ್ಳಿ"ಎನ್ನುತ್ತಾ ತನ್ನ ಅಮೂಲ್ಯವಾದ ಉಟ್ಟ ಸೀರೆಯಂ ಸೆರಗನ್ನು ಹರಿದು ನಾರದರ ಕೈಗೆ ಇತ್ತಳು. ದ್ರೌಪದಿಯು ತನಗೆ ಗಾಯವಾದರೆ ಎಷ್ಟು ನೋವನ್ನು ತಾನಂ ಅನುಭವಿಸುತ್ತಿದ್ದಳೋ ಹಾಗೇ ಚಡಪಡಿಸಿದಳು. ಸುಭದ್ರೆಗೆ ತನ್ನ ಅಣ್ಣನಲ್ಲಿ ಪ್ರೀತಿಯಿದ್ದರೂ, ಸೀರೆ ಹರಿಯಲು ಸಿದ್ಧಳಿಲ್ಲದೇ ಹಳೇ ಬಟ್ಟೆ ಹುಡುಕುತ್ತಿದ್ದಳಂ.

ಕೃಷ್ಣನಲ್ಲಿ ಯಾರಿಗೆ ಹೆಚ್ಚು ಪ್ರೀತಿಯೋ' ಅವರೇ "ಕೃಷ್ಣೆ" ಯರು ಎಂಬುದರ ಅರ್ಥ ನಾರದರಿಗೆ ಆಯಿತಂತೆ. ದ್ರೌಪದಿಯ ಈ ವಸ್ತ್ರದಾನದ ಫಲ ಆಕೆಗೆ ಮುಂದೆ ದುಶ್ಶಾಸನನು ಮಾನಹಾನಿ ಮಾಡಲೆಳಸಿದಾಗ, ಶ್ರೀ ಕೃಷ್ಣ ಪರಮಾತ್ಮನನ್ನು ಆಕೆ ಮೊರೆಯಿಡಲು ಆಕೆ ತನಗಿತ್ತ ವಸ್ತ್ರದ ಋಣ ತೀರಿಸಿದನೋ ಎಂಬಂತೆ ಪರಮಾತ್ಮನು ಆಕೆಯ ವಸನವನ್ನು ಅಕ್ಷಯವಾಗಿಸಿದ.

ತಾತ್ಪರ್ಯ :– ಭಗವದರ್ಪಿತ ಬುದ್ಧಿಯಿಂದ ಮಾಡಿದ ಯಾವುದೇ ಶುಭಕರ್ಮಗಳಿಗೆ ಅನಂತವಾದ ಫಲ ದೊರಕಿಯೇ ತೀರುವುದು. ಯಾವ ಒಂದು ಕರ್ಮವೂ ವ್ಯರ್ಥವಾಗುವುದಿಲ್ಲ.

ಇದನ್ನೇ —

"ರೂಢಿಯೊಳುತ್ತಮ ಕರ್ಮಕೆ ಫಲವು,
ಕಾಡೊಳಗಿದ್ದರೂ ಪಡೆವೆ ನಿಶ್ಚಯವು"

ಎಂದಿದ್ದಾರೆ.

ಶುಭಕರ್ಮಗಳಿಗೆ ಹೇಗೆ ಶುಭ ಫಲವು ಇರುವುದೋ, ಪಾಪ ಕರ್ಮಗಳಿಗೂ ಅದರ ಫಲವನ್ನು ಅನುಭವಿಸುವುದು ಅನಿವಾರ್ಯವಾಗುತ್ತದೆ.

ಹೀಗೆ ಶುಭಾಶುಭ ಕರ್ಮಗಳು ಮನುಷ್ಯನಿಂದ ನಡೆಯುತ್ತಲೇ ಇರುತ್ತವೆ. ಸರಿ ! ಹಾಗಾದರೆ ಶುಭವೂ ಬೇಡ ! ನಾನು ಕರ್ಮವನ್ನೇ ಮಾಡುವದಿಲ್ಲ ಎನ್ನುವುದೂ ಸಾಧ್ಯವಿಲ್ಲ. ನೀನು ಏನು ಮಾಡುವುದಿಲ್ಲ ಎನ್ನುವ ಅಧಿಕಾರ ನಿನಗಿಲ್ಲ. ನೀನು ಪ್ರಕೃತಿಯಿಂದ– ಪ್ರಕೃತಿ ನಿನ್ನ ಕತ್ತು ಹಿಡಿದು ನಿನ್ನಿಂದ ಕರ್ಮ ಮಾಡಿಸುತ್ತದೆ.

"ನಹಿ ಕಶ್ಚಿತ್ ಕ್ಷಣಮಪಿ ಜಾತುಽತಿಷ್ಠತ್ಯ ಕರ್ಮಕೃತ್ ॥ ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿ ಜೈರ್ಗುಣೈಃ ॥"

[ಗೀತೆ]

ಯಾರೂ ಒಂದು ಕ್ಷಣವೂ ಕರ್ಮ ಮಾಡದೇ ಇರುವುದು ಸಾಧ್ಯವಿಲ್ಲಾ. ಮನುಷ್ಯ ಪ್ರಕೃತಿ ಗುಣಗಳಿಗೆ ವಶನಾಗಿ ಕರ್ಮ ಮಾಡಿಯೇ ತೀರುತ್ತಾನೆ. ಅಂದರೆ ಪ್ರಕೃತಿ ಮಾಡಿಸುತ್ತದೆ.

ಆದರೆ ಶುಭಾ ಶುಭ ಕರ್ಮಗಳನ್ನು ಇರಿಸುವ ಅಧಿಕಾರ ವಿವೇಕಿಯಾದ ಮನುಷ್ಯನಿಗಿರುತ್ತದೆ. ಅಂದರೆ ಕರ್ಮಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲಾ. ಒಂದೆಡೆ ನಾವು ತಪ್ಪಿಸಿಕೊಂಡರೆ, ಪ್ರಕೃತಿ ಇನ್ನೊಂದೆಡೆ ನಮ್ಮನ್ನು ಬಂಧಿಸುತ್ತದೆ.

ಒಂದು ದೃಷ್ಟಾಂತ ನೋಡಿ.

ಒಬ್ಬ ತಪ್ಪು ಮಾಡುವ ಗೊಲ್ಲನು ಹಾಳಾದ ಹೊಲಸು ತುಪ್ಪವನ್ನು ಮಾರಿ ಹಣಗಳಿಸುತ್ತಿದ್ದ. ಆರೋಗ್ಯ ಇಲಾಖೆಯವರು ಅವನನ್ನು ಬಂಧಿಸಿ ಅವನು ಮಾರುತ್ತಿದ್ದ ಹೊಲಸು ತುಪ್ಪದ ಸಹಿತ ಅವನನ್ನು ನ್ಯಾಯಾಲಯಕ್ಕೆ ಎಳೆದೊಯ್ದರು. ನ್ಯಾಯಾಲಯದಲ್ಲಿ ನ್ಯಾಯಾಧೀಶರು ಆ ತುಪ್ಪದ ವ್ಯಾಪಾರಿಗೆ ಶಿಕ್ಷೆ ವಿಧಿಸುತ್ತಾ ಹೇಳಿದರು. "ನೋಡಪ್ಪಾ! ಅಪರಾಧಿಯಾದ ನಿನಗೆ ಮೂರು ವಿಧದ ಶಿಕ್ಷೆ ಹೇಳುತ್ತೇನೆ. ಇದರಲ್ಲಿ ಯಾವುದಾದರೊಂದನ್ನು ಆರಿಸಿಕೋ ಮತ್ತು ಅನುಭವಿಸು, ಮೊದಲನೆಯ ಶಿಕ್ಷೆ ಎಂದರೆ ನೀನು ಯಾವ ಹೊಲಸು ತುಪ್ಪವನ್ನು ಮಾರುತ್ತಿದ್ದೆಯೋ ಅದರ ಅರ್ಧ ಭಾಗವನ್ನು ಇಲ್ಲೆ ನ್ಯಾಯಾಲಯದಲ್ಲಿ ನಮ್ಮೆದುರಿಗೇ ಕುಡಿಯಬೇಕು. ಅದಲ್ಲವಾದರೆ ನೂರು ಚಡಿಯೇಟು ತಿನ್ನಬೇಕು. ಅದೂ ಸಮ್ಮತವಿಲ್ಲವಾದರೆ ನೂರು ರೂಪಾಯಿ ದಂಡ ತೆರಬೇಕು. ಅಂತೂ ಶಿಕ್ಷೆ ಅನುಭವಿಸಲೇ ಬೇಕು. ಬೇಕಾದ್ದನ್ನು ಆರಿಸಿಕೊಳ್ಳುವ ಅಧಿಕಾರ ನಿನಗೇ ಕೊಟ್ಟಿದ್ದೇನೆ." ಎಂದು ನ್ಯಾಯಾಧೀಶರು ಸುಮ್ಮನಾದರು.

ಆಗ ತುಪ್ಪದ ವ್ಯಾಪಾರಿಯು, "ನಾನು ಪೆಟ್ಟು ತಿನ್ನಲಾರೆ, ನೂರು ರೂಪಾಯಿಯನ್ನೂ ಕೊಡಲಾರೆ ನನ್ನ ತುಪ್ಪ ನಾನೇ ಕುಡಿವೆ"ನೆಂಬುದಾಗಿ ನ್ಯಾಯಾಲಯದ ಮುಂದೆ ಆ ಹೊಲಸು ತುಪ್ಪವನ್ನು ಕುಡಿಯಲು ಮುಂದಾದನು. ಒಂದು ಗುಟುಕು ಕುಡಿಯುವಷ್ಟರಲ್ಲಿ ಹೊಟ್ಟೆ ತೊಳೆಸಿ ವಾಂತಿ ಬರಲಾರಂಭಿಸಿತು. ವ್ಯಾಪಾರಿಯು, "ಅಯ್ಯೋ ! ಇದನ್ನು ಕುಡಿಯಲಾರೆ, ಛಡಿ ಯೇಟುಗಳನ್ನು ತಿನ್ನುವೆನೆಂದ," ನ್ಯಾಯಾಧೀಶರು "ಸರಿ !" ಎಂದು ಅಧಿಕಾರಿಗಳಿಗೆ ಆಜ್ಞೆ ಕೊಡಲು, ಅವರು ಬೆತ್ತದಿಂದ ಹೊಡೆಯಲಾರಂಭಿಸಿದರು. ಹತ್ತು ಏಟು ಬೀಳುವಾಗ ವ್ಯಾಪಾರಿಯು, "ಅಯ್ಯಯ್ಯೋ ! ದಮ್ಮಯ್ಯ ! ನಾನು ಪೆಟ್ಟು ತಿನ್ನಲಾರೆ ನೂರು ರೂಪಾಯಿ ದಂಡ ತೆರುವೆ" ನೆಂದು ನೂರು ರೂಪಾಯಿ ಕೊಟ್ಟು ಬಿಡಿಸಿಕೊಂಡ. ಮೊದಲೇ ನೂರು ರೂಪಾಯಿ ಕೊಟ್ಟಿದ್ದರೆ ಪೆಟ್ಟು ತಿನ್ನುವುದೂ, ತುಪ್ಪ ಕುಡಿಯುವುದೂ ತಪ್ಪುತ್ತಿತ್ತು.

ಬಹಳ ಬುದ್ಧಿವಂತನಾಗುವೆನೆಂದು ಹೋಗಿ ಈಗ ತುಪ್ಪ ಕುಡಿದ, ಪೆಟ್ಟು ತಿಂದ, ನೂರು ರೂಪಾಯಿ ದಂಡವಾಗಿ ತೆತ್ತ.

ತಾತ್ಪರ್ಯವೇನೆಂದರೆ, ಒಂದು ಕರ್ಮ ಮಾಡುವುದಿಲ್ಲಾ ಎಂದರೆ ಮತ್ತೊಂದು ಕರ್ಮದ ದ್ವಾರಾ ಪ್ರಕೃತಿ ನಮ್ಮನ್ನು ಬಂಧಿಸುತ್ತದೆ. ಆದ್ದರಿಂದ ತನ್ನ ಪಾಲಿನ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಿ ಹರಿಗರ್ಪಿಸಿದರೆ, ಅದೇ ಉತ್ತಮ ಕರ್ಮವೆನಿಸುತ್ತದೆ.

"ರೂಢಿಯೊಳುತ್ತಮ ಕರ್ಮಕೆ ಫಲವು
ಕಾಡೊಳಗಿದ್ದರೂ ಪಡೆವೆ ನಿಶ್ಚಯವು ॥

ಭಗವದರ್ಪಿತ ಬುದ್ಧಿಯಿಂದ ಮಾಡುವ ಕರ್ಮಗಳೇ ಉತ್ತಮ ಕರ್ಮಗಳೆನಿಸುವುವು. ಶ್ರೀಮನ್ಮಧ್ವಾಚಾರ್ಯರು ಹೀಗೆ ಅಪ್ಪಣೆಕೊಡುತ್ತಾರೆ.

"ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದವಿನಮ್ರಧಿಯಾ ಸತತಮ್ ॥"

(ದ್ವಾದಶ ಸ್ತೋತ್ರ)

ವಿಹಿತ ಕರ್ಮಗಳನ್ನು ಭಗವದರ್ಪಿತ ಬುದ್ಧಿಯಿಂದ ಮಾಡಿ ತತ್ಫಲವನ್ನು ಹರಿಪ್ರಸಾದವೆಂದು ತಿಳಿದು ವಿನಮ್ರನಾಗಿ ಭೋಗಿಸು.

ತನ್ನ ದೈನಂದಿನ ವೃತ್ತಿಯನ್ನು ಭಗವಂತನ ಪೂಜೆ, ಸೇವೆಯಾಗಿಸುವ ಕರ್ಮವಿಧಾನವನ್ನು–
ಶ್ರೀ ಪುರಂದರದಾಸರು—

ಸಕಲವೆಲ್ಲವು ಹರಿ ಸೇವೆಯೆನ್ನಿ । ರುಕುಮಿಣಿಯ ರಮಣ ವಿಠಲನಲ್ಲದಿಲ್ಲವೆನ್ನಿ ॥ಪ॥

ನುಡಿಗಳೆಲ್ಲವು ನಾರಾಯಣನ ಕೀರ್ತನೆಯೆನ್ನಿ । ಕೊಡುವುದೆಲ್ಲವೂ ಕಾಮಜನಕಗರ್ಪಿತವೆನ್ನಿ ॥ ಎಡೆಯ ಅನ್ನವು ಶ್ರೀಹರಿಯ ಪ್ರಸಾದವೆನ್ನಿ ॥೧॥

ಹೊಸ ವಸ್ತ್ರ ಉಡುವಲ್ಲಿ ಹರಿಯ ಬೆಳ್ಪುಡೆಯೆನ್ನಿ। ಕುಸುಮ ಪರಿಮಳವು ಕಂಜನಾಭಗೆನ್ನಿ॥ಎಸೆವಾಭರಣವು ಯಶೋದಾನಂದನನಿಗೆನ್ನಿ । ಶಶಿಮುಖಿ ಕೂಟ ಸೊಬಗು ಗೋವಳಗೆನ್ನಿ ॥೨॥

ಆಟ ಪಾಟಗಳಲ್ಲಿ ಅಂತರ್ಯಾಮಿಗೆಯೆನ್ನಿ । ನೋಟಬೇಟೆಗಳೆಲ್ಲ ನಾಟಕಧಾರಿಗೆನ್ನಿ ॥ ನೀಟಾದ ವಸ್ತುಗಳೆಲ್ಲ ಕೈಟಭಮರ್ದನಗೆನ್ನಿ । ಕೋಟಲೆ ಸಂಸಾರ ಕಪಟ ನಾಟಕಗೆನ್ನಿ ॥೩॥

ನಿದ್ರೆ ಜಾಗರವು ಸಮುದ್ರ ಶಯನನಿಗೆನ್ನಿ । ಭದ್ರ ಗಜನಿಧಿವರದಗೆನ್ನಿ ॥ ರೌದ್ರ ದಾರಿದ್ರ್ಯವು ರಾಘವನ ಮಾಯೆಯೆನ್ನಿ । ಶ್ರೀಮುದ್ರೆ ಧರಿಸಿದವ ಹರಿ ದಾಸನೆನ್ನಿ ॥೪॥

ಅಣುರೇಣು ತೃಣಕಾಷ್ಠ ಪರಿಪೂರ್ಣನೆಹುದೆನ್ನಿ । ಎಣಿಸಬಾರದನಂತ ಮಹಿಮನೆನ್ನಿ ॥ ಸೆಣಸುವ ರಕ್ಕಸರ ಶಿರವ ಚೆಂಡಾಡುವ । ಪ್ರಣವ ಗೋಚರ ಶ್ರೀ ಪುರಂದರ ವಿಠಲರಾಯನೆನ್ನಿ ॥೫॥

ಆದರೆ ನಾವಿಂದು ಕರ್ತವ್ಯವನ್ನು ಭಗವದರ್ಪಿತ ಬುದ್ಧಿಯಿಂದ ಮಾಡದೇ ದಿನಬೆಳಗಾದರೆ ಹಕ್ಕುಗಳಿಗಾಗಿ ಹೋರಾಡುತ್ತಿರುತ್ತೇವೆ. ಯಾರು ತನ್ನ ಕರ್ತವ್ಯವನ್ನು ಮಾಡುತ್ತಾನೋ ಹಕ್ಕು ಅವನನ್ನು ಹುಡುಕಿ ಕೊಂಡು ಬರುತ್ತದೆ.

ಜ್ಞಾನಿಗಳು ಹಕ್ಕುಗಳಿಗಾಗಿ ಜಗಳವಾಡದೇ ಕರ್ತವ್ಯದ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಾರೆ. ಕರ್ತವ್ಯವೆಂದು ತಿಳಿದು ಕರ್ಮವನ್ನು ನಿಷ್ಕಾಮವಾಗಿ ಮಾಡಿದ್ದಲ್ಲಿ ಹೆಚ್ಚು ಆನಂದ ಇದೆ,

ಆಫೀಸಿನಲ್ಲಿ ೮ ಗಂಟೆ ದುಡಿಯುವಾಗ ಆ ಕೆಲಸ ಬೇಸರವೆನಿಸುತ್ತನೆ.

ಅದೇ ಆ ವ್ಯಕ್ತಿ ಒಂದು ದಿನ ಆಫೀಸಿಗೆ ರಜ ಹಾಕಿ ಮನೆಯ ಹಿತ್ತಲಿನಲ್ಲಿ ದಿನವಿಡೀ ದುಡಿಯುತ್ತಾನೆ. ಅದು ಅವನಿಗೆ ಆಯಾಸವಾಗದ ನಿಷ್ಕಾಮ ಕರ್ಮ, ಆಫೀಸಿನ ಮಡಿತ ಸಂಬಳದಿಂದ ಬಂಧಿತ, ಆದ್ದರಿಂದಲೇ ಅವನಿಗೆ ಆಕಳಿಕೆ.

ತಾಯಿ ತನ್ನ ಮಗುವನ್ನು ನಿಷ್ಕಾಮವಾಗಿ ಪ್ರೀತಿಸುತ್ತಾಳೆ. ಅದೆಷ್ಟು ಹೊಲಸು ಮಾಡಲಿ, ಛಲ ಮಾಡಲಿ ಆವಳು ಬೇಸರ ಪಡುವುದಿಲ್ಲ. ಹಗಲೂ ರಾತ್ರಿ ಆ ಮಗುವಿನ ಸೇವೆ ಮಾಡಿದರೂ ಆಕೆಗೆ ದಣಿವೆನಿಸದು. ಆಕೆ ಅದಕ್ಕಾಗಿ ಮಗನಿಂದ ಮಾನಪತ್ರ ಬಯಸಿಲ್ಲ ಅಥವಾ ಮಗನ ಕುರಿತು ತಾನು ಮಾಡಿದ ಸೇವೆಯ ವಾರ್ಷಿಕ ವರದಿ ಓದುವುದೂ ಇಲ್ಲ. ಆಕೆ ಮಾಡಿದುದು ಕರ್ಮಕ್ಕಾಗಿ ಕರ್ಮ, ಫಲಕ್ಕಾಗಿ ಅಲ್ಲ, ಕರ್ಮಕ್ಕಾಗಿ ಕರ್ಮ ಮಾಡಿದಾಗ ಆನಂದ, ಫಲಕ್ಕಾಗಿ ಕರ್ಮ ಮಾಡಿದರೆ ದುಃಖ.

ಯಾವುದೇ ಒಂದು ತನ್ನ ವೈಯಕ್ತಿಕವಾದ ಕರ್ಮಕ್ಕೆ ಸಾಮಾಜಿಕ ಸ್ವರೂಪ ಕೊಟ್ಟರೆ, ಆಗ ಅದು ನಿಷ್ಕಾಮವಾಗುತ್ತದೆ, ಆ ವ್ಯಾಪಕ ಕರ್ಮವು ಭಾರವಾಗುವುದೇ ಇಲ್ಲ.

ಒಂದು ಕೊಡ ನೀರನ್ನು ನಾವು ಎತ್ತಿಕೊಳ್ಳಲಾರದೇ ಇದು ಬಹಳ ಭಾರ ಎನ್ನುತ್ತೇವೆ. ಅದೇ ನಾವು ಸ್ನಾನಕ್ಕಾಗಿ ಕೆರೆಯಲ್ಲಿ ಮುಳುಗಿದಾಗ ನಮ್ಮ ತಲೆಯ ಮೇಲೆ ಇಡೀ ಕೆರೆಯ ನೀರು ಇದ್ದರೂ ನಾವು ಕೆರೆ ಭಾರ ಎನ್ನುತ್ತೇವೆಯೇ ?

ಹಾಗೆ ಕರ್ಮವೂ ವ್ಯಾಪಕವಾದಾಗ ಅದು ಭಾರವಾಗುವುದಿಲ್ಲ, ಕರ್ಮಯೋಗಕ್ಕೆ ದೊಡ್ಡ ದೃಷ್ಟಾಂತ ಸೂರ್ಯ.

ಕೋಟಿ ಕೋಟಿ ವರ್ಷಗಳಿಂದ ಸೂರ್ಯನು ಬೆಳಗುತ್ತಿದ್ದಾನೆ. ನಿತ್ಯವೂ ಸೂರ್ಯನಿಗೆ ಅರ್ಘ್ಯವೀಯುತ್ತ ಕೆಲವು ಭಕ್ತರು, "ಹೇ ಭಗವಾನ್ ಸೂರ್ಯದೇವಾ ! ನೀನು ನಮಗೆ ಬೆಳಕು ಕೊಡುವಿ" ಎಂದು ಪ್ರಾರ್ಥನೆ ಮಾಡಲು ಸೂರ್ಯದೇವನು, "ಓ, ಭಕ್ತರೇ ! ಬೆಳಕಲ್ಲದೆ ಬೇರೇನೂ ಕೊಡಲು ನನ್ನ ಬಳಿ ಇಲ್ಲಾ. ನಿಮಗೆ ಬೆಳಕು ಕೊಡಲು ನಾನೇನೂ ಬೆಳಗುತ್ತಿಲ್ಲ. ಬೆಳಗುವುದೇ ನನ್ನ ಸ್ವಭಾವ" ಎಂದು ಹೇಳುತ್ತಾನೆ. ಆಗ ಭಕ್ತರು, "ಓ ಭಾಸ್ಕರಾ! ನೀನು ಬೆಳಕನ್ನು ಮಾತ್ರ ಕೊಡುವುದಲ್ಲ, ನಮ್ಮ ಕತ್ತಲನ್ನು ಓಡಿಸಿದ್ದೀ". ಎನಲು ಸೂರ್ಯದೇವನು ಆಶ್ಚರ್ಯದಿಂದ ಕೇಳಿದ. "ಏನೇನು ! ಕತ್ತಲು !! ಆಶ್ಚರ್ಯ. ನಾನು ಹುಟ್ಟಿ ಸಾವಿರಾರು ಕೋಟಿ ವರ್ಷಗಳು ಕಳೆದರೂ ನಾನು ಈ ತನಕ ಕತ್ತಲೆಯೆಂಬುದನ್ನು ಕಂಡೇ ಇಲ್ಲ ! ಓ ನನ್ನ ಪ್ರೀತಿಯ ಭಕ್ತರೆ ! ದಯವಿಟ್ಟು ನನಗೆ ಸ್ವಲ್ಪ ಕತ್ತಲೆಯನ್ನು ತಂದು ತೋರಿಸುವಿರಾ ?" ಎಂದ. ಭಕ್ತರು ಚೀಲಗಳಲ್ಲಿ ಬುಟ್ಟಿಗಳಲ್ಲಿ ಕತ್ತಲನ್ನು ತುಂಬಿ ಸೂರ್ಯನಿಗೆ ತೋರಿಸುವೆನೆಂದು ತರುತ್ತಾರೆ, ಅದನ್ನು ನೋಡಲು ಸೂರ್ಯ ಬರುತ್ತಾನೆ. ಅವನು ಬಂದಾಗ ಕತ್ತಲು ಇರುವುದೇ ಇಲ್ಲ. ಹೀಗಾಗಿ ಸೂರ್ಯ ಕತ್ತಲನ್ನು ನೋಡಿಯೇ ಇಲ್ಲ.

ಹಾಗೆ ನಿಷ್ಕಾಮ ಕರ್ಮಯೋಗಿಯು ಕರ್ಮಕ್ಕಾಗಿ ಕರ್ಮ ಮಾಡುತ್ತಾನೆ. ಫಲಕ್ಕಾಗಿ ಕರ್ಮ ಅಲ್ಲ. ಕರ್ಮಕ್ಕಾಗಿ ಕರ್ಮ ಮಾಡಿದಾಗ ಆನಂದವಾಗುತ್ತದೆ. ಫಲಕ್ಕಾಗಿ ಕರ್ಮ ಮಾಡುವಾಗ ದುಃಖವಾಗುತ್ತದೆ.

ಒಬ್ಬರ ಮನೆಯ ಮುಂದೆ ಒಂದು ಸುಂದರವಾದ ಗುಲಾಬಿಯ ಹೂವು ಅರಳಿ ನಿಂತಾಗ ನಾವು ಅದನ್ನು ನೋಡುತ್ತಾ ಮೈಮರೆಯುತ್ತೇವೆ. ಅಲ್ಲೂ ಒಂದು ಆನಂದವಿದೆ. ಆದರೆ ಆ ಹೂವು ನನ್ನದಾಗಲಿಲ್ಲವಲ್ಲಾ; ಎಂಬ ಕೊರಗೂ ಇರುತ್ತದೆ. ಅದೇ ವ್ಯಕ್ತಿ ಸಾಯಂಕಾಲ ಸಮುದ್ರ ತೀರಕ್ಕೆ ಬಂದು ರುದ್ರ ರಮಣೀಯ ಸಮುದ್ರವನ್ನು ನೋಡುತ್ತ ಒಂದೆರಡು ಗಂಟೆ ಕಳೆಯುತ್ತಾನೆ. ಅವನಿಗೆ ಆನಂದವಾಗುತ್ತದೆ. ಆದರೆ ಇಲ್ಲಿ ಸಮುದ್ರ ತನ್ನದಾಗಬೇಕೆಂಬ ಆಶೆ ಅವನಿಗಿಲ್ಲ. ತನ್ನದಾಗಲಿಲ್ಲವೆಂಬ ಕೊರಗೂ ಇಲ್ಲ.

ನಿಷ್ಕಾಮ ಕರ್ಮದಲ್ಲಿ ಎಂತಹ ಸ್ಫೂರ್ತಿ ಅಡಗಿರುತ್ತದೆಂಬುದನ್ನು ಗಮನಿಸಿ.

ಗಂಡ ಒಂದು ದಿನ ಹೆಂಡತಿಗೆ ಹೇಳುತ್ತಾನೆ, "ನನಗೆ ನಾಲಿಗೆ ರುಚಿ ಕೆಟ್ಟಿದೆ. ಇಂದು ಏನಾದರೂ ಒಂದು ರುಚಿಕರವಾದ ಮೇಲೋಗರ ಮಾಡೆಂದು" ಹೇಳಲು ಆಕೆ "ನೋಡಿ ನಾನು ನಿತ್ಯವು ರುಚಿಕರವಾದ ಅಡಿಗೆಯನ್ನೇ ಮಾಡುತ್ತಿದ್ದೇನೆ. ನಿಮಗೆ ನಾಲಿಗೆ ರುಚಿ ಕೆಟ್ಟಿರುವುದರಿಂದ ನಾನು ಎಷ್ಟು ರುಚಿಯಾಗಿ ಮಾಡಿದರೂ ನಿಮಗೆ ರುಚಿಯಾಗಲಾರದು. ನನ್ನಿಂದೇನೂ ಮಾಡುವದು ಸಾಧ್ಯವಿಲ್ಲ. ನನಗೆ 'ಸುಸ್ತು' " ಎಂದಳು. ( ಸುಸ್ತು ಎಂದರೆ ಹಳೆಯ ಮೈಸೂರು ಕಡೆಯಲ್ಲಿ ತುಂಬಾ ಬಳಕೆಯಲ್ಲಿ ಶಬ್ದ ಆಯಾಸವೆಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. )

ಗಂಡನು ಈಕೆಗೆ 'ಸುಸ್ತು' ಎಂದುದನ್ನು ಕೇಳಿ ಡಾಕ್ಟರರ ಬಳಿಗೆ ಕರೆದೊಯ್ಯುತ್ತಾನೆ. ಡಾಕ್ಟರರು ಈಕೆಯನ್ನು ಪರೀಕ್ಷಿಸಿ, "ಹಸಿವು ನಿದ್ರೆ ಎಲ್ಲಾ ಚೆನ್ನಾಗಿದೆಯೇ? " ಎಂದು ಕೇಳಲು. " ಅದಕ್ಕೇನೂ ಅಡ್ಡಿಯಾಗುವದಿಲ್ಲ. " ಎಂದಳು " ತಲೆನೋವು, ಹೊಟ್ಟೆನೋವು, ಬೆನ್ನುನೋವು ಏನಾದರು ಇದೆಯೇ " ಎಂದು ಡಾಕ್ಟರರು ಮರು ಪ್ರಶ್ನೆ ಹಾಕಿದರೂ, " ಹಾಗೇನೂ ಇಲ್ಲ. " ಎಂದು ಆಕೆ ಉತ್ತರಿಸಿದಳು. " ಹಾಗಾದರೆ ನಿಮಗೆ ಇನ್ನೇನಾಗುತ್ತದೆ ಹೇಳಿ " ಎಂದು ಡಾಕ್ಟರರು ಕೇಳಿದರು. ಬೇರಗಾಗಿ ಆಕೆ ಇನ್ನೇನಿಲ್ಲ "ಸುಸ್ತು " ಎಂದಳು. ಇದನ್ನು ಕೇಳಿ ಏನೆಂದು ಹೊಳೆಯದೆ ಡಾಕ್ಟರರಿಗೂ 'ಸುಸ್ತು' ಆಯಿತು. ಗಂಡ ಹೆಂಡತಿಯನ್ನು ಮನೆಗೆ ಕರೆದುಕೊಂಡು ಬಂದ. ಆದಾದ ಮರು ದಿನವೇ ಆಕೆಯ ತವರು ಮನೆಯಿಂದ ತಾಯಿ, ತಮ್ಮ, ತಮ್ಮನ ಹೆಂಡತಿ ಮೊದಲಾದ ಬಂಧುಗಳು ಎಂಟು - ಹತ್ತು ಜನ ಅನಿರೀಕ್ಷಿತವಾಗಿ ಬಂದರು. ಅವರನ್ನು ನೋಡುತ್ತಲೇ ಈಕೆಗೆ ಎಲ್ಲಿಲ್ಲದ ಸ್ಫೂರ್ತಿ. ತಕ್ಷಣವೇ ಅವರನ್ನೆಲ್ಲ ಆದರದಿಂದ ಬರಮಾಡಿಕೊಂಡು ಚತುರ್ಭುಜಳಂತೆ ಮನೆಯಲ್ಲೆಲ್ಲ ಅಡ್ಡಾಡುತ್ತ ನಾಲ್ಕೈದು ಬಗೆಯ ಪಕ್ವ ಪರಮಾನ್ನಗಳನ್ನೆಲ್ಲ ಮಾಡಿ ಅವರನ್ನೆಲ್ಲ ಊಟಕ್ಕೆ ಕುಳ್ಳಿರಿಸಿ, ತಾನೇ ಬಡಿಸುತ್ತ ಒಂದಿಷ್ಟಾದರೂ ಶ್ರಮವಿಲ್ಲದೆ, ಅಷ್ಟೇ ಅವಸರ ಅವಸರ

ವಾಗಿ ಮಾಡಿ ಅಡಿಗೆ ಸರಿಯಾಗಿದೆಯೋ ಇಲ್ಲವೋ ಏನಾಗಿದೆಯೋ ಎಂದು ಉಪಚಾರದ ಮಾತನ್ನಾಡುತ್ತ ಅವರೆಲ್ಲರನ್ನೂ ಬಹಳ ಗೌರವ, ಆದರದಿಂದ ಮಾತನಾಡಿಸುತ್ತ ಇರುವಾಗ ಗಂಡ ಮನೆಗೆ ಬಂದ. ಒಂದು ಮೇಲೋಗರ ಮಾಡೆಂದಾಗ ನನಗೆ 'ಸುಸ್ತು' ಎಂದ ಈಕೆ, ಬಂದ ತವರಿನವರಿಗೆ ಪಂಚ ಭಕ್ಷ ಪರಮಾನ್ನ ತಾನೇ ಮಾಡಿ, ಬಡಿಸಿ, ಒಂದಿನಿತೂ ಆಯಾಸಗೊಳ್ಳದಿರುವುದನ್ನು ಕಂಡು ಗಾಬರಿಯಾದ. ಈಗ ಗಂಡನಿಗೆ " ಸುಸ್ತು. "

ಇಲ್ಲಿ ಮುಖ್ಯ ತಾತ್ಪರ್ಯವೇನಂದರೆ, ನಿಷ್ಕಾಮ ಕರ್ಮದಲ್ಲಿ ಎಂತಹ ಸ್ಫೂರ್ತಿ ಇರುತ್ತದೆ ಎಂಬುದಕ್ಕೆ ಈ ದೃಷ್ಟಾಂತ. ನಿತ್ಯದ ಅಡುಗೆ ಅವಳಿಗೆ ಆಲಸ್ಯ. ಅಪರೂಪವಾಗಿ ಬಂದ ತವರಿನವರನ್ನು ಗೌರವಿಸುವುದು ನಿಷ್ಕಾಮ ಪ್ರೀತಿಯ ಕರ್ಮ. ಅದೇ 'ಸುಸ್ತು' ಮಾಯವಾಗಲು ಕಾರಣ.

ಪ್ರತಿಯೊಬ್ಬನೂ ತನ್ನ ಪಾಲಿನ ಕರ್ತವ್ಯವನ್ನು ಭಗವಂತನ ಪೂಜೆಯೆಂದು ತಿಳಿದು ಅವಶ್ಯವಾಗಿ ಮಾಡಬೇಕು. ಒಂದು ವೇಳೆ ಜ್ಞಾನಿಯೇ ಆಗಿದ್ದರೂ ಲೋಕ ಸಂಗ್ರಹಕ್ಕಾಗಿ ಅಂದರೆ ಇತರರಿಗೆ ಆದರ್ಶವಾಗಿ ಯಾದರೂ ಕರ್ಮಗಳನ್ನು ಮಾಡುತ್ತಿರಬೇಕು. ತಾನೇ ಹಾಗೆ ಮಾಡುವೆನೆಂದು ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ ಅಪ್ಪಣೆ ಕೊಡಿಸಿದ್ದಾನೆ.

ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂ ಚನ। ನಾನ ವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥

[ಗೀತೆ ೩. ಶೋ: ೨೨]

"ಅರ್ಜುನ! ನಾನು ಹೊಂದಬೇಕಾದ, ಅಥವಾ ಹೊಂದದಿರುವ ಯಾವ ಫಲವೂ ಇಲ್ಲ. ಆದರೂ ನಾನು ಯಾವುದೇ ಫಲಾಪೇಕ್ಷೆ ಇಲ್ಲದೆ ಲೋಕಹಿತಕ್ಕಾಗಿ ಕರ್ಮ ಮಾಡುತ್ತೇನೆ. ನನಗೆ ಕರ್ತವ್ಯವೆಂಬುದೇ ಇಲ್ಲ" ಎಂದು ಭಗವಂತನು ಹೇಳುತ್ತಾನೆ.

ಆದ್ದರಿಂದಲೇ ಜ್ಞಾನಿಗಳು ಹೇಳುತ್ತಾರೆ.

"ಮಾಡು ಕರ್ಮವ ಯೋಗಿಯಾಗಿ ।
ಮಾಡಿ ಅರ್ಪಿಸಿ ಹರಿ ಚರಣಕೆ ಬಾಗು ॥"

ನೀನು ಏನೇನು ,ಶಾರೀರಿಕ, ಮಾನಸಿಕ, ಬೌದ್ಧಿಕ, ಕರ್ಮಗಳನ್ನು ಮಾಡುತ್ತೀಯೋ, ಯಜ್ಞಾದಿಗಳನ್ನು ಮಾಡುತ್ತಿಯೋ, ಅವೆಲ್ಲವನ್ನು ನನಗೆ ಅರ್ಪಿಸೆಂಬುದಾಗಿ ಭಗವಂತನ ಆಜ್ಞೆ ಇದೆ.

ಯತ್ಕರೋಸಿ ಯದಶ್ನಾಸಿ ಯಜ್ಜು ಹೋಸಿ
ದದಾಸಿ ಯತ್
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಂ
—ಗೀತೆ.

ಮೇಲಿನ ಮೂಲ ಕೀರ್ತನೆಯ ಮೊದಲನೇ ಚರಣದ ಉತ್ತರಾರ್ಧದ ಅರ್ಥ ಈಗ ವಿವೇಚನೆ ಮಾಡೋಣ–

"ಮಾಡದೇ ಮಾಡಿದ ಜ್ಞಾನಿಯಾಗು
ಮಾಡಿಯೂ ಮಾಡದೇ ಕರ್ಮವ ನೀಗೂ"

ಇಲ್ಲಿ ಮಾಡದೇ ಮಾಡುವುದೆಂದರೆ ಜ್ಞಾನಿಯ ಕರ್ಮ, ಜ್ಞಾನಿಯು ತಾನೇನನ್ನೂ ಮಾಡುವುದಿಲ್ಲ, ಆದರೆ ಆತನು ಜಗತ್ತನ್ನೇ ಕರ್ಮದಲ್ಲಿ ತೊಡಗಿಸುತ್ತಾನೆ. ಒಂದು ಯಂತ್ರದ ಚಕ್ರವು ಅತೀ ವೇಗದಲ್ಲಿ ತಿರುಗುತ್ತಾ ಇದ್ದರೆ ಅದು ಸುಮ್ಮನಿದ್ದಂತೆ ನಮಗೆ ಕಾಣಿಸುತ್ತದೆ. ಆದರೆ ಅದನ್ನು ಮುಟ್ಟಿದರೆ ಆಗ ಅದರ ವೇಗ ತಿಳಿಯುತ್ತದೆ. ಜ್ಞಾನಿಯ ಕರ್ಮ ಅಂತಹುದು.

ಶುಕಾಚಾರ್ಯ ಮಹಾಜ್ಞಾನಿ. ಆ ಮಹಾನುಭಾವನು ಕುಳಿತೆಡೆಯಿಂದ ಕದಲದೇ ಏಳು ದಿನ ಅಹೋರಾತ್ರಿ ಭಾಗವತವನ್ನು ಪರೀಕ್ಷಿತ ಮಹಾರಾಜನಿಗೆ ಹೇಳಿದ, ಇದು ಇತರರಿಂದ ಸಾಧ್ಯವೇ? ಜ್ಞಾನಿಯು ಹೊರಗಿನಿಂದ ಕರ್ಮ ಮಾಡುವಂತೆ ಕಾಣಿಸದಿದ್ದರೂ ಅವನು ಎಲ್ಲರನ್ನೂ ಕೆಲಸದಲ್ಲಿ ತೊಡಗಿಸುತ್ತಾನೆ. ನಮ್ಮ ಆದಿಕಾವ್ಯವಾದ ರಾಮಾಯಣದಲ್ಲಿ ಜ್ಞಾನಯೋಗ ಮತ್ತು ಕರ್ಮಯೋಗಗಳು ಬಂದಿವೆ. ಶ್ರೀರಾಮಚಂದ್ರ ಜ್ಞಾನಯೋಗಿ, ಶ್ರೀ ಭರತ ಕರ್ಮಯೋಗಿ; ಶ್ರೀರಾಮ ಮಾಡದೇ ಮಾಡಿದವ. ಭರತ ಮಾಡಿಯೂ ಮಾಡದವ.

ಶ್ರೀರಾಮಚಂದ್ರನು ಹದಿನಾಲ್ಕು ವರ್ಷ ವನವಾಸ ಕಳೆದು ಮರಳಿ ನಂದಿಗ್ರಾಮಕ್ಕೆ ಬಂದಾಗ ಅವನಿಗೆ ಭರತನ ಭೇಟಿಯಾಯಿತು. ಆಗ ಭರತನನ್ನು ಮಮತೆಯಿಂದ ರಾಮನು ಬಿಗಿದಪ್ಪುತ್ತಾ, "ತಮ್ಮಾ ನಿನ್ನ ರಾಜ್ಯವು ಹೇಗಿದೆ?" ಎಂದು ಕೇಳುತ್ತಾನೆ. ಭರತನಿಗಿದು ಸಮ್ಮತಿ

ಯಾಗಲಿಲ್ಲಾ. "ಅಣ್ಣಾ ನೀನು ಹೀಗೆ ಹೇಳಬಹುದೇ? ಇದು ನನ್ನ ರಾಜ್ಯವೇ? ಯಾರನ್ನಾದರೂ ಕೇಳು. ಇದು ಭರತನ ರಾಜ್ಯವಲ್ಲಾ; ರಾಮನ ರಾಜ್ಯವೆನ್ನುತ್ತಾನೆ. ಶ್ರೀ ರಾಮನೆಂದ-"ಮಗೂ ಭರತ, ನಾನು ಇಲ್ಲಿ ಇರಲೇ ಇಲ್ಲ. ಎಲ್ಲಾ ನೀನೇ ನಡೆಸಿದೆ. ಇದು ನನ್ನ ರಾಜ್ಯವೆಂತಾಗುವುದು? ಇದು ನಿನ್ನದೇ ಅಲ್ಲವೆ?" ಭರತನೆಂದ, "ರಘುವರ! ನೀನು ಎಲ್ಲಿದ್ದರೂ ರಾಜ್ಯವೆಲ್ಲವನ್ನೂ ಕೇವಲ ನಿನ್ನ ಆಜ್ಞೆಯಿಂದ ನಡೆಸಿದವನು ನಾನು. ನಿನ್ನ ಆಜ್ಞೆಗಳೇ ಇಲ್ಲಿ ಪಾಲಿಸಲ್ಪಟ್ಟಿವೆ, ಇದಕ್ಕೆ ನೀನೇ ಕಾರಣ, ಇಲ್ಲಿ ನನ್ನದೇನೂ ಇಲ್ಲ," ಭರತನು ತಾನು ಎಲ್ಲವನ್ನೂ ಮಾಡಿ ಏನೂ ಮಾಡಿಲ್ಲವೆನ್ನುತ್ತಾನೆ.

ಇಲ್ಲಿ ರಾಮನು ಕಾಡಿನಲ್ಲಿದ್ದರೂ ಅವನೇ ರಾಜ್ಯವನ್ನು ನಡೆಸಿದವ—ಅಂದರೆ ರಾಮ ಮಾಡದೇ ಮಾಡಿದವ, ಭರತ ಮಾಡಿಯೂ ಮಾಡದವ. "ಸಂಸಾರದಲ್ಲಿ ಜೀವನು ಭರತನಂತಿರಬೇಕು"ಎಂದು ಹಿರಿಯ ವಚನವಿದೆ. ಎಲ್ಲಾ ಕರ್ಮಗಳನ್ನೂ ಈಶ್ವರಾರಾಧನೆ ಎಂದು ಶ್ರದ್ಧೆಯಿಂದ ಮಾಡಿ ಆ ಜಗದೀಶ್ವರನಿಗೆ ಅರ್ಪಿಸಿ; ನಾಡಿನಲ್ಲಿದ್ದರೂ ಕಾಡಿನಲ್ಲಿದ್ದಂತೆ ಭರತನು ಸದಾ ವಲ್ಕಲವನ್ನು ಧರಿಸಿದ್ದನು—ಎಲ್ಲಾ ಭೋಗಗಳ ಮಧ್ಯದಲ್ಲಿದ್ದರೂ ವಿರಕ್ತನಾಗಿದ್ದ. ಹಾಗೆಯೇ ಕರ್ಮಯೋಗಿಯಾದವನು ವಿಷಯಗಳಲ್ಲಿ ಉದಾಸೀನ ಹೊಂದಿ ಕೇವಲ ಭಗವಂತನ ಸೇವೆಯೆಂಬ ಭಾವನೆಯಿಂದ ಎಲ್ಲಾ ಕರ್ಮಗಳನ್ನೂ ದಕ್ಷನಾಗಿ ಮಾಡಬೇಕು; ಇದನ್ನೇ ಶ್ರೀ ಗೋಪಾಲದಾಸರು:

"ಮಾಡಬೇಕು ಮಾಡಿಲ್ಲವೆನಬೇಕು
ನೀಡಬೇಕು ನೀಡಿಲ್ಲವೆನಬೇಕು"

ಎಂದು ಕರ್ಮಯೋಗದ ರಹಸ್ಯವನ್ನು ಹೇಳಿದ್ದಾರೆ,

ಈ ಮೂಲ ಕೀರ್ತನೆಯ ಎರಡನೆಯ ಚರಣದಲ್ಲಿ;-

"ಬೇಡದೇ ದೃಢಮಾಡು ಧ್ಯಾನ
ಪಡೆವೆ ಮಹಾಫಲವಿಲ್ಲನುಮಾನ
ಕೊಡದಿರುವನೇ ಕರಣಾನಿಧಾನ
ಮೃಡವಂದಿತ ಮೂಲನಾರಾಯಣ॥"

ಪರಮಾತ್ಮನನ್ನು ಬೇಡುವಭಕ್ತರಲ್ಲಿ ನಾಲ್ಕು ವಿಧದ ಭಕ್ತರನ್ನು ಪರಮಾತ್ಮನು ಗೀತೆಯಲ್ಲಿ ವಿವರಿಸುತ್ತಾನೆ; ಅರ್ಥಾರ್ಥಿ, ಆರ್ತ, ಜಿಜ್ಞಾಸು, ಜ್ಞಾನಿ. ಇವರಲ್ಲಿ-ಧ್ರುವ ವಿಭೀಷಣ, ಸುಗ್ರೀವ ಮೊದಲಾದವರು ದೇವರ ಅನುಗ್ರಹವನ್ನು ಯಾಚಿಸಿ ಮಹಾ ಪದವಿಗಳನ್ನು ಪಡೆದವರು. ಇವರನ್ನು ಅರ್ಥಾರ್ಥಿ ಭಕ್ತರೆಂದು ಕರೆಯಬಹುದು, ಇನ್ನು ದ್ರೌಪದಿ, ಗಜೇಂದ್ರ ಇವರು ಆರ್ತ ಭಕ್ತರು, ಆರ್ತ ಭಕ್ತರ ಲಕ್ಷಣಗಳ್ಯಾವುವೆಂದರೆ, ಅವರು ತಮ್ಮಿಂದ ಪರಿಹಾರ ಮಾಡಿಕೊಳ್ಳಲಾಗದ ಸಂಕಷ್ಟ ಬಂದಾಗ ಭಗವಂತನನ್ನು ಬೇಡುತ್ತಾರೆ, ಆದರೆ ದೇವರಲ್ಲಿ ಸುಖವನ್ನು ಬೇಡುವುದಿಲ್ಲ, ದ್ರೌಪದಿಯು ತನ್ನ ಮಾನ ಸಂರಕ್ಷಣೆಯನ್ನು ಮಾಡೆಂದು ಬೇಡಿದವಳಲ್ಲದೇ ತನ್ನ ಪತಿಗಳು ಕಳೆದುಕೊಂಡ ರಾಜ್ಯ ಸೌಖ್ಯಗಳನ್ನು ಮರಳಿ ಕೊಡಿಸೆಂದು ಬೇಡಲಿಲ್ಲ. ಗಜೇಂದ್ರನೂ ಮಕರಿಯಿಂದ ಬಿಡಿಸೆಂದು ಮಾತ್ರ ಬೇಡುತ್ತಾನೆ,

ಇನ್ನು ಜಿಜ್ಞಾಸು ಭಕ್ತರುಗಳೆಂದರೆ, ರಾಜಾ ಪರೀಕ್ಷಿತ, ರಂತಿದೇವ ಮೊದಲಾದವರು. ಇವರು ಸುಖದುಃಖ ತಮ್ಮ ಪ್ರಾರಬ್ಧವೆಂದು ತಿಳಿದು ಅದನ್ನಿದಿರಿಸಿ ಹೇಗಾ-ದರೂ ಭಗವತ್ ಪ್ರಾಪ್ತಿಮಾಡಿಕೊಳ್ಳಬೇಕೆಂದೂ ಪ್ರಯ-ತ್ನಿಸುತ್ತಾರೆ. ಪರೀಕ್ಷಿತನಿಗೆ ಸರ್ಪದಂಶವಾಗಿ ತಾನು ಸಾಯುವೆನೆಂಬುದಾಗಿ ತಿಳಿದಾಗಲೂ ಅವನು ಅದಕ್ಕೆ ಹೆದರದೇ, ಅಥವಾ ಬದುಕುವ ಉಪಾಯವೇನೆಂದು ಯೋಚಿಸದೇ ಭಗವಂತನ ಪ್ರಾಪ್ತಿಗಾಗಿ ಶುಕಾಚಾರ್ಯರ ಬಳಿಗೆ ಬಂದು ಭಾಗವತ ಶ್ರವಣ ಗೈಯುತ್ತಾನೆ. ರಂತೀದೇವನು ತನ್ನ ಪಾಲಿನ ಆಹಾರವನ್ನೆಲ್ಲಾ ಹಸಿದವರಿಗೆ ಹಂಚಿ, ಪರಮಾತ್ಮನಲ್ಲಿ—ಈ ದಾನ ಬುದ್ಧಿಯನ್ನು ಸದಾ ಕರುಣಿಸೆಂದು ಬೇಡುತ್ತಾನೆ.?

ಇಲ್ಲಿ ಜ್ಞಾನಿ ಭಕ್ತರೆಂದರೆ ಶುಕಸನಕಾದಿ ಬ್ರಹ್ಮರ್ಷಿಗಳು. ಇವರುಗಳು ಭಗವಂತನಲ್ಲಿ ಏನನ್ನೂ ಬೇಡುವುದಿಲ್ಲ. ತಮ್ಮನ್ನು ಸಂಪೂರ್ಣ ಪರಮಾತ್ಮನಿಗೆ ಸಮರ್ಪಿಸಿಕೊಂಡಿದ್ದಾರೆ. ಇವರು ದೇವರಲ್ಲಿ ಏನನ್ನು ಬೇಡುತ್ತಾರೆಂದರೆ, ಶ್ರೀ ಗೋಪಾಲದಾಸರೆಂದಂತೆ:

"ಬೇಡುವನು ನಾನೊಂದ ಬೇಡತಕ್ಕುದ ದೇವಾ
ಬೇಡದಂದದಿ ಪರರ ಮಾಡೆನ್ನ ಧೊರೆಯೇ"

ಇದೇ ಅವರ ಬೇಡಿಕೆ.

ಇದನ್ನೇ ಮೂಲ ಕೀರ್ತನೆಯಲ್ಲಿ:-

"ಬೇಡದೆ ದೃಢಮಾಡು ಧ್ಯಾನ" ಎಂದಿದ್ದಾರೆ. ತನಗೆ ಏನೂ ಬೇಡಾ ಎಂದವರಿಗೆ ಎಲ್ಲವೂ ದೊರಕುತ್ತದೆ. ಸಮುದ್ರಮಥನ ಕಾಲದಲ್ಲಿ ನಡೆದ ಒಂದು ಘಟನೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ. ದೇವದಾನವರು ಮಂದರ ಪರ್ವತವನ್ನು ಮಂಥನವಾಗಿಸಿ ಸಮುದ್ರ ಮಥನ ಮಾಡಿ

ದಾಗ ಮಹಾಲಕ್ಷ್ಮಿ ಉದಯಿಸಿದಳು. ಲಕ್ಷ್ಮೀ ಯಾರಿಗೆ ಸೇರಬೇಕಾದವಳೆಂಬ ಕುರಿತು ದೇವದಾನವರಲ್ಲಿ ವಾದ ವಿವಾದಗಳಾಗಲು ಬಳಿಕ ಲಕ್ಷ್ಮಿಗೆ ಸ್ವಯಂವರ ಏರ್ಪಟ್ಟಿತು, ಜಗನ್ಮಾತೆ ಲಕ್ಷ್ಮೀದೇವಿಯು ಪುಷ್ಪ ಮಾಲೆ ಹಿಡಿದು ತನಗೆ ಬೇಕಾದ ವರನನ್ನು ವರಿಸಿಕೊಳ್ಳುವೆನೆಂದು ಸಭೆಗೆ ಬರುತ್ತಿರಲು, ನಾರದನು – "ಮಹಾತಾಯೀ ಯಾರಿಗೆ ಮಾಲೆ ಹಾಕುವೆಯಮ್ಮ"? ಎಂದು ಕೇಳಲು ಲಕ್ಷ್ಮೀದೇವಿಯು ನಸುನಕ್ಕು "ಯಾರಿಗೆ ನನ್ನ ಮೇಲೆ ಇಚ್ಛೆ ಇಲ್ಲವೋ ಅವರಿಗೆ ಮಾಲೆ ಹಾಕುತ್ತೇನೆ" ಎಂದಳು, ಕುಳಿತ ದೇವದಾನವರಿಗೆಲ್ಲಾ ಇಚ್ಛೆ ಇದೆ. ಇಚ್ಛೆ ಇಲ್ಲದವನೆಂದರೆ ಪೂರ್ಣನಾದ ಭಗವನ್ನಾರಾಯಣನೊಬ್ಬನೇ. ಲಕ್ಷ್ಮೀದೇವಿ ಅವನಿಗೇ ಮಾಲೆ ಹಾಕಿದಳು. ಇದರರ್ಥ– ಏನೂ ಬೇಡಾ ಎಂದವನಿಗೇ ಎಲ್ಲವೂ ಸಿಗುತ್ತದೆ.

ಇದನ್ನೇ ಕೀರ್ತನೆಯಲ್ಲಿ:–

"ಬೇಡದೇ ದೃಢಮಾಡು ಧ್ಯಾನ–ಪಡೆವೆ
ಮಹಾಫಲ ಇಲ್ಲವನುಮಾನ"

ಇಲ್ಲಿ ಮಹಾಫಲವೆಂದರೆ ಭಗವತ್ಪ್ರಾಪ್ತಿ. ದೇವರೊಬ್ಬ ನಮ್ಮವನಾದರೆ ಎಲ್ಲವೂ ನಮ್ಮದಾದಂತೆ ಸರಿ.

"ಕಿಮಲಭ್ಯ ಭಗವತಿ ಪ್ರಸನ್ನೇ ಶ್ರೀನಿಕೇತನೆ"

ಎಂಬ ಭಾಗವತದ ವಾಕ್ಯದಂತೆ ಪರಮಾತ್ಮನ ಪರಮಾನುಗ್ರಹವಾಗಲು–ದೊರಕದ ಅಲಭ್ಯವೆಂಬ ವಸ್ತು ವ್ಯಾವುದು.

"ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ ತೃಪ್ತೋ
ಭವತಿ"

ಎಂದು ಯಾವುದು ದೊರಕಿದರೆ ಮನಷ್ಯನು ಸಿದ್ಧನೂ ತೃಪ್ತನೂ ಆಗುವನೋ ಅಂತಹುದೇ ಬ್ರಹ್ಮವಸ್ತುವೆಂದು ನಾರದ ಭಕ್ತಿಸೂತ್ರದಲ್ಲಿ ಹೇಳಿದೆ. ಅದನ್ನೇ ಇಲ್ಲಿ ಮಹಾಫಲವೆಂದು ಹೇಳಿದುದಾಗಿ ತಿಳಿಯಬೇಕು.

ಇನ್ನು "ಕೊಡದಿರುವನೇ ಕರುಣಾನಿಧಾನ" ಎಂದಿದ್ದಾರೆ. ಪರಮಾತ್ಮನು ಕರುಣಾಳು. ಅವನ ಕರುಣೆಯನ್ನು ಏನು ಹೇಳಲಿ? ಅವನ ನಿರ್ಹೇತುಕವಾದ ಕೃಪಾದೃಷ್ಟಿ ಬಿದ್ದ ಪತಿತರೂ, ದೀನರೂ ಉದ್ಧಾರವಾದರು. ಇದನ್ನು ಬಣ್ಣಿಸಿದ ಸಂತ ತುಲಸೀದಾಸರು,

"ಅಜಾಮಿಳ ವ್ಯಾಧಗೀಧ ಇನ್‌ಮೆ
ಕಹೋ ಕೌನ್‌ವ್ಯಾಧ"

ಅಂದರೆ, ದೇವಾ ನೀನು ಉದ್ಧಾರ ಮಾಡಿದ, ಅಜಾಮಿಳ, ವ್ಯಾಧನಾದ ವಾಲ್ಮೀಕಿ, ಪಕ್ಷಿಯಾದ ಜಟಾಯು, ಇವರಲ್ಲಿ ಯಾರು ಮಹಾತ್ಮಸಾಧುಗಳಿದ್ದಾರೆ? ಇವರನೆಲ್ಲಾ ನಿನ್ನ ನಿರ್ಹೇತುಕವಾದ ಕೃಪಾದೃಷ್ಟಿಯಿಂದಲೇ ನೀನು ಉದ್ಧಾರಮಾಡಿದ ಕರುಣಾನಿಧಾನನಲ್ಲವೆ ? ಎನ್ನುತ್ತಾರೆ.

ಸಂತ ತುಕಾರಾಮರು ಈ ಕುರಿತು–'ದೇವಾ ನೀನು ಯಾರನ್ನು ತನ್ನವರೆಂದು ಅಂಗೀಕಾರ ಮಾಡಿದ್ದಿಯೋ ಅವರೆಲ್ಲ ಉದ್ಧಾರರಾಗಿ ಪುರಾಣದಲ್ಲಿ ಪ್ರಸಿದ್ಧರಾದರು. ಅವರಲ್ಲಿ ಮುಖ್ಯ– ಅಜಾಮಿಳ, ಶಬರಿ, ಓರ್ವ ಗಣಿಕಾ' ಇವರೆಲ್ಲಾ ಉದ್ಧಾರವಾಗಿಲ್ಲವೆ?, ಎನ್ನುತ್ತಾರೆ,

ರಾಗ:– ದುರ್ಗಾ ತಾಳ:– ಕೇರವಾ

ಅಂಗೀಕಾರ ಜ್ಯಾಚಾ ಕೇಲಾ ನಾರಾಯಣಾ
ನಿಂದ್ಯತೇಹಿ ತೇಣೆಂ ವಂದ್ಯ ಕೇಲೆ
ಅಜಾಮಿಳ ಭಿಲ್ಲಿಣಿ ತಾರಿಲಿ ಕುಂಟಣಿ
ಪ್ರತ್ಯಕ್ಷಪುರಾಣಿ ವಂದ್ಯಕೇಲೆಂ (ತುಕಾರಾಂ)

ಭಗವಂತನ ಕರುಣಾಕೃಪಾದೃಷ್ಟಿಯನ್ನು ವಿವರಿಸುತ್ತಾ ಜಗನ್ನಾಥದಾಸರು ತಮ್ಮ ಹರಿಕಥಾಮೃತ ಸಾರದಲ್ಲಿ:-

"ಇಟ್ಟಿಕಲ್ಲನು ಭಕುತಿಯಿಂದಲಿ
ಕೊಟ್ಟ ಭಕುತಗೆ ಮೆಚ್ಚಿ ತನ್ನನು
ಕೊಟ್ಟ ಬಡಬ್ರಾಹ್ಮಣನ ಒಪ್ಪಿಡಿಯವಲಿಗಖಿಳಾರ್ಥ
ಕೆಟ್ಟಮಾತುಗಳೆಂದಚೈದ್ಯನ
ಪೊಟ್ಟೆಯೊಳಗಿಂ ಬಿಟ್ಟು ಬಾಣದ
ಲಿಟ್ಟ ಭೀಷ್ಮನವಗುಣಗಳೆಣಿಸಿದನೇನೊ

ಕರುಣಾಳೂ॥

ಹೀಗೆ ಕರುಣಾನಿಧಾನನಾದ ಮೃಡವಂದಿತ ಮೂಲ ನಾರಾಯಣಸ್ವಾಮಿಯು ಮಾತಾಪಿತೃಗಳ ಸೇವೆಯಲ್ಲಿರುವ ಪುಂಡಳೀಕನು ತನಗೆ ಎಸೆದ ಇಟ್ಟಿಕಲ್ಲಿನ ಮೇಲೆ ಒಲಿದು ಅಲ್ಲೇ ನಿಂತು ಭಕ್ತನನ್ನು ಕಾದು ಅವನಿಗೆ ದರ್ಶನವಿತ್ತ ವಿಠಲ. ಬಡಬ್ರಾಹ್ಮಣ ಸುಧಾಮಕೊಟ್ಟ ಒಪ್ಪಿಡಿ ಅವಲಕ್ಕಿಗೆ ಸುಧಾಮ ನಗರಿಯನ್ನೇ ರಚಿಸಿಕೊಟ್ಟ ಭಗವಾನ್ ಶ್ರೀಕೃಷ್ಣ. ತನ್ನನ್ನು ಕೆಟ್ಟಮಾತುಗಳಿಂದ ಬೈದ ಶಿಶುಪಾಲನನ್ನು ತನ್ನಲ್ಲಿ ಸೇರಿಸಿಕೊಂಡ. ನಾವು ಅವನಲ್ಲಿ ಏನೂ ಬೇಡಲಿಲ್ಲಾ ಎಂಬ ಕಾರಣದಿಂದ ಕೊಡದಿರುವವನಲ್ಲಾ ಪರಮಾತ್ಮ. ಅವನು ಕರುಣಾನಿಧಾನ. ನಮಗೆ ಏನು ಬೇಕೆಂಬುದು ಅವನಿಗೆ ಚೆನ್ನಾಗಿ ತಿಳಿದಿದೆ ಎಂದು ಬಗೆದು ನಮ್ಮ ಪಾಲಿನ ಕರ್ತವ್ಯವನ್ನು ಅವನ ಸೇವೆ ಎಂಬುದಾಗಿ ಕೃಷ್ಣಾರ್ಪಣ ಬುದ್ಧಿಯಿಂದ ಮಾಡು ಎಂದು ಈ ಕೀರ್ತನೆಯ ಸಂದೇಶ.

ಕರ್ನಾಟಕ ಕೀರ್ತನ ಪರಂಪರೆ ಮತ್ತು 'ಕೀರ್ತನಾಚಾರ್ಯ'

# ಭದ್ರಗಿರಿ ಅಚ್ಯುತದಾಸರ ಅಚ್ಯುತ ಸೇವೆ

ಎನ್ಕೆ

(೧)

ಕೀರ್ತನೆ ನವವಿಧ ಭಕ್ತಿಗಳಲ್ಲೊಂದು. ನಾರದರೇ ಕೀರ್ತನೆಯ ಮೂಲ ಆಚಾರ್ಯಪುರುಷ ಎನ್ನಬೇಕು. ನಾರದರ ಸ್ಫೂರ್ತಿಯಿಂದಲೇ ರಾಮಾಯಣ ಮಹಾಕಾವ್ಯವನ್ನು ರಚಿಸಿದ ಆದಿಕವಿ ವಾಲ್ಮೀಕಿ ಕುಶ–ಲವ ಎಂಬ " ಕುಶೀಲವ " ರಿಂದ ಅದನ್ನು ಗೇಯ ರೂಪದಲ್ಲಿ ಹೇಳಲು ಕಲಿಸಿದಾಗಲೆ ರಾಮಕಥಾ ಸಂಕೀರ್ತನೆಗೆ ಮೊದಲಾಗಿರಬೇಕು. ಭಗವತ್ ಸಂಕೀರ್ತನೆಯು ಭಾರತೀಯ ಸಂಸ್ಕೃತಿ ಇತಿಹಾಸದಲ್ಲಿ ಇಷ್ಟೊಂದು ಪ್ರಾಚೀನವಾದುದಾಗಿದೆ.

ಭಾರತೀಯ ಭಕ್ತಿಮಾರ್ಗಕ್ಕೆ ಕರ್ನಾಟಕವು ಸಲ್ಲಿಸಿರುವ ಕೊಡುಗೆ ಅತ್ಯಮೋಘವಾದುದು. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯದ ಇತಿಹಾಸವು ಭಕ್ತಿ ವಾಙ್ಮಯಕ್ಕಾಗಿ ಪ್ರಸಿದ್ಧಿ ಪಡೆಯಿತು. ಭಕ್ತ ಕವಿಗಳಿಗೆ ಕುಮಾರವ್ಯಾಸನೇ ಗುರು. ಆತನ ಪ್ರಭಾವದಿಂದಾಗಿ ಅನೇಕ ಭಾಗವತ ಕವಿಗಳು ಮುಂದೆ ಬಂದರು. ಇವರಿಂದ ಭಕ್ತಿಯ ಅಭಿವ್ಯಕ್ತಿಗೆ ಒಂದು ಭಾಷೆ ತಯಾರಾಯಿತು. ಅದು ಜನಸಾಮಾನ್ಯರ ದಿನ ಬಳಕೆಯ ಆಡುನುಡಿಯ ಬೆಡಗಿನ ರೂಪ ತಾಳಿತು. ಮುಂದೆ ಹರಿದಾಸರು ಇದೇ ಭಾಷಾ ಸೌಲಭ್ಯವನ್ನು ತಮ್ಮ ಹರಿಕೀರ್ತನ ಸಾಹಿತ್ಯ ನಿರ್ಮಾಣಕ್ಕಾಗಿ ಬಳಸಿಕೊಂಡರು.

ಹದಿನೈದನೆಯ ಶತಮಾನದಲ್ಲಿ ಭಾಗವತ ಸಾಹಿತ್ಯದ ಒಂದು ವಿಶಿಷ್ಟ ಶಾಖೆಯಾಗಿ ದಾಸವಾಙ್ಮಯ ತಲೆಯೆತ್ತಿತು. ದಾಸಕೂಟ ಎಂಬ ಸಂಸ್ಥೆ ಉದಯವಾಗಿ ತನ್ಮುಖೇನ ವೈಷ್ಣವ ಮತಪ್ರಚಾರಕ್ಕೆ ಒಂದು ರಂಜಕ ಸಾಧನೆ, ಬಳಕೆಗೆ ಬಂತು. ಮಾಧ್ವ ತತ್ವಗಳನ್ನು ಆಚಾರಧರ್ಮವನ್ನು ದಾಸಕೂಟವು ಕನ್ನಡಿಗರಲ್ಲಿ ಹಬ್ಬಿಸಿ ಹರಡಲು ಸಮರ್ಥವಾಯಿತು.

ಹರಿದಾಸರು ಕಾಲ್ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ತಾಳ–ತಂಬೂರಿ ಹಿಡಿದುಕೊಂಡು ಮನೆ ಮನೆಗೆ ಹೋಗಿ ದೇವರ ನಾಮಸಂಕೀರ್ತನೆಗೆ ತೊಡಗಿದಾಗ ಕನ್ನಡ ನಾಡಿನಲ್ಲಿ ಹೊಸದೊಂದು ಸಾಂಸ್ಕೃತಿಕ ಜಾಗೃತಿಯುಂಟಾಯಿತು. ಜನರಲ್ಲಿ ಭಗವದ್ಭಕ್ತಿ , ಧರ್ಮಶಕ್ತಿ , ನೀತಿ ನಿಷ್ಠೆಗಳು ಬೆಳೆದವು. ಪುರಂಧರದಾಸ , ಕನಕದಾಸರು ಹದಿನಾರನೇಯ ಶತಮಾನದ ಸಂಕೀರ್ತನ ವಾಙ್ಮಯದ ಸೀಮಾ ಪುರುಷರಾಗಿ ಮೆರೆದರು. ಇವರಿಗಿಂತ ಮೊದಲು ಶ್ರೀಪಾದರಾಯರು ದೇವಪೂಜಾಕಾಲದಲ್ಲಿ ವೇದ ಪಾರಾಯಣದಂತೆ ಭಾಗವತರಿಂದ ಕನ್ನಡ ದೇವರ ನಾಮ ಸಂಕೀರ್ತನೆಯ ಪರಿಪಾಠವನ್ನು ಪ್ರಾರಂಭಿಸಿದುದನ್ನು ಇಲ್ಲಿ ಅವಶ್ಯ ನೆನೆಯಬೇಕು.

ಹೀಗೆ ದೇವರ ನಾಮ ಸಂಕೀರ್ತನೆ , ಹರಿಕೀರ್ತನೆ ನಮ್ಮ ನಾಡಿನ ಸಾಂಸ್ಕೃತಿಕ ವೈಶಿಷ್ಟ್ಯವಾಗಿ ಪ್ರಾದುರ್ಭವಿಸಿತು. ಮುಂದೆ ಹರಿಕೀರ್ತನೆಯೆಂಬ ಒಂದು ಪರಿಪೂರ್ಣ ಸಂಗೀತ ಪ್ರಕಾರವೇ ವಿಕಾಸಗೊಂಡು ಬೆಳೆಯಿತು. ಉತ್ತರ ಕರ್ನಾಟಕದಲ್ಲೆಲ್ಲಾ ಈ ಕೀರ್ತನ ಪದ್ಧತಿಯು ಕಳೆದ ಒಂದೆರಡು ಶತಮಾನಗಳಲ್ಲಿ ಎಂದರೆ, ಮರಾಠಿ ಪೇಶ್ವೆಯವರ ಕಾಲದಿಂದ , ಹೆಚ್ಚು ಬಳಕೆಯಲ್ಲಿ ಬಂತು.

ಗದುಗಿನಭಾಗದ ಮುಳಗುಂದದ ರಾಮಾಶಾಸ್ತ್ರಿ ಮತ್ತು ಬಾಳಾಶಾಸ್ತ್ರಿ ಬಂಧುಗಳ ಕೀರ್ತನಗಳೆಂದರೆ ಕರ್ಣರಸಾಯನ; ಶ್ರುತಿಗಳಿಗೆ ಸಮೀಚೀನ ಭೋಜನ. ಉಭಯತರೂ ಮಹಾರಾಷ್ಟ್ರದ ಕೀರ್ತನ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದರು. ಅವರ ಕಥೆಗಳಲ್ಲಿ ನಿರೂಪಣ ಭಾಗವೆಲ್ಲಾ ಕನ್ನಡದಲ್ಲಿಯಾದರೆ ಪದಗಳೆಲ್ಲಾ ಮರಾಠಿ. 'ಭಕ್ತಪ್ರಲ್ಹಾದಳಿನ ಕಥೆ ಹೇಳುವಾಗ 'ಭಕ್ತಪ್ರಲ್ಹಾದನು ಶುಕ್ಲ ಪಕ್ಷದ ಚಂದ್ರನಂತೆ ಬೆಳೆಬೆಳೆದು ದೊಡ್ಡವನಾಗಿ ಐದುವರುಷದವನಾದ'

ಎಂದು ನಿರೂಪಿಸಿ 'ಪಾಚ ವರುಷ ಪ್ರಲ್ಹಾದವಯಾ ಝಾಲೀ ' ಎಂದು ಮರಾಠಿ ಪದವನ್ನು ಹೇಳುತ್ತಿದ್ದರು.

ನರಗುಂದದ ಚಿದಂಬರ ದೀಕ್ಷಿತರೂ ಇದೇ ಪದ್ಧತಿಯನ್ನೇ ಅನುಸರಿಸಿದರು. ಆದರೆ ಮುಂದೆ ಕಾಲ ಮಾನಕ್ಕನುಸಾರವಾಗಿ ಕನ್ನಡ ಪದಗಳನ್ನೆ ತಮ್ಮ ಮುಂದಿನ ಕಥೆಗಳಲ್ಲಿ ಅಳವಡಿಸಿಕೊಳ್ಳತೊಡಗಿದರು.

ಗದಗಿನಲ್ಲಿ ಶ್ರೀ ತ್ರಿಕೂಟೇಶ್ವರ ದೇವಸ್ಥಾನದಲ್ಲಿ ಜರಗುತ್ತಿದ್ದ ಶಂಕರಾಚಾರ್ಯರ ಉತ್ಸವವು ನನ್ನ ಬಾಲ್ಯದ ಸವಿ ಸ್ಮೃತಿಗಳಲ್ಲಿ ಒಂದಾಗಿ ಇನ್ನೂ ಅಚ್ಚಳಿಯದೆ ನನ್ನ ಮನಃಪಟಲದ ಮೇಲೆ ಮೂಡಿ ನಿಂತಿದೆ. ಆಸಂದರ್ಭದಲ್ಲಿ ಚಿದಂಬರ ದೀಕ್ಷಿತರ ಕೀರ್ತನ ಸಪ್ತಾಹ ಜರುಗುತ್ತಿತ್ತು. ಐವತ್ತು ವರುಷಗಳ ಹಿಂದಿನ ಬಾಲಕರಾದ ನಮಗೆಲ್ಲ ಆಗ ಶ್ರೀ ಚಿದಂಬರ ದೀಕ್ಷಿತರ ಕೀರ್ತನ ಸಪ್ತಾಹವೆಂದರೆ ಒಂದು ಸಮೀಚೀನ ಮನ-ರಂಜನೆಯ ಆಮಂತ್ರಣವಾಗಿತ್ತು. ಕಲ್ಯಾಣ ಖಜೀನಾ, ಪದ್ಮಾವತೀ ಪರಿಣಯ, ಪಾರ್ವತೀ ಪರಿಣಯ, ಭಕ್ತ ಪ್ರಲ್ಹಾದ, ದಾಮಾಜಿ ಪಂತ ಮೊದಲಾದ ಆಖ್ಯಾನಗಳನ್ನು ಮರೆಯುವಂತಿಲ್ಲ. ಸಂಜೆ ಐದುಗಂಟೆಗೇನೆ ಕೀರ್ತನದ ಪೀಠಿಕಾ ಭಾಗ ಪ್ರಾರಂಭ. ಆ ಪೀಠಿಕೆಯಲ್ಲಿ ಬರಿ ತಾತ್ವಿಕ ವಿಚಾರ, ನೀತಿ ಬೋಧೆ ನಡು ನಡುವೆ ಅಷ್ಟು ಸಂಗೀತ. ಆಗಾಗ ಪೇಟಿ ಬಾರಿಸುವ ಕಲಾವಿದರೂ ಉತ್ತಮ ಸಂಗೀತಗಾರರಾಗಿದ್ದುದರಿಂದ (ಸವಾಯಿ ಗಂಧರ್ವರ ಶಿಷ್ಯ ಶ್ರೀ ನೀಲಕಂಠ ಬುವಾ ಗಾಡಗೋಳಿ!) ರಾಗದಾರಿ ಪದಗಳನ್ನು ಹೇಳುತ್ತಿದ್ದರು. ಆದರೂ ಈ ಒಂದು ತಾಸಿನ ಪೀಠಿಕೆ ಯಾವಾಗ ಮುಕ್ತಾಯವಾದೀತೊ ಎಂದು ಬಾಲಕರಾದ ನಾವು ಕಾದುಕೊಂಡು ಕುಳಿತುಕೊಳ್ಳುತ್ತಿದ್ದೆವು, (ತಡಮಾಡಿ ಬಂದರೆ ಸ್ಥಳ ಸಿಗಲಿಕ್ಕಿಲ್ಲವೆಂದು ಇಷ್ಟು ಮುಂಚಿತವೇ ಧಾವಿಸಿ ಬರುತ್ತಿದ್ದೆವು) ಸರಿ, ಮುಕ್ತಾಯಗೊಳ್ಳುತ್ತಲೆ ದೇವರಿಗೆ ಆರತಿಮಾಡಿ ಕೀರ್ತನಕಾರರ ಕೊರಳಿಗೆ ಮಾಲೆ ತೊಡಿಸಿ, ಬುಕ್ಕಿಟ್ಟು ಹಾಕಿ, ಕುಂಕುಮ ಹಚ್ಚಿದ ಮೇಲೆ ಕೊರಳಿಗೆ ಸುತ್ತಿದ ಸೆಲ್ಲೆಯನ್ನು ಸೊಂಟಕ್ಕೆ ಅಡ್ಡಗಟ್ಟುತ್ತ, 'ನಮಃ ಪಾರ್ವತೀ ಪತೆಯೇ ಹರ ಹರ ಮಹಾದೇವ' ಎಂದು ಮೊದಲಾದ ಜಯ ಜಯ ಕಾರ ಧ್ವನಿಯಾಗುತ್ತಲೆ ನನ್ನೊಳಗೂ ವಿದ್ಯುತ್ ಸಂಚಾರವಾದಂತಾಗಿ ನಾನೂ ಆ ಜಯ ಜಯಕಾರದಲ್ಲಿ ಧ್ವನಿಗೂಡಿಸುತ್ತಿದ್ದೆನು. ಸರಿ, ಆಗ ಕಥೆಗೆ ಆರಂಭ. ಕಥೆಗಿಂತಲೂ ನಮಗೆ ಅಡ್ಡಗತೆಗಳ ಆಸಕ್ತಿಯೆ ಆಸಕ್ತಿ. ನಡು ನಡುವೆ ಆಗಿನ ಸುಧಾರಕರ ಬಗ್ಗೆ ಟೀಕೆ, ನಾಸ್ತಿಕರ ಮೇಲೆ ಅಸ್ತ್ರ, (ಆಗಿನ ಪ್ರಕಾರ) ಸಣ್ಣ ಕುಂಕುಮ ಹಚ್ಚಿ ನೆಲಗೂಡಿಸುವಂತೆ ಸೀರೆ ಉಡುವ ಸುಧಾರಕ ಸ್ತ್ರೀಯರ ಕುರಿತು ವ್ಯಂಗೋಕ್ತಿ ಇವೆಲ್ಲಾ ನಮಗೆ ನಗೆಯ ನೈವೇದ್ಯ...... ಒಬ್ಬ ಮೊದ್ದುಮಗ ಅಪ್ಪನಿಗೆ ಅವ್ವ, ಅವ್ವನಿಗೆ ಅಪ್ಪ ಎಂದು ಹೇಳುತ್ತಿದ್ದನಂತೆ. ಯಾರೋ ಹೊರಗೆ ಬಂದು ಅಪ್ಪ ಇದ್ದಾನೇನಪ್ಪಾ ಎಂದು ಕೇಳಿದಾಗ ಈ ಮೊದ್ದುಮಗ – ಒಳಗೆ ಅಡಗಿ ಮಾಡತಾನ – ಅಂತ ಹೇಳಿದ ......... ಸರಿ, ಹೀಗೇ ಅವ್ವ ಏನು ಮಾಡುತ್ತಿದ್ದಾಳೆಯೆಂಬುದರ ಉತ್ತರವನ್ನು ನೀವೆ ಊಹಿಸಬಹುದು. ಇತರ ಮನರಂಜನೆಯ ಸಾಧನಗಳ ಸೌಲಭ್ಯಯಿಲ್ಲದ ಆಗಿನ ಕಾಲಕ್ಕೆ ನಮಗೆ ಕೀರ್ತನೆಯೆಂದರೇನೆ ಒಂದು ಮಹಾಸಮಾರಾಧನೆಯಾಗುತ್ತಿತ್ತು.

ಉತ್ತರ ಕರ್ನಾಟಕದಲ್ಲಿ ಕೀರ್ತನೆಯೆಂದು ಹೇಳಿದರೆ ಮೈಸೂರ ಭಾಗದಲ್ಲಿ ಹರಿಕಥೆ ಎನ್ನುತ್ತಾರೆ. ಹರಿಕಥೆಯಲ್ಲಿ ಶಿವಕಥೆಗಳೂ ಬರುವದರಿಂದ ಹರಿಕಥೆಗೆ ಶಿವಕಥೆ ಎಂಬ ಅಭಿಧಾನವೂ ರೂಢವಾಯಿತು.

ಕಥೆ ಎಂಬುದು 'ಗಾಥಾ' ಎಂಬುದರ ತದ್ಭವ ರೂಪ. ಗಾಥಾ ಪ್ರಕಾರವು ವೇದಕಾಲದಷ್ಟು ಪ್ರಾಚೀನ. ಆದರೂ ಹರಿಗಾಥಾ — ಹರಿಕತೆಗಳು ಇತ್ತೀಚಿನ ಪ್ರಕಾರಗಳೇ ಆಗಿವೆ, ಕೀರ್ತನಗಳ ಸಂವಾದಿಯಾಗಿ. ಮೈಸೂರ ಆಸ್ಥಾನದಲ್ಲಿ ಕವಿ ಗಮಕಿಗಳಂತೆ ಸಂಗೀತಗಾರರೂ, ಹರಿಕಥಾಕಾರರೂ ಆಸ್ಥಾನದಲ್ಲಿಸನ್ಮಾನಿತರಾದುದುಂಟು. ಹರಿಸರ್ವೋತ್ತಮಾಚಾರ್ಯರು, ಶಿವಮೂರ್ತಿಶಾಸ್ತ್ರಿ, ವೇಣುಗೋಪಾಲದಾಸರೂ ಈಚಿನ ಪ್ರಸಿದ್ದ ಹರಿಕಥಾಕಾರರು, ಹರಿಸರ್ವೋತ್ತಮಾಚಾರ್ಯರು ಹುಬ್ಬಳ್ಳಿಯ ಮೂರುಸಾವಿರಮಠದ ಆಶ್ರಯದಲ್ಲಿ ಒಂದು ಕೀರ್ತನ – ತರಬೇತಿ ಕೇಂದ್ರವನ್ನೇ ಪ್ರಾರಂಭಿಸುವದು ವೈಶಿಷ್ಟ್ಯ ಪೂರ್ಣವಾಗಿದೆ. ಪ್ರತಿ ವರುಷ ಈಮಠದಲ್ಲಿ ಶ್ರಾವಣ ಮಾಸದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀಹರಿಸರ್ವೋತ್ತಮಾಚಾರ್ಯರಿಂದ ಹರಿಕಥಾ ಕಾರ್ಯಕ್ರಮ ನಡೆಯುತ್ತಿದೆ.

ಕೀರ್ತನಗಳು ಸಾಂಸ್ಕೃತಿಕ ಪ್ರಚಾರಕ್ಕೆ ಮನರಂಜಕ

ಸಾಧನಗಳೆಂದು ಹೇಳಿತಪ್ಪೆ? ಸರಕಾರೀ ಕ್ಷೇತ್ರಗಳಲ್ಲಿ ಪಂಚವಾರ್ಷಿಕ ಯೋಜನೆ, ಕುಟುಂಬ ಯೋಜನೆ, ಹಸಿರುಕ್ರಾಂತಿ, ಹೊಸಬೇಸಾಯ ಮೊದಲಾದ ವಿಷಯ ಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಚಾರ ಮಾಡುವದಕ್ಕಾಗಿ ಕೀರ್ತನಕಾರರನ್ನೂ ಉಪಯೋಗಿಸಿಕೊಳ್ಳಲಾಗುತ್ತದೆ. ಹರಿಕಥೆಯನ್ನು ಆಧುನಿಕ ಪ್ರಚಾರ ವಿಷಯಗಳಿಗೆಯೋಗ ವಾಹಕಗಳನ್ನಾಗಿ ದುಡಿಸಿಕೊಳ್ಳುವ ಜಾಣ್ಮೆ ಆಯಾ ಕೀರ್ತನಕಾರರಿಗೇ ಸೇರಿದ್ದು. ಕೀರ್ತನಪದ್ಧತಿಯು ಈ ಪ್ರಕಾರದ ಪ್ರಚಾರಾತ್ಮಕ ಬಳಕೆಯ ಯುಕ್ತಾಯುಕ್ತ ತೆಯ ಚರ್ಚೆ ಇಲ್ಲಿ ಪ್ರಸ್ತುತವಲ್ಲ. ಆದರೆ ಒಂದು ಮಾತು. ಚತುರರು, ಪ್ರತ್ಯುತ್ಪನ್ನಮತಿಗಳು ಪ್ರಾಜ್ಞರು ಸಂಗೀತಜ್ಞರು ಆದ ಶ್ರೀ ರಾ. ವೆ. ಕರಗುದರಿ ಅವರು ಮಾತ್ರ ಕೀರ್ತನರೂಪವನ್ನು ಯಾವದೆ ಪ್ರಚಾರಕ್ಕಾಗಿ ಸೂಕ್ತವಾಗಿ, ಸಯುಕ್ತಿಕವಾಗಿ ಬಳಸಿಕೊಳ್ಳಬಹುದು ಎಂಬುದನ್ನು ಯಶಸ್ವಿಯಾಗಿ ಪ್ರಯೋಗಿಸಿ ತೋರಿಸಿದ್ದಾರೆ.

ಕೀರ್ತನ ಅಥವಾ ಹರಿಕಥೆಯ ಪ್ರಯೋಗ ಪ್ರಕಾರದ ಬೆಳವಣಿಗೆ ಒಂದಿಷ್ಟು ಮನೋರಂಜಕವಾಗಿದೆ. ಯಕ್ಷ ಗಾನದ ಭಾಗವತನಂತೆ ಕೀರ್ತನಕಾರ ಒಬ್ಬನೇ ಇಲ್ಲಿ ಎಲ್ಲ ಗೀತ – ಸಂಗೀತವನ್ನು ನಿರ್ವಹಿಸಿಕೊಂಡು ಹೋಗು ತ್ತಾನೆ. ಕಥಾನಿರೂಪಣೆಯ ಮಧ್ಯದಲ್ಲಿ ನಾಟ್ಯಪೂರ್ಣ ವಾದ ಸನ್ನಿವೇಷಗಳಲ್ಲಿ ತಾನೇ ವಿವಿಧ ಪಾತ್ರಧಾರಿ ಯಾಗಿ ಸಂಭಾಷಣೆಗಳನ್ನೂ ನಡೆಸುತ್ತಾನೆ. ರಂಗಗೀತ ಗಳಂತೆ ನಾಟಕೀಯ ಪ್ರಸಂಗಗಳಲ್ಲೆಲ್ಲಾ ಪದಗಳನ್ನು ತಬಲಾ – ಪೇಟೀ ಸಾಥಿಯೊಂದಿಗೆ ಸುಂದರವಾಗಿ ಹಾಡು ತ್ತಾನೆ. ಹೀಗೆ ಕೀರ್ತನವು ಬಹುಪ್ರಕಾರ ಕೌಶಲ್ಯವನ್ನು ಒಳಗೊಂಡಿರುತ್ತದೆ. ಯಕ್ಷಗಾನ, ನಾಟಕ, ಪುರಾಣ-ಪ್ರವಚನಗಳ ಮಾದರಿಗಳೆಲ್ಲವೂ ಇಲ್ಲಿ ಸಮಾವೇಶವಾಗು ತ್ತದೆ. ರಂಗ ನಟನಿಗೆ ಓದು ಬರೆಹ ಅಷ್ಟೇ ಬಂದರೆ ಸಾಕು ಸಂಭಾಷಣೆಗಳನ್ನು ಗಿಳಿಪಾಠ ಮಾಡ ಬಹುದು. ಆದರೆ ಕೀರ್ತನಕಾರರು ಮಾತ್ರ ಬಹುವಿಧ ವಿದ್ವಾಂಸ ನಾಗಿರಬೇಕಾಗುತ್ತದೆ. ಜೊತೆಗೆ ಉತ್ತಮ ವಾಗ್ಮಿಯೂ ಇರಬೇಕಾಗುತ್ತದೆ. ಕೀರ್ತನಗಳ ಪೀಠಿಕಾ ಭಾಗವು ಹರಿ ಕಥೆಯ ಪೂರ್ವರಂಗವಾಗಿರುತ್ತದೆ. ಇಲ್ಲಿ ಕೀರ್ತನಕಾ ರರೂ ಪಾಂಡಿತ್ಯ ಪೂರ್ಣ ಪ್ರವಚನಕಾರನಾಗಿರಬೇಕಾ ಗುತ್ತದೆ. ಒಂದು ಕೀರ್ತನವೆಂದರೆ ನವರಸ ಭರಿತವಾದ ನಾಟಕ ಪ್ರಯೋಗವೆ ; ಆದರೆ ಏಕ ಪಾತ್ರ ಪ್ರಯೋಗ. ಗಂಟೆಗಟ್ಟಲೇ ಒಬ್ಬನೇ ಕೀರ್ತನಕಾರ ಗೀತ, ಹಾಸ್ಯ ಕಥೆ–ಕಥಾನಕಗಳಿಂದ ಜನಸ್ತೋಮಕ್ಕೆ ಮನರಂಜನೆ ಒದಗಿಸುತ್ತ ಬೋಧೆಯನ್ನು ನೀಡುವ ಸಾಮರ್ಥ್ಯವೇನು ಅಲ್ಪವೇ?

ನಮ್ಮ ನಾಡಿನಲ್ಲಿ ಕೀರ್ತನ ಅಥವ ಹರಿಕಥೆಗೆ ಒಂದು ಭವ್ಯ ಪರಂಪರೆ ಇದ್ದರೂ ಅದು ವಂಶಪರಂ ಪರೆಯ ಬಳುವಳಿಯಾಗಿ ಬೆಳೆದು ಬಂದಿದೆಯಲ್ಲದೆ ಮಹಾ ವಿದ್ಯಾಲಯಗಳ ಪದವೀ ಪರೀಕ್ಷೆಗಳ ಕೇಂದ್ರ ಗಳ ಮುಖಾಂತರ ಅಲ್ಲ,

ಭದ್ರಗಿರಿ ಅಚ್ಯುತದಾಸರು ಆನುವಂಶಕತೆ ಹಾಗು ಪರಿಸರ–ಇವೆರಡರ ಬಳುವಳಿಯನ್ನೂ ಅಳವಡಿಸಿ ಕೊಂಡು ತಮ್ಮದೇ ಒಂದು ಸ್ವಂತಿಕೆಯನ್ನು ಬೆಳಸಿ ಕೊಂಡು ಬಂದ ಪ್ರತಿಭಾವಂತ ಪಂಡಿತರು. ಸಮಕಾಲೀನ ಪ್ರಜ್ಞೆಯನ್ನೂ ತಮ್ಮ ಹರಿಕಥೆ, ಕೀರ್ತನ, ಪ್ರವಚನ ಗಳಲ್ಲಿ ಹೆಜ್ಜೆ ಹೆಜ್ಜೆಗೆ ತೋರ್ಪಡಿಸುತ್ತಾರೆ. ಇಂದಿನ ರಾಜಕೀಯದ ಮೇಲೆ ಪಾರ್ಶ್ವಪ್ರಕಾಶವನ್ನೂ ಚೆಲ್ಲುತ್ತ ನಗೆಯ ಬೆಳಕು ಬೀರಿ , ನಯವಾದ ವಿಡಂಬನೆಯಿಂದ ನಮ್ಮ ಕಣ್ಣು ತೆರೆಯುತ್ತಾರೆ. ಇಂದಿನ ವೈಜ್ಞಾನಿಕ ಸಾಧನೆ, ಅಂತರಿಕ್ಷಯಾನ ಮಂಗಳಲೋಕದ ದಿಗ್ವಿಜಯಸಾಹಸ, ಚಂದ್ರಲೋಕದ ಮೇಲೆ ಮಾನವನ ವಾಮನ ಪಾದ ಸಕ್ಷೇಪ - ಈ ಎಲ್ಲ ಪ್ರಾಸಂಗೀಕ ಪ್ರಚಲಿತ ವಿಷಯಗಳೂ ಅವರ ಪ್ರಜ್ಞಾವಂತ ಅಡ್ಡಕತೆಗಳಾಗಿಬರುತ್ತವೆ. ಸಭಿಕ ರಲ್ಲಿ ಮಹಿಳೆಯರಿರುತ್ತಾರೆ., ಮುದುಕರಿರುತ್ತಾರೆ, ಯುವಕರಿರುತ್ತಾರೆ , ಮಕ್ಕಳಿರುತ್ತಾರೆ. ಅವರವರ ಬುದ್ಧಿಮಟ್ಟಕ್ಕೆ ನಿಲುಕುವಂತಹ, ಅವರವರ ಅನುಭವಕ್ಕೆ ರುಚಿಸುವಂತಹ ನಿದರ್ಶನಗಳನ್ನು ಕೊಡುವಲ್ಲಿ ಶ್ರೀ ಅಚ್ಯುತದಾಸರು ಅಪ್ರತಿಮರು. ಭಗವದ್ಗೀತೆ ಭಕ್ತಿ, ಕರ್ಮ , ಧ್ಯಾನ ಜ್ಞಾನ ಎಲ್ಲ ಮಾರ್ಗಗಳನ್ನೂ ನಿರ್ದೇ ಶಿಸುತ್ತದೆ. ಆದರೆ ಅಂತಿಮ ಗುರಿ ಒಂದೇ. ಇದ ಕ್ಕೊಂದು ಉದಾಹರಣೆ. ಅದು ಶ್ರೀ ಅಚ್ಯುತದಾಸನ ಸ್ವೋಪಜ್ಞ ಪ್ರಜ್ಞೆಗೇ ಮೀಸಲು. ವೈದ್ಯರೊಬ್ಬರು ನಾಲ್ಕು ಬಗೆಯ ರೋಗಿಗಳಿಗೆ ಅದೇ ಔಷಧದ ಮಾತ್ರೆ ಕೊಡುತ್ತಾರೆ. ( ನಾಲ್ವರ ರೋಗವು ಒಂದೆ ಬಗೆ.) ಆದರೆ ಒಬ್ಬ ಬಡವ ಅವನಿಗೆ ತುಳಸೀರಸ ದಲ್ಲಿ ತೆಗೆದುಕೊಳ್ಳಲು ಹೇಳುತ್ತಾರೆ; ಇದುಭಕ್ತಿ. ಮತ್ತೊಬ್ಬನು ಒಬ್ಬ ಅಧಿಕಾರಿ ಸ್ವಲ್ಪ ಶ್ರೀಮಂತ. ಅವನಿಗೆ ಜೇನುತುಪ್ಪದಲ್ಲಿ ತೆಗೆದುಕೊಳ್ಳಲು ಹೇಳುತ್ತಾರೆ.

(ಇದು ಕರ್ಮ ಯೋಗ) ಇನ್ನೊಬ್ಬ ಒಳ್ಳೇ ಶ್ರೀ ಮಂತ ರತ್ನಪಡಿ ವ್ಯಾಪಾರಸ್ಥ; ಅವನಿಗೆ ಕೇಶರದಲ್ಲಿ ತೆಗೆದುಕೊಳ್ಳಲು ಹೇಳುತ್ತಾರೆ. – (ಧ್ಯಾನಯೋಗ.) ಇನ್ನು ಕೊನೆಯವನೊ ಭಾರೀ ಬಂಡವಾಳದಾರ – ಆತನಿಗೆ ಕಸ್ತೂರಿಯಲ್ಲಿ ತೆಗೆದುಕೊಳ್ಳಲು ಹೇಳುತ್ತಾರೆ- (ಇದು ಮಾತ್ರ ಜ್ಞಾನಯೋಗ.) ಹೀಗೆ ಭಗವದ್ಗೀತೆ ಯಂತಹ ಆಧ್ಯಾತ್ಮ ವಿಷಯವನ್ನು ಜನತೆಯ ಅನುಭವದ ಭಾಷೆಯಲ್ಲಿ ತಿಳಿಯ ಹೇಳುವದು ಶ್ರೀ ಅಚ್ಯುತ ದಾಸರ ವೈಶಿಷ್ಟ್ಯ. ಇನ್ನೊಂದು ನಿದರ್ಶನ. ಅರ್ಜುನನಿಗೆ ಯುದ್ಧ ಬೇಡವಾಗಿದೆ. ಆದರೆ ಕ್ಷತ್ರಿಯನು ಯುದ್ಧವನ್ನು ಅಲ್ಲಗಳೆಯಬಾರದು. ಕ್ಷತ್ರಿಯನ ಸ್ವಭಾವ ಯುದ್ಧಮಾಡುವದು. ಬೇಕಾದರೆ ಅರ್ಜುನನು ರಾಜ್ಯಬೇಡವೆನ್ನಲಿ ಆದರೆ ಯುದ್ಧ ಬೇಡ ಎನ್ನಲಾಗದು. ಹೇಗೆಂದರೆ: ಹಟಮಾರಿ ಗೃಹಿಣಿ ಬೇಕಾದರೆ ತಾನು ಊಟ ಒಲ್ಲೆ ಎನ್ನಬಹುದು ಆದರೆ ಅಡುಗೆಮಾಡಲು ಒಲ್ಲೆ ಎನ್ನಲಾಗದು. ಎಂತಹ ಮಹಿಳಾಮನೋಜ್ಞ ಉಪಮೆ! ಇದು ಶ್ರೀ ಅಚ್ಯುತದಾಸರ ಕೀರ್ತನ – ಪ್ರವಚನಗಳ ವೈಶಿಷ್ಟ. ಅನುಭಾವದಂತಹ ಗಹನ ವಿಷಯುಗಳನ್ನು ನಮ್ಮ ನಮ್ಮ ಅನುಭವದ ಮಾತಿನಲ್ಲಿ ಮಂಡಿಸುವ ಅವರ ಪಾಂಡಿತ್ಯ ತಲೆದೂಗಿಸುತ್ತದೆ. ಇದಕ್ಕೆ ಅನೇಕ ನಿದರ್ಶನಗಳನ್ನು ಕೊಡಬಹುದು.

'ಯುದ್ಧ ವಿಶಾರದಾ: 'ಎಂದರೆ ಯುದ್ಧ ಭೂಮಿಯ ಅನುಭವ ಉಳ್ಳವರು ಎಂಬ ಮಾತನ್ನೂ ವಿವರಿಸುತ್ತ ಸೈದ್ಧಾಂತಿಕ ಪುಸ್ತಕೀಪಾಂಡಿತ್ಯಕ್ಕೂ ಅನುಭವದ ಪ್ರಾತ್ಯಕ್ಷಿಕೆಗೂ ಇರುವ ವ್ಯತ್ಯಾಸವನ್ನು ತಿಳಿಸಲು ಒಂದು ಉದಾಹರಣೆ ಕೊಡುತ್ತಾರೆ. ಒಬ್ಬ ಈಜುಗಾರ ತಜ್ಞನೊಬ್ಬನಿಂದ ಈಜುಶಾಸ್ತ್ರ ಕಲಿತನಂತೆ, ಕೊಳಕ್ಕೆ ಹೋಗಿ ಅಲ್ಲ, ತನ್ನ ಕೋಣೆಯಲ್ಲೆ ಕುಳಿತು. ಶಾಸ್ತ್ರೀಯ ಅಭ್ಯಾಸದಲ್ಲಿ ಫರ್ಸ್ಟ್‌ಕ್ಲಾಸ್ ಪಡೆದನಂತೆ! 'ಆದರೆ ನೀರಿನಲ್ಲಿ ಮುಳುಗಿದರೆ ಖಲಾಸ್'

ಇನ್ನೊಂದು ಉದಾಹರಣೆ! ಪ್ರಕೃತಿ, ಜೀವ, ಪುರುಷೋತ್ತಮ ತತ್ವಗಳನ್ನು ವಿವರಿಸಲು ಗಡಿಯಾರದ ಸಾದೃಶ್ಯ ಕೊಟ್ಟುಹೇಳುತ್ತಾರೆ. 'ಅಚಲೋsಯಂ ಸನಾತನ:'. ಗಡಿಯಾರದ ಅಂಕಿಗಳು ಅಚಲ, ಮುಳ್ಳುಗಳು ಚಂಚಲ! ಅಂಕಿಗಳೂ ಮುಳ್ಳಗಳೂ ಕೂಡಿಯೆ ಚಲಿಸ ತೊಡಗಿದರೆ? ವಾಹನದೊಡನೆ ರಸ್ತೆಯು ಓಡಿದಂತಾಗುತ್ತದೆ ಅಷ್ಟೇ. ಈಪ್ರಕೃತಿ ಸೆಕೆಂಡಿನಮುಳ್ಳಿನಂತೆ ಅತಿ ಚಚಂಲವಾಗಿ ವೇಗದಿಂದ ಚಲಿಸುತ್ತದೆ. ಜೀವದಂತಿರುವ ಮಿನೀಟಿನಮುಳ್ಳು ಸೆಕೆಂದಿನಮುಳ್ಳಿಗಿಂತ ಸ್ವಲ್ಪ ಸ್ಥಿರ ಆದರೆ ತಾಸಿನಮುಳ್ಳು ಸು-ಸ್ಥಿರ! ಆದರೆ ಯಾನವು ಅನುಮೇಯ ವಾಗುವುದೇಲ್ಲ, ಇದರಿಂದ ಸನಾತನ ಅಚಲತತ್ವದ ಕಲ್ಪನೆ ನಮಗೆ ಬರುತ್ತದೆ.

ಈ ಮಾತಿನ ಮುತ್ತುಗಳ ಕಾರಣ ನೋಡಿ:

'ನಿಷ್ಕಾಮ ಬೇಕು ಆದರೆ ನಿಷ್ಕ್ರಿಯೇ ಸಲ್ಲದು'

'ಜಡತೆಯೆ ಶಾಂತಿ ಅಲ್ಲ;

'ನಿರ್ವಾಣ ನಾಗಬೇಕು, ನಿರ್ವಿಣ ನಾಗಬಾರದು'.

'ದುರಾಲೋಚನೆಬೇಡ, ದೂರಾಲೋಚನೆಬೇಕು'.

'ಈಶ್ವರ–ನಶ್ವರಗಳಭೇದ ಅರಿಯಬೇಕು.'

'ದನಕಾಯುವ ಕೃಷ್ಣನಿಗೆ ಕುದುರೆ ಹೊಡೆಯುವಾಗ ಪ್ರಮೋಶನ್ ಆಯಿತು'.

'ಮದುವೆಮುಂಚೆ ಮೃತನಾದ ಮದುವಣಿಗನ ಸಮಾರಂಭದ ಸಾಮಾನುಗಳು ಆತನ ವೈಕುಂಠ ಆರಾಧನೆಗೆ ಉಪಯೋಗ ಬಿದ್ದುವೆಂದು ಅದು ಉಳಿತಾಯ ಯೋಜನೆ ಎನ್ನಲಾದೀತೆ'?

ನಮ್ಮ ಅನುಭವದ ಭಾಷೆಯ 'ಈಡಿಯಂ'ನಲ್ಲೆ ಅನುಭಾವದ ಮಾತನ್ನು ಹೇಳುವ ಈ ವೈಖರಿ ಅಚ್ಯುತ ದಾಸರಿಗೇಮೀಸಲು–ಬಿಕ್ಕೆ ಬೇಡುತ್ತಿದ್ದ ಒಬ್ಬ ಕುರುಡ. ಭಿಕ್ಷಕನ ತಟ್ಟೆಯಲ್ಲಿ ಹಾಕಿದ ಒಂದು ನಾಣ್ಯವು ಪುಟಿದು ನೆಲದಮೇಲೆ ಬಿದ್ದಾಗ ಆ ಭಿಕ್ಷುಕ ಅದನ್ನೆತ್ತಿ ತಟ್ಟೆಯಲ್ಲಿ ಹಾಕಿಕೊಂಡ. ಕೂಡಲೆ ನಾಣ್ಯ ಹಾಕಿದವನಿಗೆ ಸಂಶಯ ಬಂತು. 'ಯೇ! ಲುಚ್ಚಾ! ನಿನಗೆ ಕಣ್ಣಿದ್ದೂ ಬಿಕ್ಕೆ ಬೇಡುತೀಯಾ?' ಎಂದು ಗರ್ಜಸಿದ.'ಇಲ್ಲ ಸಾರ್ ಈ ಜಾಗೆಯಲ್ಲಿ ಕೂಡುವಾತ ಇಂದು ಬಂದಿಲ್ಲ. ಅದಕ್ಕಾಗಿ ನಾನೇ ಅವನ ಜಾಗೆಯಲ್ಲಿ ಕುಳಿತುಕೊಂಡೆ 'ಎಂದು ಉತ್ತರಿಸಿದ 'ಯಾಕೆ? ಆತನೆಲ್ಲಿ?', ಎಂದು ಕೇಳಿದರೆ 'ಆತ ಸಿನೇಮಾಕ್ಕೇ ಹೋಗಿದ್ದಾನೆ' ಎಂದು ಕಪಟೀ ಕುರುಡ ಉತ್ತರ ಕೊಟ್ಟನಂತೆ.

ಇಂತಹ ಮಾರ್ಮಿಕ ಮನೋರಂಜಕ ಬೌದ್ಧಿಕ ಉಪಕಥೆ ಅಡ್ಡಗತೆಗಳಿಂದ ಅಚ್ಯುತದಾಸರು ತಮ್ಮ ಪ್ರವಚನದಲ್ಲಿ ಜೀವತುಂಬಿ ಸುಲಲಿತಗೊಳಿಸಿ ಹೇಳುತ್ತಾರೆ. ಇದರಿಂದ ಬೆಟ್ಟದಂತಹ ತತ್ವ ಬೆಣ್ಣೆಯಂತೆ ಹಗುರಾಗುತ್ತದೆ.

ಬೆಳಿಗ್ಗೆ ಪ್ರವಚನ ಸಂಜೆ ಹರಿಕಥೆ ಇದು ಅಚ್ಯುತ ದಾಸರ ವೈಶಿಷ್ಟ್ಯ. ಪ್ರವಚನ Classಗಾಗಿ, ಹರಿಕಥೆ massಗಾಗಿ. ಪ್ರವಚನ ಸಪ್ತಾಹದಲ್ಲಿ ಭಗವದ್ಗೀತೆಯ ಒಂದು ಅಧ್ಯಾಯದ ನಾಲ್ಕೈದು ಶ್ಲೋಕಗಳನ್ನು ಮಾತ್ರ ಹಿಂಜಿ ಹಿಂಜಿ ಹೇಳಿದರೆ ಕೀರ್ತನ ಸಪ್ತಾಹದಲ್ಲಿ ಅಖಂಡ ಮಹಾಭಾರತವನ್ನೇ ಹೇಳುತ್ತಾರೆ. ಇವರ ಪ್ರವಚನ. ಕೀರ್ತನಗಳಲ್ಲಿ ಮರಾಠೀ ಸಂತರ ಅಭಂಗಗಳು ಜ್ಞಾನೇಶ್ವರೀ ಓವಿಗಳು, ಕನ್ನಡಕುಮಾರವ್ಯಾಸ ದಾಸಸಾಹಿತ್ಯ ವಚನ ವಾಙ್ಮಯ, ಸಂಸ್ಕೃತ ವೇದ ವಾಙ್ಮಯ ಎಲ್ಲವೂ ಪ್ರಭೂತವಾಗಿ ಸೂರೆಗೊಂಡಿರುತ್ತವೆ.

ಧಾರವಾಡಲ್ಲಿ ಅವರ ರಾಮಾಯಣ ಕೀರ್ತನ ಸಪ್ತಾಹವೊಂದನ್ನು ಉದ್ಘಾಟಿಸುವ ಸುಯೋಗ ನನಗೆ ಒದಗಿತ್ತು, ಮಿತ್ರ ಕಾಮತರ ಸದಿಚ್ಛೆಯಿಂದಾಗಿ. ನನ್ನ ಪ್ರಾಸ್ತಾವಿಕ ಮಾತಿನಲ್ಲಿ ಕುವೆಂಪು ಅವರ ರಾಮಾಯಣದರ್ಶನದಲ್ಲಿ ನಿರೂಪಿತವಾದ ಲಕ್ಷ್ಮಣನ ಪಾತ್ರದ ಸಂದರ್ಭವನ್ನು ಪ್ರಸ್ತಾಪಿಸಿ ಆತ ಪ್ರಜಾಶಕ್ತಿಯ ಪ್ರತಿನಿಧಿಯಾಗಿ, ರಾಮನು ಪಿತೃವಾಕ್ಯದಂತೆ ವಿಪಿನ ಕೆಯ್ತುರುವುದು ಯಾವ ನ್ಯಾಯ—ಎಂದು ಪ್ರಶ್ನಿಸಿದ ಪ್ರಸಂಗವನ್ನು ಎತ್ತಿತೋರಿದರೆ ಶ್ರೀ ಅಚ್ಯುತದಾಸರು ಕೂಡ ತಮ್ಮ ರಾಮಾಯಣ ಉಪೋದ್ಘಾತವನ್ನು ಕುವೆಂಪು ರಾಮಾಯಣದರ್ಶನವನ್ನು ಉದ್ಧರಿಸುತ್ತಲೆ ವಿಸ್ತರಿಸಬೇಕೆ? ಅವರ ಈ ಸಮಯ ಸ್ಫೂರ್ತಿಗೂ, ಅವರ ಅದ್ಬುತ ಸ್ಮರಣಶಕ್ತಿಗೂ ಚಕಿತನಾದೆ. ( ನೆನಪೆ ನಮ್ಮ ಬಂಡವಾಳ ಎಂದು ದಾಸರು ಇನ್ನೊಂದು ಸಂದರ್ಭದಲ್ಲಿ ನನ್ನೊಡನೆ ನುಡಿದುದುಂಟು. ) ಅವರ ಪ್ರವಚನ, ಕೀರ್ತನಗಳಲ್ಲಿ ಉದಾಹರಿಸುವ ಕಾವ್ಯಸಾಹಿತ್ಯ ಭಾಂಡಾರವನ್ನು ಮನದಂದರೆ ಅದ್ಭುತವೆನಿಸುತ್ತದೆ. ಎಷ್ಟು ಮಾರ್ಮಿಕವಾಗಿ ಪುರಂದರದಾಸರನ್ನು ಉದಾಹರಿಸುತ್ತಾರೆ.! ತಂಬೂರಿಮೀಟಿದವನು ಭವಾಬ್ಧಿಯನ್ನು ದಾಟುತ್ತಾನಂತೆ. ಅಚ್ಯುತದಾಸರು ಉದಾಹರಿಸುವ ಪುರಂದರದಾಸರು—

‘ತಂಬೂರಿ ಮೀಟಿದವ ಭವಾಬ್ಧಿ ದಾಟಿದವ
ತಾಳವನು ತಟ್ಟಿದವ ದುರಿತವನು ಅಟ್ಟಿದವ
ಗೆಜ್ಜೆಯನು ಕಟ್ಟಿದವ ಖಳರೆದೆಯ ಮೆಟ್ಟಿದವ
ಗಾಯನವ ಪಾಡಿದವ ವೈಕುಂಠಕೋಡಿದವ-’

ತಂಬೂರಿ ಮೀಟುತ್ತ, ತಾಳತಟ್ಟುತ್ತ, ಗೆಜ್ಜೆಯಕಾಲು ಕುಣಿಸುತ್ತ ಗಾನಪಾಡುತ್ತ ಹರಿಸಂಕೀರ್ತನೆ ಮಾಡುವ ಹರಿದಾಸರ ಚಿತ್ರ ಕಣ್ಮುಂದೇ ನಿಲುತ್ತದೆ. ದಾಸವಾಣಿ ಕುಮಾರವ್ಯಾಸ ವಾಣಿ ಭಕ್ತಿಯ ಉತ್ಕಟತೆಯಲ್ಲಿ ಎರಡೂ, ಒಂದೇ. ಕೇಳಿ;

ನಂಬು ನಾರಾಯಣನ ನಂಬು ನರಹರಿಯ
ನಂಬಿದ ಭಕ್ತರ ಕುಟುಂಬ ಸಾರಥಿಯ ।

ಎಂಬುದು ಕನಕದಾಸ ವಾಣಿಯಾದರೆ—

‘ ನಂಬಿದವರಿಗೆ ತನ್ನ ತೆತ್ತಿಹ
ನೆಂಬ ಬಿರುದನು ಮರೆದು ಭಕ್ತಕು
ಟುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರಿ॥

ಎಂಬುದು ಕುಮಾರ ವ್ಯಾಸವಾಣಿ!

ಇಂತಹ ಪಾಂಡಿತ್ಯ , ಇಂತಹ ಪ್ರೌಢಿಮೆ! ಆದರೆ ಎಂತಹ ಸದ್ವಿನಯ , ಎಂತಹ ಸೌಜನ್ಯ ! ೭೩ರಲ್ಲಿ ಶ್ರೀಅಚ್ಯುತದಾಸರು ಧಾರವಾಡಕ್ಕೆ ಬಂದಾಗ ನನಗೆ ಅವರ ಪರಿಚಯ. ನಾಲ್ಕು ವರ್ಷಗಳ ಮೇಲೆ ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ಅವರನ್ನು ಕಂಡಾಗ ನನ್ನನ್ನು ಗುರುತಿಸುವರೊ ಇಲ್ಲವೋ— ಎಂಬ ಅನುಮಾನಕ್ಕೆ ಅವಕಾಶ ಉಳಿಯದಂತಾಯಿತು. ಅವರು ಆತ್ಮೀಯಭಾವದಿಂದ ನನ್ನನ್ನು ಕಂಡರು. ಕಂಡರಷ್ಟೆ ಅಲ್ಲ ಮನೆಗೆ ಆಮಂತ್ರಿಸಿದರು. ಆಮಂತ್ರಿಸಿದರಷ್ಟೆ ಅಲ್ಲ ಸಮೀಚೀನ ಉಪಹಾರ, ತಮ್ಮ ಸಾಹಿತ್ಯಕೃತಿಯ ಉಪಾಯನ ನೀಡಿದರು. ವಿನಯ, ಔದಾರ್ಯ, ಮಮತಾಭಾವಗಳು ಪ್ರತಿಭೆ, ಪಾಂಡಿತ್ಯ , ಕಲಾತ್ಮಕತೆಯೊಡನೆ ಕೂಡಿರಬಲ್ಲವೆ? ಹೌದು, ಕೂಡಿರಬಲ್ಲವು, ಆ ವ್ಯಕ್ತಿಗೆ ಅಹಂಕಾರದ ಸೋಂಕಿಲ್ಲದಿದ್ದರೆ. ಶ್ರೀ ಅಚ್ಯುತದಾಸರಿಗೆ ಅಹಂಕಾರದ ಸೋಂಕಿಲ್ಲ.

ಶ್ರೀ ಅಚ್ಯುತ ದಾಸರ ಲೋಕಪ್ರಿಯತೆಗೆ ಅವರ ಸಂಗೀತದ ಮೇಲ್ಮೆ, ಸಾಹಿತ್ಯದ ಪ್ರಭುತ್ವ, ವಾಗ್ವೈಭವಗಳಿಗಿಂತ ಹೆಚ್ಚಾಗಿ ಅವರಲ್ಲಿರುವ ನಿರಹಂಕಾರ ಭಾವ, ಇವ ನನ್ನವ, ಇವನನ್ನವ’ಎಂಬ ವಿಶಾಲ ಮನೋಭಾವಗಳೆ ಕಾರಣವಾಗಿರಬೇಕು. ಅಂತೆಯೆ ಬೆಂಗಳೂರಿನಿಂದ ಬದರಿಯವರೆಗೆ ಸಂಚಾರಮಾಡಿ ಹೋದ ಹೋದಲ್ಲೆಲ್ಲ ತಮ್ಮ ಭಕ್ತಪರಿವಾರವನ್ನು ಬೃಹದಾಕಾರವಾಗಿ ಹಬ್ಬಿಸುತ್ತ ನಡೆದಿದ್ದಾರೆ. ಭಾಷೆಗಳ, ಪ್ರಾಂತಗಳ ಗೋಡೆಗಳು ಇವರಿಗೆ ಅಡ್ಡವಾಗಿ ನಿಂತಿಲ್ಲ. ಅಂತೆಯೆ ಮಹಾರಾಷ್ಟ್ರ, ಗೋಮಾಂತಕ, ಕೇರಳ, ಆಂಧ್ರ,

ತಮಿಳ್ನಾಡು, ಉತ್ತರ ಭಾರತ ಎಲ್ಲೊಲ್ಲೂ ಸ್ನೇಹ ಮಯ ಸ್ವಾಗತ ಪಡೆದಿದ್ದಾರೆ. ಇದಲ್ಲದೆ ಇವರು ಸ್ವತ: ಬಹು ಭಾಷಾ, ವಿಶಾರದರು. ಕನ್ನಡ, ಕೊಂಕಣಿ, ತುಳು, ಮರಾಠಿ, ಹಿಂದಿ, ಭಾಷೆಗಳಲ್ಲಿ ಸುಲಲಿತವಾಗಿ ಸುಲಭವಾಗಿ ಕೀರ್ತನಮಾಡಬಲ್ಲರು. ಅಂತೆಯೇ ಬಹು ಭಾಷಾ ಹೃದಯಕೋಟೆಗಳನ್ನು ಕೈವಶಮಾಡಿಕೊಳ್ಳ ಬಲ್ಲರು.

ಇವರ ಕೀರ್ತನಗಳು ಅಕ್ಕರಿಗರಲ್ಲದ ಜನರನ್ನು ಮೆಚ್ಚಿಸುವಂತಹವು. ಮುಖ್ಯವಾಗಿ ಅಚ್ಯುತದಾಸರು ಯಕ್ಷಗಾನ ಪ್ರಯೋಗಗಳಲ್ಲಿ ಚಿರಪರಿಶ್ರಮವುಳ್ಳವರು. ತಮ್ಮ ಕೀರ್ತನ ಜ್ಞಾನ ಭಾಂಡಾರಕ್ಕೆ ಮುಖ್ಯಪೋಷಣೆ ಯಕ್ಷಗಾನದಿಂದಲೇ ಎಂದು ದಾಸರು ಪ್ರಾಂಜಲ ಮನಸ್ಸಿನಿಂದ ಹೇಳುತ್ತಾರೆ. ಆದರೆ ಮಹಾನಗರಗಳಲ್ಲಿ ಸುಶಿಕ್ಷಿತ ರಸಿಕರೆದುರು ಪ್ರವಚನ, ಕೀರ್ತನಗಳನ್ನು ಮಾಡುತ್ತಿರುವಾಗ ಇವರ ವಾಗ್ವೈಖರಿಯನ್ನು ಅನುಭವಿಸಿದವರಿಗೆ ವಿದ್ಯುತ್ತಿನಿಂದ ಕೂಡಿದ ಇವರ ವಿದ್ವತ್ತು ಕೇವಲ ಯಕ್ಷಗಾನದ ಸ್ವಿಚ್‌ವುಳ್ಳದ್ದು ಎಂದರೆ ನಂಬಿಗೆ. ಯಾಗದು. ವಿಜ್ಞಾನವೇದಾಂತಗಳನ್ನು ವ್ಯಾಖ್ಯಾನಿಸುವಾಗ ಇವರು ತೋರುವ ಅತ್ಯಾಧುನಿಕ ಪ್ರಜ್ಞೆ ಬೆರಗು ಗೊಳಿಸುವಂತಿರುತ್ತದೆ. 'ವಿಜ್ಞಾನವು ಪ್ರಯೋಗದಿಂದ ಸತ್ಯವನ್ನು ಹುಡುಕಲು ಯತ್ನಿಸಿದರೆ ವೇದಾಂತವು ಸತ್ಯದಿಂದ ಪ್ರಯೋಗಕ್ಕೆ ಇಳಿಯುತ್ತದೆ.' ಎಂದಾಗ, ಅಗಾಧ ಬಿಡುತ್ತೇವೆ. ಇಲ್ಲವೆ 'ಅಜ್ಜನಮೇಲೆ ಮಮ್ಮಗನಿಗಿರುವ ಸ್ವಾತಂತ್ರ್ಯ ಮಗನಿಗಿರುವುದಿಲ್ಲ' ಎಂದು ಹೇಳುವಾಗ ಅವರಿಗಿರುವ ಮೂರು ತಲೆಮಾರಿನ generation–gapನ ತತ್ವಪರಿಚಯ ನಮ್ಮನ್ನು ದಂಗುಬಡಿಸುತ್ತದೆ.

ದಾಸರು ಹರಿಕಥೆ ಮಾಡುವಾಗಲೂ ನಿರಾಡಂಬರ ಎದ್ದು ಕಾಣುತ್ತದೆ. ಭರ್ಜರೀ ಹಾರಗಳು, ಸೊಂಟಕ್ಕೆ ಬಿಗಿದ ಜರಿಉತ್ತರೀಯ, ಕೀರ್ತನಕಾರರ ಶಿರಸ್ತ್ರಾಣ ಇವಾವುದರ ಸೋಂಕಿಲ್ಲ. ಸರಳವಾಗಿ ಕುಳಿತಲ್ಲಿಯೇ ತಿಳಿಯಾಗಿ ಹೇಳುತ್ತಾರೆ. ತಲೆಗೆ ಒಂದು ರುಮಾಲು, ಮೈಗೆ ಶುಭ್ರಬಟ್ಟೆ ಅಷ್ಟೆ. (ಪ್ರವಚನ ಕಾಲಕ್ಕೆ ಇದೂ ಇರುವದಿಲ್ಲ. ಬರಿ ಒಂದು ಧೋತರದ ಹೊದಿಕೆ, ಇನ್ನೊಂದು ಧೋತರದ ಉಡಿಗೆ.)

ಗೃಹಸ್ಥಾಶ್ರಮಿಯಾಗಿಯೂ ದಾಸರು ನಡೆಸುತ್ತಿರುವ ಯೋಗಜೀವನ ಬಹುಜನಕ್ಕೆ ಒಂದು ಆದರ್ಶವಾಗಬಲ್ಲದು. ಇವರ ಸಹಧರ್ಮಿಣಿಯೂ ಇವರೊಂದಿಗೆ ಅರ್ಪಿತ ಸೇವಾ ಜೀವನ ನಡೆಸುತ್ತಾರೆ. ದಂಪತಿಗಳಿಬ್ಬರೂ ಸೌಜನ್ಯ ಸರಳತೆಯ ಸಾಂಗತ್ಯಗಳ ಮಾದರಿಯಾಗಿದ್ದಾರೆ.

ಬೆಂಗಳೂರಿನಲ್ಲಿ ಇವರು ಕಟ್ಟಿದ ದಾಸಾಶ್ರಮ ಆಧುನಿಕತೆಯ ವಾತಾವರಣದಲ್ಲಿ ಸನಾತನವನ್ನು ಎತ್ತಿ ಸಾರುತ್ತದೆ. ಬೆಂಗಳೂರು ರಾಜಾಜಿನಗರಕ್ಕೆ, ಬೆಂಗಳೂರು ರಾಜಧಾನಿಗೆ, ಕನಾಟಕಕ್ಕೇ ಅದೊಂದು ಭೂಷಣ.

ದಾಸರ ಮನೆ ಆತಿಥ್ಯಕ್ಕೆ ಮನೆಯಾಗಿದೆ. ಈ ಒಂದು ದೊಡ್ಡ ಮನೆ ಒಂದು ಗಿಡವಾಗಿದೆ. ಸೋದರರೆಲ್ಲರೂ ಒಂದೊಂದು ಗೂಡು ಮಾಡಿಕೊಂಡು ವಿಭಕ್ತರಾಗಿಯೂ ಅವಿಭಕ್ತರಾಗಿದ್ದಾರೆ, ಭಗವದ್ಭಕ್ತರಾಗಿ, ಅಚ್ಯುತದಾಸರೇ ಹಿರಿಯರು. ಇವರ ಚಿಕ್ಕ ಸೋದರ ಭದ್ರಗಿರಿ ಕೇಶವದಾಸರು 'ಭದ್ರಗಿರಿ' ವಂಶದ ಬಾವುಟವನ್ನು ಅಮೇರಿಕೆಯಲ್ಲಿ ಹಾರಾಡಿಸಿದ್ದಾರೆ. ಇಂಗ್ಲೀಷ್‌ನಲ್ಲಿ ಹರಿಕಥೆ ಮಾಡುವ ಅವರ ಶೈಲಿ ಹರಿಕಥಾ ಸಂಪ್ರದಾಯದಲ್ಲೇ ಒಂದು ಕ್ರಾಂತಿಕಾರೀ ಬೆಳವಣಿಗೆಯ ಪ್ರಕರಣವಾಗಿದೆ.

ಕಾಶೀಮಠದ ಸುಧೀಂದ್ರ ತೀರ್ಥರಲ್ಲಿ ಶಿಷ್ಯತ್ವ ವಹಿಸಿ ಅಧ್ಯಯನ ಮಾಡಿ ಶ್ರೀ ಅಚ್ಯುತದಾಸರು ಇಂದು ಗುರುವಿನ ಹೆಸರನ್ನು ಅಜರಾಮರಗೊಳಿಸಿದ್ದಾರೆ. ಗುರುವಿನ ಗುಲಾಮನಾಗಿರುವದು ಹಳೆಯ ರೂಢಿ. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಮಾತನ್ನು ನೆನಪಿಗೆ ತರುವುದು ಮೆಚ್ಚುವ ಹೊಸ ರೂಢಿ.

ದಾಸರು ಸಾಹಿತ್ಯಕ್ಕೆ, ಸಂಗಿತಕ್ಕೆ, ಕನ್ನಡ ನಾಡಿನ ಕೀರ್ತನ ಪ್ರಪಂಚಕ್ಕೆ ಸಲ್ಲಿಸಿರುವ ಸೇವೆ ಸಾರ್ಥಕವೆನಿಸಿದೆ. ಜೊತೆಗೆ ತಮ್ಮ ಕೃತಿಗಳ ಪ್ರಕಾಶನದ ಮೂಲಕ ಆಧ್ಯಾತ್ಮ ಅಭ್ಯಾಸಿಗಳಿಗೆ ಉಪಕಾರ ಮಾಡಿದ್ದಾರೆ. ತನ್ಮೂಲಕ ಈಗ ಕಟ್ಟುತ್ತಿರುವ 'ಭಾರತ ಜ್ಯೋತಿ' ಟ್ರಸ್ಟಿಗೆ ಮಹತ್ ಕಾಣಿಕೆ ಸಲ್ಲಿಸಿದ್ದಾರೆ. ಇವರ ಎಣಿಕೆಯಂತೆ ಭಾರತ ಜ್ಯೋತಿ ಟ್ರಸ್ಟ್ ಐವತ್ತು ಲಕ್ಷದ ಗುರಿ ಮುಟ್ಟಿದರೆ ಕರ್ನಾಟಕವಷ್ಟೇ ಅಲ್ಲ ಭಾರತವೇ ಧನ್ಯತೆ ಪಡೆದೀತು.

ಅಚ್ಯುತದಾಸರ ಅಚ್ಯುತ, ಅರ್ಪಿತ ಸೇವೆ ಈ ದಿಸೆಯಲ್ಲಿ ಯಶಸ್ವಿಯಾಗಿ ಮುನ್ನಡೆದಿರುವದು ಆಶಾ ಲಕ್ಷಣ.

# 'ಶ್ರೀಸಾಮಾನ್ಯ' ಹಿತಕಾರಿ - ನಮ್ಮ ಹಿಂದೂ ಸಂಸ್ಕೃತಿ

ಡಾ. ದಯಾನಂದ ನರಸಿಂಹ ಶಾನಭಾಗ

ಎಂ. ಎ. ಪಿಎಚ್. ಡಿ.

ಸಂಸ್ಕೃತ ರೀಡರ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಇದು 'ವಾದ' ಗಳ ಯುಗ. ಜಗತ್ತಿನ ಮಾನವರಿಗೆ ಸುಖ–ಸಮೃದ್ಧಿ–ಶಾಂತಿ ನೀಡುವ ಘೋಷಣೆ ಮಾಡುತ್ತ ಅನೇಕ 'ವಾದ' ಗಳು ಪಾಶ್ಚಿಮಾತ್ಯ ದೇಶಗಳಲ್ಲಿ ಹುಟ್ಟಿಕೊಳ್ಳುತ್ತಿರುವದನ್ನು ಕಳೆದ ಶತಮಾನದ ಆದಿಯಿಂದಲೂ ನಾವು ಕಾಣುತ್ತಿದ್ದೇವೆ. 'ಫ್ರೆಂಚಕ್ರಾಂತಿ', 'ಔದ್ಯೋಗಿಕ ಕ್ರಾಂತಿ' ಗಳಾಗಿ "ಸ್ವಾತಂತ್ರ್ಯ–ಸಮತೆ–ಬಂಧುತ್ವ"ದ ಘೋಷಣೆಯೊಡನೆ 'ಪ್ರಜಾಪ್ರಭುತ್ವ' ವಾದವು ಹುಟ್ಟಿಕೊಂಡಿತು. ಆದರೆ ಪರಿಣಾಮ ಮಾತ್ರ ನಿಜವಾದ ಪ್ರಜೆಯಾದ ಶ್ರೀ ಸಾಮಾನ್ಯನಿಗೆ ಮಾತ್ರ ಸ್ವಾತಂತ್ರ್ಯ–ಸಮತೆ–ಬಂಧುತ್ವ ಗಳಲ್ಲಿ ಯಾವುದರ ದರ್ಶನವೂ ಆಗಲಿಲ್ಲ. ಬಂಡವಳ ಶಾಹಿ ಬೆಳೆದು ಆತನ ಶೋಷಣೆಯಾಗಿ, ದುಃಖ–ದಾರಿದ್ರ್ಯಗಳ ಮಹಾಸಾಗರದಲ್ಲಿ ಅವನು ಮುಳುಗುವಂತಾಯಿತು. ಹಾಗೆ ಮುಳುಗಿದವನ ಉದ್ಧಾರಕ್ಕಾಗಿ 'ರಶಿಯನ್ ಕ್ರಾಂತಿ' ಯ ಅನಂತರ 'ಸಮಾಜವಾದ' 'ಸಾಮ್ಯವಾದ' ಹುಟ್ಟಿಕೊಂಡವು. ಆದರೆ ಅದರಿಂದಲೂ ಅವನಿಗೆ ಸುಖ–ಸಮೃದ್ಧಿಗಳ ಅನುಭವವಾಗಲಿಲ್ಲ. ಅವನ ಜೀವನ ಮತ್ತಷ್ಟು ದಯನೀಯವಾಯಿತು. ಮಾನವನಿಗೆ ಮಾನವನಾಗಿ ಬಾಳಲು ಬೇಕಾಗುವ ಕನಿಷ್ಠಮಟ್ಟದ ಸ್ವಾತಂತ್ರ್ಯವನ್ನೂ ಕೂಡ ಕಳೆದುಕೊಂಡು ಪಶುಗಳ - ಜೀವನಕ್ಕಿಂತಲೂ ನಿಕೃಷ್ಟವಾದ ಜೀವನ ಅವನದಾಯಿತು. ಹೀಗೆ ಶ್ರೀಸಾಮಾನ್ಯನ ಉದ್ಧಾರದ ಡಂಗುರ ಸಾರಿ ಹುಟ್ಟಿಕೊಂಡ ವಾದಗಳ ಮೂಲಕ ಅವನ ಜೀವನ ಕೆಳಮಟ್ಟಕ್ಕೆ ಇಳಿಯತೊಡಗಿತೇ ವಿನಃ ಎಳ್ಳಷ್ಟೂ ಮೇಲೇಳಲಿಲ್ಲ. ಇದನ್ನು ಕಂಡುಕೊಂಡ ವಿಚಾರವಂತರು ಇಂದು ಭಾರತದ ಕಡೆ ತಮ್ಮ ದೃಷ್ಟಿಯನ್ನು ಹೊರಳಿಸಿದ್ದಾರೆ.

ಭಾರತ ಇದೊಂದು ಸನಾತನರಾಷ್ಟ್ರ. ಅದೆಷ್ಟೋ ಸಾವಿರ ವರುಷಗಳಿಂದ ಇಲ್ಲಿ ಸಮೃದ್ಧ ಜೀವನ ಸಾಗಿ ಬಂದಿದೆ. ಇಲ್ಲಿ ಸಾಮ್ರಾಜ್ಯಾಧಿಪತಿಯಿಂದ ಹಿಡಿದು ಶ್ರೀಸಾಮಾನ್ಯನ ವರೆಗೆ ಎಲ್ಲರೂ ಸುಖ–ಶಾಂತಿಯಿಂದ ಬಾಳುತ್ತಿದ್ದ ದೃಶ್ಯ ಇತಿಹಾಸ ಕಂಡಿದೆ. ಇದರ ವಿಸ್ತೃತ ವರ್ಣನೆ ಇತಿಹಾಸದ ಪುಟಗಳಲ್ಲಿ ಮೆರೆಯುತ್ತಿದೆ. ಹೀಗೆ ಎಲ್ಲರೂ ಭಾರತದಲ್ಲಿ ಸುಖ–ಸಮೃದ್ಧಿಗಳಿಂದ ಬಾಳುವಂತಾದ ಗುಟ್ಟೇನು? ಎಂಬುದನ್ನು ತಿಳಿಯಲು ಇಂದು ಸಮಸ್ತ ಮಾನವಜನಾಂಗದ ಹಿತ ಬಯಸುವವರು ಉತ್ಸುಕರಾಗಿದ್ದಾರೆ.

ಆ ಗುಟ್ಟು ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಅಡಗಿದೆ. ಹಿಂದೂ ಸಂಸ್ಕೃತಿಯು ಮನುಷ್ಯನ ಸರ್ವಾಂಗೀಣ ವಿಚಾರ ಮಾಡಿ ಅವನ ಜೀವನಕ್ಕೆ ಉಚ್ಚ ಧ್ಯೇಯೋದ್ದೇಶಗಳನ್ನು ಒದಗಿಸಿತು. ಮನುಷ್ಯ ಒಬ್ಬಂಟಿಗನಾಗಿ ಬಾಳಲಾರ; ಆತ ಸಮಾಜಜೀವಿ. ಸಮಾಜದ ಘಟಕನಾಗಿಯೇ ಆತ ಸುಖವನ್ನು ಬಯಸಬೇಕು; ಶಾಂತಿಯನ್ನು ಇಚ್ಛಿಸಬೇಕು; ಇಡಿಯ ಸಮಾಜದ ಏಳ್ಗೆಯಲ್ಲಿಯೇ ತನ್ನ ಏಳ್ಗೆಯನ್ನು ಕಾಣಬೇಕು. ಆದುದರಿಂದಲೇ ಎಂದೆಂದಿಗೂ ಹಿಂದುಗಳ ಪ್ರಾರ್ಥನೆ ಇದಾಗಿದೆ:–

ಸರ್ವೇಽತ್ರ ಸುಖಿನಃ ಸಂತು ಸರ್ವೇ ಸಂತು ನಿರಾಮಯಾಃ।

ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖಮಾಪ್ನುಯಾತ್॥

"ಎಲ್ಲರೂ ಸುಖಿಗಳಾಗಲಿ; ಎಲ್ಲರೂ ಆರೋಗ್ಯವಂತರಾಗಲಿ; ಎಲ್ಲರೂ ಒಳಿತನ್ನೇ ಕಾಣಲಿ; ಯಾರೂ ದುಃಖ ಪಡುವದು ಬೇಡ."

ಇದು ಕೇವಲ ಒಣಪ್ರಾರ್ಥನೆಯಲ್ಲ; ಈ ಪ್ರಾರ್ಥನೆಯನ್ನು ಸಾಕಾರ ಮಾಡಲು ಇಡಿಯ ವಿಶ್ವವನ್ನೇ ತನ್ನ ಕುಟುಂಬವೆಂದು (ವಸುಧೈವ ಕುಟುಂಬಕಮ್) ತಿಳಿದು ಹಿಂದುವು ಜೀವನ ಸಾಗಿಸಿದನು. ಏಕೆಂದರೆ, ಕೌಟುಂಬಿಕ ಸುಖ–ದುಃಖಗಳಲ್ಲಿ ಒಂದಾಗಿ ಇಡಿಯ ಕುಟುಂಬದ ಅಭಿವೃದ್ಧಿಗಾಗಿ ಹೆಣಗುವ ಮಾತು ಯಾವುದೇ ಮನುಷ್ಯನಿಗೂ ಕೂಡಲೆ ಅರ್ಥ

ವಾಗುತ್ತದೆ. "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ", "ಕೃಣ್ವಂತೋ ವಿಶ್ವಮಾರ್ಯಮ್", "ಚಿಂತಾ ಕರಿತೋ ವಿಶ್ವಾಚೀ" ಎಂಬ ಮಾತುಗಳಲ್ಲಿ "ವಿಶ್ವವೇ ನನ್ನ ಮನೆ; ಮಾನವಜಾತಿಯೇ ನನ್ನ ಕುಟುಂಬ" ಎನ್ನುವ ನಿಜವಾದ ಹಿಂದುವಿನ ಜೀವಿತೋದ್ದೇಶದ ದರ್ಶನವಾಗುತ್ತದೆ.

ಹಾಗಾದರೆ, ಎಲ್ಲರ ಸುಖ ಸಾಧಿಸುವ ಸಮ್ಯಕ್ ಮಾರ್ಗ ಯಾವುದು? ಈ ಪ್ರಶ್ನೆಗೆ ಹಿಂದೂ ಸಂಸ್ಕೃತಿಯ ಉತ್ತರ:- ತ್ಯಾಗ. ಅದುವೆ ಹಿಂದೂ ಸಂಸ್ಕೃತಿಯ ತಿರುಳು, ಸಾರಸರ್ವಸ್ವ. ಅದಕ್ಕಾಗಿಯೇ ನಮ್ಮ ಸಂಸ್ಕೃತಿಯನ್ನು ತ್ಯಾಗಮಯ ಸಂಸ್ಕೃತಿ ಎಂದು ಕರೆಯುತ್ತಾರೆ. ವೇದಗಳಿಂದ ಮೊದಲು ಮಾಡಿ ಎಲ್ಲೆಡೆಯೂ 'ತ್ಯಾಗ' ದ ಆದೇಶ ನೀಡಲಾಗಿದೆ. ತನ್ನ ಭೋಗದಲ್ಲಿಯೇ ಮುಳುಗಿದ ಸ್ವಾರ್ಥಿಮನುಷ್ಯ ಪರಹಿತವನ್ನು ಸಾಧಿಸಲಾರ. ಅದಕ್ಕಾಗಿ ಭೋಗಕ್ಕಿಂತ ತ್ಯಾಗದಲ್ಲಿ, ತಾನೊಬ್ಬನು ತಿನ್ನುವದಕ್ಕಿಂತ ಹಂಚಿ ತಿನ್ನುವದರಲ್ಲಿ, ಸಂಗ್ರಹಕ್ಕಿಂತ ದಾನದಲ್ಲಿ ಸುಖ ಕಾಣಬೇಕೆಂದು ಹಿಂದುವು ಸಾರಿ ಹೇಳಿದ್ದಾನೆ. ಅಂತಹ ಕೆಲ ಹೇಳಿಕೆಗಳು:-

"ಕೇವಲಾಘೋ ಭವತಿ ಕೇವಲಾದೀ" (ಋಗ್ವೇದ)
ತಾನೊಬ್ಬನೇ ತಿನ್ನುವವ ಮಹಾಪಾಪಿ.
"ಶತಹಸ್ತ ಸಮಾಹರ ಸಹಸ್ರಹಸ್ತ ಸಂಕಿರ" (ಅಥರ್ವವೇದ) ನೂರುಕೈಗಳಿಂದ ಸಂಗ್ರಹಿಸು; ಸಾವಿರಕೈಗಳಿಂದ ಹಂಚು.

"ತೇನ ತ್ಯಕ್ತೇನ ಭುಂಜೀಥಾಃ" (ಈಶಾವಾಸ್ಯ)
ಆದ್ದರಿಂದ ತ್ಯಾಗ ಮಾಡಿ ಉಪಭೋಗಿಸು.
"ತ್ಯಾಗೇನೈಕೇ ಅಮೃತತ್ವಮಾನಶು:" (ಕೈವಲ್ಯೋಪನಿಷತ್) ತ್ಯಾಗದಿಂದಲೇ ಮುಕ್ತಿ ಪಡೆದರು.

"ಭುಂಜತೇ ತೇ ತ್ವಘಂ ಪಾಪಂ ಯೇ ಪಚಂತ್ಯಾತ್ಮಕಾರಣಾತ್" (ಗೀತೆ) ತಮ್ಮ ಸಲುವಾಗಿ ಮಾತ್ರ ಅನ್ನ ಬೇಯಿಸುವವರು ಉಣ್ಣುವದು ಕೇವಲ ಪಾಪವನ್ನು.
"ತೈರ್ದತ್ತಾನಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸ:" (ಗೀತೆ)
(ದೇವತೆಗಳು) ಕೊಟ್ಟಿರುವದನ್ನು ಜನರಿಗೆ ಹಂಚದೆ ತಾನೊಬ್ಬನೆ ಉಣ್ಣುವವನು ಕಳ್ಳನೇ ಸರಿ.

"ಯಾವದ್ ಭ್ರಿಯೇತ ಜಠರಂ ತಾವತ್ ಸ್ವತ್ವಂಹಿ ದೇಹಿನಾಮ್। ಅಧಿಕಂ ಯೋಽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ॥" (ಭಾಗವತ)
ಹೊಟ್ಟೆ ತುಂಬಲು ಸಾಲುವಷ್ಟೇ ಮನುಷ್ಯನದು; ಅದಕ್ಕಿಂತ ಹೆಚ್ಚಿನದನ್ನು ತನ್ನದೆಂದು ಹೇಳುವವನು ಕಳ್ಳ, ಶಿಕ್ಷೆಗೆ ಅರ್ಹ. "ತ್ಯಾಗಾಯ ಸಂಭೃತಾರ್ಥಾನಾಮ್" (ರಘುವಂಶ) (ರಘುವಂಶದ ಅರಸರು) ತ್ಯಾಗಕ್ಕಾಗಿಯೇ ಧನಸಂಗ್ರಹ ಮಾಡುತ್ತಿದ್ದರು.

"ಪ್ರಜಾನಾಮೇವ ಭೂತ್ಯರ್ಥಂ ಸ ತಾಭ್ಯೋ ಬಲಿಮಗ್ರಹೀತ್। ಸಹಸ್ರಗುಣಮುತ್ಸ್ರಷ್ಟುಮಾದತ್ತೇ ಹಿ ರಸಂ ರವಿಃ॥" (ರಘುವಂಶ) ಪ್ರಜೆಗಳಲ್ಲಿ ಹಂಚಿ ಅವರನ್ನು ಐಶ್ವರ್ಯವಂತರನ್ನಾಗಿ ಮಾಡಲೆಂದೇ ಅವನು (ದಿಲೀಪನು) ಅವರಿಂದ ಕರ ಸ್ವೀಕರಿಸಿದನು. ಸಾವಿರ ಪಾಲು ಹೆಚ್ಚು ನೀರನ್ನು ಭೂಮಿಯ ಮೇಲೆ ಸುರಿಸಲಿಕ್ಕಲ್ಲವೆ ಸೂರ್ಯನು ನೀರನ್ನು ಹೀರಿಕೊಳ್ಳುವದು?
"ಆದಾನಂ ಹಿ ವಿಸರ್ಗಾಯ ಸತಾಂ ವಾರಿಮುಚಾಮಿವ" (ಸುಭಾಷಿತ) ಸಜ್ಜನರು ಸ್ವೀಕರಿಸುವದು ಮೋಡಗಳಂತೆ ತಿರುಗಿ ಕೊಡಲಿಕ್ಕೆಂದೇ. "ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಂಗೆ" (ಸರ್ವಜ್ಞ)

ಈ ಮಾತುಗಳು ಒಣ ಬಾಯುಬಡಿಕೆಯಾಗಿರಲಿಲ್ಲ. ತ್ಯಾಗವನ್ನು ಪ್ರತ್ಯಕ್ಷ ಜೀವನದಲ್ಲಿ ತಂದು ತ್ಯಾಗಮೂರ್ತಿಗಳಾದವರ ಪರಂಪರೆ ನಮ್ಮ ಇತಿಹಾಸದಲ್ಲಿ ಅನಾದಿಕಾಲದಿಂದ ನಡೆದು ಬಂದಿದೆ. ಭೋಗಜೀವಿಗಿಂತ ತ್ಯಾಗಜೀವಿಗೇ ಹೆಚ್ಚಿನ ಸಮ್ಮಾನ ಈ ನಾಡಿನಲ್ಲಿ. ಅಂತೆಯೇ ತ್ಯಾಗಿಗಳಾದ ಸಂನ್ಯಾಸಿಗಳಿಗೆ ಎಲ್ಲೆಡೆ ಈಗಲೂ ಅಗ್ರಪೂಜೆ. "ಅದಂಡ್ಯೋಽಸ್ಮಿ" ಎಂದು ಸಾರುವ ಚಕ್ರಾಧಿಪತಿಯ ತಲೆಯ ಮೇಲೆ ಧರ್ಮದಂಡದಿಂದ ಬಡಿಯುತ್ತ "ಧರ್ಮದಂಡ್ಯೋಽಸಿ" ಎಂದು ಹೇಳುವ ಉಚ್ಚಾಧಿಕಾರ ಸಂನ್ಯಾಸಿಗಳಿಗಿತ್ತು. ಚಂದ್ರಗುಪ್ತನಿಗಿಂತ ಚಾಣಕ್ಯನಿಗೆ, ಹುಕ್ಕ-ಬುಕ್ಕರಿಗಿಂತ ವಿದ್ಯಾರಣ್ಯರಿಗೆ, ಶಿವಾಜಿಗಿಂತ ಸಮರ್ಥ ರಾಮದಾಸರಿಗೆ, ಆಧುನಿಕ ಕಾಲದಲ್ಲಿ ಸಹ ರಾಜ-ಮಹಾರಾಜರಿಗಿಂತ, ಮಂತ್ರಿ-ಅಧಿಕಾರಿಗಳಿಗಿಂತ ರಾಮಕೃಷ್ಣ, ವಿವೇಕಾನಂದ, ಅರವಿಂದ, ರಮಣಮಹರ್ಷಿ, ಡಾ. ಹೆಡ್ಗೇವಾರ, ಮಹಾತ್ಮಾಗಾಂಧಿ, ಶ್ರೀ ಗುರೂಜಿ ಗೋಳವಲಕರ-

ಇಂತಹರಿಗೆ ಸಮ್ಮಾನದ ಉಚ್ಚಸ್ಥಾನ. ಹಿಂದೂ ಸಂಸ್ಕೃತಿಯು ನಮ್ಮ ರಾಷ್ಟ್ರಧ್ವಜವೆಂದು ಸ್ವೀಕರಿಸಿದ ಭಗವಾಧ್ವಜದ ಬಣ್ಣವು ಸಹ ತ್ಯಾಗದ ಪ್ರತೀಕವಾಗಿದೆ. ಹೀಗೆ ತ್ಯಾಗದ ಭಾವನೆಯೇ ಹಿಂದೂ ಸಂಸ್ಕೃತಿಯ ಮೂಲಾಧಾರ, ಸಾರಸರ್ವಸ್ವ.

ಈ ತ್ಯಾಗ ಯಾರಿಗಾಗಿ? ಎಂಬ ಪ್ರಶ್ನೆ ಏಳುವದು ಸಹಜವೇ. ಮತ್ತು ಇದರ ಉತ್ತರವೂ ಅಷ್ಟೇ ಸಹಜವಾದುದು. ಯಾರಿಗೆ ಅವಶ್ಯಕತೆಯಿದೆಯೋ ಅವರಿಗಾಗಿ ತ್ಯಾಗ ಮಾಡಬೇಕು. ಅವರಿಗೆ ದಾನ ನೀಡಬೇಕು. ಇದ್ದವರಿಗೆ ಕೊಡುವದಲ್ಲ, ಇಲ್ಲದಿದ್ದವರಿಗೆ ಕೊಡಬೇಕು. ಹೊಟ್ಟೆ ತುಂಬಿದವನಿಗೆ ಅನ್ನನೀಡಿ ಪ್ರಯೋಜನವೇನು? ಹಸಿದವನಿಗೆ ಅನ್ನನೀಡಬೇಕು. ಅಂದರೇನೇ ಅದರಿಂದ ಇಚ್ಛಿತ ಲಾಭವಾಗುವದು. ಈ ಮಾತನ್ನು ಸುಭಾಷಿತಕಾರರು ಹೀಗೆ ಹೇಳಿದ್ದಾರೆ:-

ವೃಥಾ ವೃಷ್ಟಿಃ ಸಮುದ್ರೇಷು ವೃಥಾ ತೃಪ್ತಸ್ಯ ಭೋಜನಮ್ ।
ವೃಥಾ ದಾನಂ ಸಮರ್ಥಸ್ಯ ವೃಥಾ ದೀಪೋ ದಿವಾಪಿ ಚ॥

ಅಂದರೆ, ಸಮುದ್ರದಲ್ಲಿ ಸುರಿದ ಮಳೆ, ಹೊಟ್ಟೆ ತುಂಬಿದವನಿಗೆ ನೀಡಿದ ಅನ್ನ, ಸಮರ್ಥನಿಗೆ ಕೊಟ್ಟ ದಾನ, ಹಗಲಿನಲ್ಲಿ ಹಚ್ಚಿದ ದೀಪ-ಎಲ್ಲವೂ ವ್ಯರ್ಥ.

ಆದುದರಿಂದ ಸಮಾಜದಲ್ಲಿರುವ ದೀನ-ದಲಿತರಿಗೆ, ಬಡವರಿಗೆ, ಹೊಟ್ಟೆ-ಬಟ್ಟೆಗಿಲ್ಲದವರಿಗೆ, ಆರ್ತರಿಗೆ, ದುಃಖಿತರಿಗೆ-ಅವರವರ ಅವಶ್ಯಕತೆಗನುಗುಣವಾಗಿ ದಾನ ಮಾಡಬೇಕೆಂಬುದೇ ಹಿಂದೂ ಸಂಸ್ಕೃತಿಯ ಆದೇಶ. ಈಮೂಲಕವೇ ಸಮಾಜದೊಳಗಿನ ಸಮಸ್ತ ಜೀವಿಗಳ ಸಮಷ್ಟಿರೂಪದ ಉನ್ನತಿಯನ್ನು ಹಿಂದೂ ಸಂಸ್ಕೃತಿಯು ಸಾಧಿಸಿ ತೋರಿಸಿದೆ. ಹಾಗೆ ಸಾಧಿಸಲು ತೊಡಗಿಸಿದ ಮಾರ್ಗದ ಕಲ್ಪನೆ ಬರಬೇಕಾದರೆ ಹಿಂದೂ ಸಂಸ್ಕೃತಿಯು ಹೇಳಿದ ಅರಸನ ಲಕ್ಷಣಗಳನ್ನು ತಿಳಿದುಕೊಳ್ಳುವದು ಅಗತ್ಯ. ಮಾನವರು ತಮ್ಮ ತಮ್ಮ ಕರ್ತವ್ಯಗಳನ್ನು ಪೂರೈಸುತ್ತ ಯಾರಿಗೂ ದುಃಖ ನೀಡದೆ ಪರಸ್ಪರ ಸುಖ-ಸಮಾಧಾನಗಳಿಂದ ಬಾಳಬೇಕಾದುದು ಆದರ್ಶ ಸಮಾಜದ ಲಕ್ಷಣ. ಅದನ್ನೇ ಹಿಂದುಗಳು ಸತ್ಯ ಯುಗವೆಂದು ಕರೆದರು. ಆ ಯುಗದಲ್ಲಿ ರಾಜ, ರಾಜ್ಯ, ಅಪರಾಧ, ಶಿಕ್ಷೆ-ಯಾವುದೂ ಇರಲಿಲ್ಲ. "ಧರ್ಮೇಣೈವ ಪ್ರಜಾಃ ಸರ್ವಾ ರಕ್ಷಂತಿ ಸ್ಮ ಪರಸ್ಪರಮ್". ಧರ್ಮ ಪಾಲನೆಯಿಂದಲೇ ಪ್ರಜೆಗಳಲ್ಲಿ ಪರಸ್ಪರರ ರಕ್ಷಣೆ ಆಗುತ್ತಿತ್ತು. ಆದರೆ ಸ್ವಧರ್ಮದ, ತನ್ನ ಕರ್ತವ್ಯದ ಭಾವನೆ ಕಡಿಮೆಯಾದಂತೆ ಮನುಷ್ಯರಲ್ಲಿ ಸಬಲರು ದುರ್ಬಲರನ್ನು ಶ್ರೀಮಂತರು ಬಡವರನ್ನು, ಇದ್ದವರು ಇಲ್ಲದಿದ್ದವರನ್ನು ಪೀಡಿಸುವ, ಶೋಷಣೆಗೈಯುವ, ನುಂಗುವ ಪಶು ಪ್ರವೃತ್ತಿ ಅಥವಾ ಮಾತ್ಸ್ಯನ್ಯಾಯ ಕಾಣಿಸತೊಡಗಿತು. ಆಗ ಈ ಪ್ರವೃತ್ತಿಯನ್ನು ತಡೆಗಟ್ಟಿ ಶೋಷಕ ಸಬಲರಿಂದ ದುರ್ಬಲರನ್ನು ರಕ್ಷಿಸಲು ರಾಜ ಸಂಸ್ಥೆಯ ಉದಯವಾಯಿತು:—

ಅರಾಜಕೇ ಹಿ ಲೋಕೇऽಸ್ಮಿನ್ ಸರ್ವತೋ ವಿದ್ರುತೇ ಭಯಾತ್।
ರಕ್ಷಾರ್ಥಮಸ್ಯ ಸರ್ವಸ್ಯ ರಾಜಾನಮಸೃಜತ್ ಪ್ರಭುಃ॥ (ಮನುಸ್ಮೃತಿ)

"ಅರಾಜಕತೆಯು ತಲೆದೋರಿ ಎಲ್ಲೆಡೆ ಭಯಾತಂಕಗಳು ಹಬ್ಬಿದಾಗ ಎಲ್ಲರ ರಕ್ಷಣೆಗಾಗಿ ದೇವರು ರಾಜನನ್ನು ಹುಟ್ಟಿಸಿದನು." ಆದುದರಿಂದ ಅರಸನ ಪ್ರಥಮ ಕರ್ತವ್ಯ ಪ್ರಜೆಗಳ ರಕ್ಷಣೆ ಮತ್ತು ತನ್ಮೂಲಕ ಅವರಿಗೆ ಸುಖ ನೀಡುವದು. ಪ್ರಜೆಗಳ ರಂಜನೆಯೇ ಅರಸನ ಕರ್ತವ್ಯವೆಂದು 'ರಾಜನ್' ಶಬ್ದದ ವ್ಯುತ್ಪತ್ತಿಯೇ ಸಾರಿ ಹೇಳುತ್ತದೆ:-

ರಂಜಯಿಷ್ಯತಿ ಯಲ್ಲೋಕಮಯಮಾತ್ಮ-
ವಿಚೇಷ್ಟಿತೈಃ।
ಅಥಾಮುಮಾಹೂ ರಾಜಾನಂ ಮನೋರಂಜನಕೈಃ
ಪ್ರಜಾಃ ॥ (ಭಾಗವತ)

"ತನ್ನ ಕೃತಿಗಳಿಂದ ಜನರನ್ನು ಸಂತೋಷಗೊಳಿಸುವವನನ್ನು 'ರಾಜ' ನೆನ್ನುತ್ತಾರೆ." ಮಹಾಭಾರತವೂ ಇದನ್ನೇ ಹೇಳಿದೆ:-

ರಂಜಿತಾಶ್ಚ ಪ್ರಜಾಃ ಸರ್ವಾಃ ತೇನ ರಾಜೇತಿ ಶಬ್ದ್ಯತೇ ॥ (ಶಾಂತಿಪರ್ವ)

"ಎಲ್ಲ ಪ್ರಜೆಗಳನ್ನು ಸಂತೋಷಗೊಳಿಸುವದರಿಂದ 'ರಾಜ' ಎಂದು ಹೇಳುತ್ತಾರೆ." ಕಾಲಿದಾಸನದೂ ಇದೇ ಅಭಿಪ್ರಾಯ:-

ಅನ್ವರ್ಥೋ ರಾಜಾ ಪ್ರಕೃತಿರಂಜನಾತ್ ॥
(ರಘುವಂಶ)